PAPERS LAID ON THE TABLE.

SECRETARY.—The following papers are laid on the Table of the House :

(1) The Mysore Court Fees and Suits Valuation Bill, 1957.
(2) The Mysore Contingency Fund (Amendment) Bill, 1958.
(3) The Madras District Boards (Mysore Amendment) Bill, 1958.
(4) The Mysore Forest Laws (Amendment) Bill, 1958.
(5) The Mysore Tenancy Laws (Amendment) Bill, 1958.

REPORT OF THE MYSORE TENANCY AGRICULTURAL LAND LAWS COMMITTEE.

(Debate continued)

Mr. CHAIRMAN.—Before taking up further debate on the motion that the Report of the Mysore Tenancy Agricultural Land Laws Committee be taken into consideration, I would request the Hon'ble Members to kindly take minimum time possible so that we may close the debate on this consideration motion. In this connection I would like to submit that it is the duty of the Chair to regulate the debate and see that it is conducted impartially. I am very well aware of the fact that the Chair takes no part in the debate itself and does not seek to influence the decision of the House in any way. In order to conduct the debate regularly and impartially, the Chair may have to invite the attention of the Hon'ble Members to relevancy and to points at issue and correct any facts and figures if not correctly stated or quoted. In order to minimise the time, the Chair may have to draw the attention of the Members to points which have been left out or to points which are not relevant to the issues under debate. It has been reported in a paper that the Chair intervened in the debate when the Chair did not do so and I therefore request the Press to report fully so as to explain the context in which certain remarks might have been made by the Chair. The Chair however assures the House that it was never its intention to intervene in the debate much less to influence the decision that is being taken by this Hon'ble House. If by any chance inadvertently I should have made any remark, I hope the Hon'ble House will excuse me. With the best of intentions, to conduct the debate in an impartial way, I might have made certain remarks. Therefore, I request the Hon'ble Members to kindly co-operate with me so that I may give opportunities to every Hon'ble Member and close the debate this evening. If it is necessary, we may even sit till 7 o'clock and close the debate.

Sri M. P. L. SASTRY (Teachers' Constituency).—Generally speaking, the Chair will have the best co-operation in conducting the affairs of the House as has been put by you honestly, wisely and impartially.

Mr. CHAIRMAN.—Now Sri Kanthappa Setty will continue the debate on the motion.

†ಶ್ರೀ ಕೆ. ಕಾಂತಪ್ಪಶೆಟ್ಟಿ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಜಿಲ್ಲಾ ಸಮಿತಿಯ ರಚನೆಯ ಸಂದರ್ಭದಲ್ಲಿ ಒಂದು ವಿಷಯವನ್ನು ನಿಷ್ಪಷ್ಟವಾಗಿ ಹೇಳಿದೆ. ಅದು ಏನೆಂದರೆ, ಭೂ ಶಾಸನವನ್ನು ರಾಜ್ಯದ ಪ್ರ ಪ್ರದೇಶಕ್ಕೂ ಒಂದೇ ರೀತಿಯಲ್ಲಿ ತರುವುದು ವ್ಯವಹಾರ್ಯ ಆಗಲಾರದು ಎಂದು. ಏಕೆಂದರೆ ಪ್ರತಿ ದೇಶದ ಸ್ಥಿತಿಗತಿಗಳು ಭಿನ್ನ ಭಿನ್ನವಾಗಿವೆ. ನ್ಯೂಲ್ಯ ಕರಾವಳಿ ಪ್ರದೇಶದಲ್ಲಿ ಜನನಂಖ್ಯೆ ಬಹಳ ಇದೆ. ಪ್ರಾಯಶಃ ಚದುರ ಮೈಲಿಗೆ 800ರಷ್ಟು ಇರಬಹುದು. ಬೊಂಬಾಯಿ ಮತ್ತು ಹೈದ್ರಾಬಾದಿನಿಂದ ಮೈಸೂರಿಗೆ ಸೇರಿದ ಪ್ರದೇಶಗಳಲ್ಲಿ ಜನನಂಖ್ಯೆ ಕಡಮೆಯಿದೆ. ಅದೇ ರೀತಿಯಲ್ಲಿ ಒಂದು ಜೋಡೆತ್ತಿಗೆ ಉಳುವುದಕ್ಕೆ ಬೇಕಾದ ಪ್ರದೇಶದ ಮಿತಿಯನ್ನು ತೆಗೆದುಕೊಂಡರೆ ಉತ್ತರ ಮತ್ತು ದಕ್ಷಿಣ ಜಿಲ್ಲೆಗಳಲ್ಲಿ ಮೂರು ಎಕರೆ ಅಥವಾ ಎರಡು ಎಕರೆ ಇರುವಾಗ ಮೈಸೂರಿನ ನಾಲ್ಕು-ಎಂಟು ಎಕರೆ ಮತ್ತು ಹೈದ್ರಾಬಾದ್ ಮತ್ತು ಉತ್ತರ ಧಾರವಾಡ, ಬಿಜಾಪುರದ ಕಡೆ 20 ರಿಂದ 30 ಎಕರೆವರೆಗೆ ಇದೆ. ಪರಂಪರಾಗತವಾಗಿ ಭೂ ಭಾಗದ ಸ್ಥಿತಿಯು ಬೇರೆ ಬೇರೆ. ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಾಗಿದೆ. ಆದ್ದರಿಂದ ಎಲ್ಲಾ ಭಾಗಗಳಿಗೂ ಒಂದೇ ರೀತಿಯ ಕಾನೂನನ್ನು ತರಲು ಸಾಧ್ಯ ಏದೆ; ಅದು ವ್ಯವಹಾರ್ಯ ಎಂಬುದು ನನಗೆ ಇನ್ನೂ ಸಂದೇಹಕರವಾಗಿದೆ. ಆದ್ದರಿಂದ ಕಾನೂನನ್ನು ತರುವಾಗ ನಮ್ಮ ಜಿಲ್ಲೆಯಮಟ್ಟಿಗೆ ಹೇಳುವುದಾದರೆ ಪ್ರತ್ಯೇಕವಾದ ಒಂದು ಸೆಕ್ಷನ್ನನ್ನು ಸೇರಿಸಿ ಆ ಜಿಲ್ಲೆಯ ಪರಿಸ್ಥಿತಿಗೆ ಬೇಕಾಗುವ ತಿದ್ದುಪಡಿಗಳನ್ನು ಸೇರಿಸುವುದು ಅತ್ಯಗತ್ಯವಿದೆ. ನಮ್ಮ ಜಿಲ್ಲೆ ಉತ್ತರ ಕನ್ನಡ ಮತ್ತು ಮಲೆನಾಡು. ಈ ಪ್ರದೇಶಗಳಲ್ಲಿ ಒಂದೇ ಪರಿ

† Indicates that the remarks or speeches have not been revised by the member concerned.

ಸ್ಥಿತಿ ಇರುವುದರಿಂದ ಆ ಭಾಗಗಳ ಆವಶ್ಯಕತೆ ಕುರಿತು ಪ್ರತ್ಯೇಕ ಗಮನ ಕೊಡುವುದು ಅತ್ಯಗತ್ಯವೆಂದು ಹೇಳುತ್ತೇನೆ. ಏಕೆಂದರೆ ಜತ್ತಿ ಸಮಿತಿಯವರು ಆ ಭಾಗದ ಪರಿಸ್ಥಿತಿಯನ್ನು ಕುರಿತು, ಅಲ್ಲಿಯ ಭೂಮಿಗಳ ಬಗ್ಗೆ ಹೆಚ್ಚಿನ ಪರಿಶೀಲನೆ ಮಾಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ನಾನು ಇಡಿಯ ರಾಜ್ಯವನ್ನು ಕುರಿತು ಮಾತನಾಡುವಾಗ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆ ಪ್ರದೇಶಗಳ ಕಡೆ ಸರ್ಕಾರದವರು ಪ್ರತ್ಯೇಕ ಗಮನವನ್ನು ಕೆಳೆಯ ಬೇಕಾಗಿದೆ. ಇಂತಹ ಶಾಸನವನ್ನು ಮಾಡುವುದು ಭೂ ಸಂಬಂಧವಾದ, ಭೂ ವ್ಯವಸ್ಥೆಗೆ ಸಂಬಂಧಪಟ್ಟ ಒಂದು ಕಾನೂನನ್ನು ಮಾಡುವುದು ಪ್ಯಾಕ್ಟರಿ ಆಕ್ಟುಗಳನ್ನು ಮಾಡಿದಷ್ಟು ಸುಲಭವಲ್ಲ. ಇದು ಬಹಳ ಸಿಕ್ಕಿನ ಸಮಸ್ಯೆ ಮತ್ತು ಬಹಳ ತಿಕ್ಕಿನ ಪ್ರಶ್ನೆ. ವಿಶೇಷವಾಗಿ ಈ ಕಾಲದಲ್ಲಿ ಮತ್ತು ದೇಶದ ಈಗಿನ ಪರಿಸ್ಥಿತಿಯಲ್ಲಿ ಭೂಮಿಯ ವಿಷಯದಲ್ಲಿ ಸಾಮಾಜಿಕ ನ್ಯಾಯವನ್ನು ಉಂಟುಮಾಡುವುದು. ಜನ ಸಾಮಾನ್ಯರಲ್ಲಿ ಒಂದು ವಿಧವಾದ ತೃಪ್ತಿಯನ್ನು ಉಂಟುಮಾಡುವುದು ಅವಶ್ಯವಾಗಿದೆ. ಅಡಕ್ಕಿಂತಲೂ ಹೆಚ್ಚಾಗಿ ಭೂಮಿಯಲ್ಲಿ ಹೆಚ್ಚಿನ ಉತ್ಪತ್ತಿಯನ್ನು ಮಾಡುವ ವ್ಯವಸ್ಥೆ ಮಾಡುವುದು ಮತ್ತು ಆ ದೃಷ್ಟಿಯಿಂದ ಭೂಮಿಯನ್ನು ಹಂಚುವುದು ಬಹಳ ಅತ್ಯಗತ್ಯವಾಗಿದೆ. ಈ ಕಾಲದಲ್ಲಿ ಭೂಮಿಯನ್ನು ತುಂಡು ತುಂಡಾಗಿ ಹಂಚದಂತೆ, ಫ್ರಾಗ್‌ಮೆಂಟೇಷನ್, ಆಗದಂತೆ ಹೆಚ್ಚು ಗಮನ ಕೊಡುವುದು ಅತ್ಯಗತ್ಯ. ಏಕೆಂದರೆ ಭೂಮಿಯು ಕೇವಲ ತುಂಡು ತುಂಡಾಗಿ ಹೋದರೆ ಅವು ಎಕನಾಮಿಕ್ ಹೋಲ್ಡಿಂಗ್ಸ್ ಆಗುವುದಿಲ್ಲ. ಅವುಗಳಿಂದ ಉತ್ಪತ್ತಿ ಹೆಚ್ಚುವ ಹಾಗೆ ಮಾಡುವುದಕ್ಕೆ ಆಗುವುದಿಲ್ಲ ಎಂಬುದು ಎಲ್ಲರಿಗೂ ತಿಳಿದವಿಷಯ. ಕಾಂಗ್ರೆಸ್ಸಿನ ಮೂಲಭೂತ ತತ್ತ್ವಗಳ ದೃಷ್ಟಿಯಿಂದ ಜತ್ತಿ ಸಮಿತಿಯವರು ಮಾಡಿದ ಸರ್ವೇ ಸಾಧಾರಣವಾದ ಸೂಚನೆಗಳು ಇವು. ಯಾವುದಾದರೂ ಒಂದು ವರ್ಗವನ್ನು ದ್ವೇಷಪೂರ್ವಕವಾಗಿ ನಿರ್ಮೂಲಮಾಡಿ ಇನ್ನೊಂದು ವರ್ಗದ ಹಿತವನ್ನು ಸಾಧಿಸುವುದು ಕಾಂಗ್ರೆಸ್ಸಿನ ತತ್ತ್ವ ಎಂದಿಗೂಯಿಲ್ಲ. ಶ್ರೀ ರಾಘವೇಂದ್ರಚಾರಿಯವರು ಜತ್ತಿ ಸಮಿತಿಯ ವರದಿಯಿಂದ ಬಹಳ ಕಳವಳ ಉಂಟಾಗಿದೆ ಎಂದೂ ನಮ್ಮ ತಳಮಳ ಅವರ ಸಂತೋಷವೆಂದು ಹೇಳಿದರು. ಆದರೆ ಅದು ನಮ್ಮ ತತ್ತ್ವವಲ್ಲ. ಸಮಾಜದ ಯಾವ ಒಂದು ಅಂಗದಲ್ಲೂ ಯಾವ ರೀತಿಯ ಒಂದು ವಿಘ್ನವನ್ನು ಉಂಟುಮಾಡುವುದು, ಕಳವಳ ಉಂಟುಮಾಡುವುದು ಎಂದಿಗೂ ಕಾಂಗ್ರೆಸ್ಸಿನ ತತ್ತ್ವವಲ್ಲ. ಕಾಂಗ್ರೆಸ್ಸಿನ ತತ್ತ್ವ ಎಲ್ಲಾ ಅಂಗಗಳಿಗೂ ನರಿಯಾದ ನ್ಯಾಯವನ್ನುಂಟುಮಾಡುವುದು, ನ್ಯಾಯದೊರೆಯುವಂತೆ ವ್ಯವಸ್ಥೆಮಾಡುವುದು. ಇದನ್ನು ಏಕೆ ಒತ್ತಿ ಹೇಳುತ್ತಿದ್ದೇನೆಂದರೆ ನಮ್ಮ ಜಿಲ್ಲೆಯಲ್ಲಿ ಜತ್ತಿ ಸಮಿತಿಯ ವರದಿಯಿಂದ ಅಷ್ಟೊಂದು ದೊಡ್ಡ ತಳಮಳ ಎದ್ದಿದೆ. ಮಾನ್ಯ ಮಂತ್ರಿಗಳಾದ ಶ್ರೀ ವೈಕುಂಠ ಬಾಳಿಗರವರಿಗೆ ಈ ವಿಷಯ ತಿಳಿದಿದೆ. ಮಂಗಳೂರಿನವರು ಬಹಳ ಮಂದಿ ಇಲ್ಲಿಗೆ ಬಂದು ನೀವು ಈ ರೀತಿ ಭಾಷಣ ಕೊಡಬೇಕು, ಈ ರೀತಿ ಭಾಷಣ ಕೊಡಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಒಂದು ಸಮ್ಮೇಳನ ಕೂಡಾ ನಡೆದಿದೆ. ದಕ್ಷಿಣ ಹಿಂದೂ ಸ್ಥಾನದ ರಾಜ್ಯಗಳ ಭೂ ಮಾಲಿಕರು ಮತ್ತು ಕೃಷಿಗಾರರು ಸೇರಿಕೊಂಡು ಒಂದು ಪರಿಷತ್ತನ್ನು ನಡೆಸಿದ್ದಾರೆ. ಒಂದು ದೊಡ್ಡ ಚಳವಳಿಯನ್ನೇ ನಡೆಸಿದ್ದಾರೆ. ಎಲ್ಲಾ ಕಡೆಯಲ್ಲೂ ಕಾಂಗ್ರೆಸ್ಸಿನಲ್ಲಿ ದುಡಿದಂಥ ಮತ್ತು ದೇಶಕ್ಕಾಗಿ ತ್ಯಾಗಮಾಡಿದಂಥ ಜನರು ಇದರಲ್ಲಿ ಸೇರಿರುತ್ತಾರೆ. ಅವರು ಕೊಡುವ ಅಭಿಪ್ರಾಯಗಳನ್ನೆಲ್ಲಾ ನಾವು ಒಪ್ಪಿಕೊಳ್ಳುವುದಿಲ್ಲ. ಅದು ಸರಿಯೆಂದು ಹೇಳುವುದಿಲ್ಲ. ನಾನು ಅದರಲ್ಲಿ ಅಪ್ರತ್ಯಕ್ಷವಾಗಿ ಭಾಗವಹಿಸಿದುದಕ್ಕೆ ನಿಜವಾಗಿ ವಿಷಾದ ಪಡುತ್ತೇನೆ. ಏಕೆಂದರೆ ನಾನು ನೋಡಿದ ಪ್ರಕಾರ ಕಾಂಗ್ರೆಸ್ಸನ್ನು ದ್ವೇಷಿಸುವುದಕ್ಕೆ ಕಾಂಗ್ರೆಸ್ಸನ್ನು ಕುರಿತು ಒಂದು ರೀತಿ ದ್ವೇಷಾಸೂಯೆ ಪ್ರಚಾರ ಮಾಡುವುದಕ್ಕೆ ಅದನ್ನು ನಿಲ್ವಾಣವನ್ನಾಗಿ ಉಪಯೋಗಿಸಿದ್ದಾರೆ ಎಂಬುದು ಬಹಳ ವಿಷಾದಕರ.

ನಿಜವಾಗಿಯೂ ಭೂಮಾಲೀಕರ ಹಿತರಕ್ಷಣೆಗೆ ಕಾಂಗ್ರೆಸ್ಸು ಯಾವಾಗಲೂ ತಯಾರಾಗಿದೆ. ಅವರು ಉತ್ಪನ್ನ ಹೆಚ್ಚಿಸುವುದಾದರೆ ಮತ್ತು ಗೇಣಿದಾರರನ್ನು ಜಮೀನಿನಿಂದ ಯಾವ ರೀತಿಯಿಂದಲೂ ಬಿಡಿಸುವುದಿಲ್ಲವೆಂದು ಆಗುವುದಾದರೆ, ಅದರಿಂದ ದೇಶದ ಹಿತ ಮತ್ತು ಆರ್ಥಿಕಸ್ಥಿತಿ ಉತ್ತಮ ಆಗುವುದಾದರೆ, ಅವರನ್ನು ನಿರ್ಮೂಲಮಾಡಲೇಬೇಕೆಂದು ಹೇಳುವುದು ಯಾವ ಧರ್ಮವೂ ಅಲ್ಲ. ಪರಂಪರೆಯಾಗಿ ಬಂದಿರುವ ಹಕ್ಕುಗಳನ್ನು ಕೇಳುವುದಕ್ಕೆ ಸಾಧ್ಯವಿಲ್ಲ. ಇದು ಮೂಲ ಭೂತವಾದ ಹಕ್ಕು ನಮ್ಮ ಕಾಂಗ್ರೆಸ್ಸು ಅವರನ್ನು ನಿರ್ಮೂಲಮಾಡಲಿಕ್ಕೆ ಹೊರಟಿಲ್ಲ. "ಬ್ರಿಟೀಷರಾಯನ ಕಾಲದಿಂದ ಬಂದ ಭೂಮಾಲೀಕರ ಹಕ್ಕುಗಳನ್ನು ನಿರ್ಮೂಲ ಮಾಡಲಿಕ್ಕೆ ಹೊರಟಿದ್ದೇವೆಂದು ಹೇಳಿದರೆ ಅದು ಸರಿಯಾದ ಮಾರ್ಗವಾಗುವುದಿಲ್ಲ". ಅದು ಕಾಂಗ್ರೆಸ್ಸನ್ನು ಕುರಿತು ಒಂದು ಅಪಪ್ರಚಾರ ಮಾಡಿದಂತಾಗುತ್ತದೆ. ಅಲ್ಲದೆ ಅದು ಕಾಂಗ್ರೆಸ್ಸಿನ ಮುಖ್ಯವಾದ ಕಾರ್ಯಕ್ರಮಕ್ಕನುಗುಣವಾಗಿ ಇರುವುದಿಲ್ಲ. ಇದು ಹೇಗಾದರೂ ಇರಲಿ, ನರ್ವೇ ಸಾಮಾನ್ಯವಾಗಿ ಈ ಜತ್ತಿ ಸಮಿತಿಯ ಸೂಚನೆಗಳನ್ನು ಸ್ವಾಗತಿಸಬೇಕಾಗಿದೆ. ಬೊಂಬಾಯಿನಲ್ಲಿ ಇದು ಮೊದಲೇ ಜಾರಿಯಲ್ಲಿತ್ತು. ಹೈದರಾಬಾದಿನಲ್ಲಿಯೂ ಯಾವ ರೀತಿಯಾದ ಅತೃಪ್ತಿಯೂ ಇಲ್ಲದೆ ಜಾರಿಯಲ್ಲಿತ್ತು. ಮೈಸೂರು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಭಾಗಗಳಲ್ಲಿ ಇದು ಒಂದು ರೀತಿಯ ತಳಮಳವನ್ನು ಉಂಟುಮಾಡಿದೆ. ಜತ್ತಿ ಸಮಿತಿಯನ್ನು ನೇಮಕ ಮಾಡಿದಾಗಲೇ ಈ ವಿಷಯಗಳನೆಲ್ಲ ಸರಿಯಾಗಿ ಆಲೋಚನೆ ಮಾಡಿದ್ದರೆ ಚೆನ್ನಾಗಿತ್ತು. ಮೈಸೂರು ಮತ್ತು ದಕ್ಷಿಣ ಜಿಲ್ಲೆಯ ಪರಿಸ್ಥಿತಿಯನ್ನು ವರದಿಯಲ್ಲಿ ಪ್ರಸ್ತಾಪಿಸಿರುವುದು ಅಕಾಲಿಕ ಎಂದು ಹೇಳಿದರೂ ತಪ್ಪಾಗಲಾರದು. ಈ ಸಮಿತಿಯು ಬೊಂಬಾಯಿ ಮತ್ತು ಹೈದರಾಬಾದು ಈ ಕಡೆಗಳಲ್ಲಿ ಸುತ್ತಿ ಅಲ್ಲಿಯ ಪರಿಸ್ಥಿತಿಗಳನ್ನು ತಿಳಿದ ಕೊಂಡು ಬಂದಿದೆ. ಹಾಗೆಯೇ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೂ ಹೋಗಿದೆ. ಈ ಸಂದರ್ಭದಲ್ಲಿ ಆಯಾ ಸ್ಥಳಗಳಿಗೆ ಹೋದಾಗ ಒಕ್ಕಲು ಸರಿಯಾಗಿ ಆಗುತ್ತಿದೆಯೇ ಎಂಬುದನ್ನೆಲ್ಲ ಸ್ವಲ್ಪ ಪರಿಶೀಲನೆಮಾಡಿ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನಮ್ಮ ಅಭಿಪ್ರಾಯವಾಗಿದೆ. ಈಗ ಈ ಜತ್ತಿ ಸಮಿತಿಯ ವರದಿಯು ಎಲ್ಲ ಕಡೆಗಳಿಗೂ ಅನ್ವಯಿಸುವ ರೀತಿಯಲ್ಲಿ ಬಂದಿರುವುದರಿಂದ ಇನ್ನು ವಿಳಂಬ ಮಾಡದೆ ಒಂದು ತೃಪ್ತಿಕರವಾದ ಭೂ ಶಾಸನವನ್ನು ತರುವುದು ಅತ್ಯಗತ್ಯವಾಗಿದೆ.

ನಾನು ಒಂದು ಪತ್ರಿಕೆಯಲ್ಲಿ ಈ ವಿಚಾರವಾಗಿ ಬರೆದಿರುವುದನ್ನು ಓದಿದ್ದೆ. ಆ ಪತ್ರಿಕೆಯಲ್ಲಿ, ಬೊಂಬಾಯಿನ ಒಕ್ಕಲು ಮನೂದಯು ಅಲ್ಲಿ ಉತ್ಪನ್ನವನ್ನು ಹೆಚ್ಚಿಸಲು ಕಾರಣವಾಗಿಲ್ಲ ಮತ್ತು ಹಿಡುವಳಿಯ ಮಿತಿಯನ್ನು ಸರಿಯಾಗಿ ಕೊಟ್ಟಿಲ್ಲ, ಹಿಂದೆ ಕಂಟ್ರೋಲು

(ಶ್ರೀ ಕೆ. ಕಾಂತಪ್ಪಶೆಟ್ಟಿ).

ಹಾಕಿದ್ದಾಗ ಹೇಗೆ ಆಹಾರವಸ್ತುಗಳನ್ನು ಹೆಚ್ಚಿಗೆ ಬೆಳೆಯಲಿಲ್ಲವೋ, ಅದೇ ರೀತಿಯಲ್ಲಿ ಹಿಡುವಳಿಗೆ ಒಂದು ಮಿತಿ ಗೊತ್ತುಮಾಡಿದ್ದರಿಂದ, ಹೆಚ್ಚಿಗೆ ಅನುಕೂಲವಿಲ್ಲದ ಭೂಮಿಯನ್ನು ಸಾಗುವಳಿ ಮಾಡಲಿಲ್ಲ ಎಂದು ಹೇಳಿದೆ. ಹಿಡುವಳಿಯನ್ನು ತುಂಡು ತುಂಡಾಗಿ ಮಾಡಬಾರದು, ಭೂಮಿಯಲ್ಲಿ ಕೆಲಸಮಾಡತಕ್ಕವರಿಗೆ ಭೂಮಿ ಹೋಗಬೇಕು, ಎಲ್ಲ ಕೈಗಾರಿಕೆಗಳೂ ರಾಷ್ಟ್ರೀಕರಣವಾಗಬೇಕು, ಇವೆಲ್ಲ ಮೂಲಭೂತವಾದ ತತ್ವಗಳು. ಒಮ್ಮೆಲೇ ಇವನ್ನೆಲ್ಲ ಜಾರಿಗೆ ತರಲಕ್ಕೆ ಸಾಧ್ಯವಿಲ್ಲ. ಕ್ರಮ ಕ್ರಮವಾಗಿ ಇಂತಹ ವಿಷಯಗಳಲ್ಲಿ ನಾವು ಮುಂದೆ ಹೋಗಬೇಕು. ಈ ಭೂ ಒಕ್ಕಲುತನದ ಶಾಸನವನ್ನು ತರುವ ವಿಷಯದಲ್ಲಿ ಆಕ್ಷೇಪಣೆಯಿಲ್ಲ. ನಾನು ಹೀಗೆ ಮಾತನಾಡುವಾಗ ಭೂ ಮಾಲೀಕರ ಪರವಾಗಿ ಮಾತನಾಡುತ್ತಿದ್ದೇನೆಂದು ಯಾರೂ ಭಾವಿಸಲಾರರು ಎಂದು ತಿಳಿದಿದ್ದೇನೆ. ನನಗೆ ಈ ಒಕ್ಕಲುತನದ ಮನೂದೆಯ ವಿಚಾರವಾಗಿ ಮೈಸೂರು, ಹೈದರಾಬಾದು ಮತ್ತು ಬೊಂಬಾಯಿ ಭಾಗಗಳ ಹೆಚ್ಚಿನ ಮಾಹಿತಿ ಇಲ್ಲ. ನಮ್ಮ ಜಿಲ್ಲೆಯ ವಿಚಾರವಾಗಿ ಮಾತ್ರ ಇಲ್ಲಿ ಹೇಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಸರ್ವೇ ಸಾಧಾರಣವಾಗಿ ಸಾಗುವಳಿ ಮಾಡುವವರ ಸಂಖ್ಯೆ ಶೇಕಡ 36–37ರಷ್ಟಿದೆ. ಸ್ವಂತವಾಗಿ ಸಾಗುವಳಿ ಮಾಡುತ್ತಿರುವವರ ಸಂಖ್ಯೆಯೇ ಹೆಚ್ಚಾಗಿದೆ. ಅಲ್ಲಿ ದೊಡ್ಡ ದೊಡ್ಡ ಒಕ್ಕಲುಮಾಡುವ ಭೂಮಿಗಳಿಲ್ಲ. ವಿಶಾಲವಾದ ಪ್ರದೇಶ ಎಂದರೆ ಮೂರುಎಕರೆ, ಹೆಚ್ಚು ಎಂದರೆ ಐದು ಎಕರೆಯಷ್ಟು ಭೂಮಿಯನ್ನು ಸಾಗು ಮಾಡುತ್ತಿದ್ದಾರೆ. ಹೋಂ ಫಾರಮ್ಮಿನ ರೀತಿಯಲ್ಲಿ ಎಲ್ಲರೂ ಸಹಕರಿಸಿ ಸಾಗುಮಾಡುತ್ತಾರೆ ಈ ಪದ್ಧತಿಯಂತೆ ಸಾಗುವಳಿ ಮಾಡುವ ಕೆಲಸವು ನಮ್ಮ ಜಿಲ್ಲೆಯಲ್ಲಿ ಚೆನ್ನಾಗಿ ನಡೆಯುತ್ತಿದೆ. ಹತ್ತಿಪ್ಪತ್ತು ಎಕರೆಗಳಷ್ಟು ಭೂಮಿಗೆ ಒಬ್ಬ ದಣಿ ಇರುತ್ತಾನೆ. ಇಂತಹ ಭೂಮಿಯನ್ನು ಹೋಂ ಫಾರಂ ಪದ್ಧತಿಯಲ್ಲಿ ಸಾಗು ಮಾಡಿಕೊಂಡು ಆ ದಣಿಗೆ ಅನುಕೂಲವಾದ ಗೇಣಿಯನ್ನು ಕೊಟ್ಟುಕೊಂಡುಬರುವ ವ್ಯವಸ್ಥೆ ನಮ್ಮ ಜಿಲ್ಲೆಯಲ್ಲಿ ಹೆಚ್ಚಾಗಿದೆ. ಅನುಕೂಲವಾದ ಗೇಣಿ ಎಷ್ಟು ಎನ್ನುವುದನ್ನು ನಮ್ಮ ಜಿಲ್ಲೆಯ ಮಟ್ಟಿಗೆ ಹೇಳಲು ಈ ಒಕ್ಕಲುತನದ ಕಾಯಿದೆ ನಮ್ಮಲ್ಲಿ ಜಾರಿಗೆ ಬಂದಿಲ್ಲ. ಮದರಾಸು ಸರಕಾರದವರೇನೋ ಶೇಕಡ ನಲವತ್ತರಷ್ಟು ಗೇಣಿ ನ್ಯಾಯವಾದುದು ಎಂದು ನಿಶ್ಚಯ ಮಾಡಿದ್ದಾರೆ. ಆದರೆ ಸರ್ವೇ ಸಾಮಾನ್ಯವಾಗಿ ಈ ಜಿತ್ತಿ ಸಮಿತಿಯಲ್ಲಿ ನಾಲ್ಕನೆಯ ಒಂದು ಭಾಗ ಗೇಣಿ ಇರಬೇಕೆಂದು ಹೇಳಿದ್ದಾರೆ. ಎಲ್ಲ ಕಾಂಗ್ರೆಸ್ಸಿಗರೂ, ಇತರರೂ ನಾಲ್ಕನೆಯ ಒಂದು ಭಾಗ ಮಾಡಿರುವುದು ಸರಿಯಾದುದು ಎಂದು ಹೇಳಿದರು. ಆದರೆ ನಮ್ಮ ಜಿಲ್ಲೆಯಮಟ್ಟಿಗೆ ಹೇಳುವುದಾದರೆ, ನಾಲ್ಕನೆಯ ಒಂದು ಪಾಲು ಎಂದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಇಲ್ಲಿ ಸಾಗುಮಾಡುವವರು ತುಂಡು ತುಂಡಾಗಿರುವ ನಣ್ಣ ನಣ್ಣ ಪರಿಮಿತಿಯುಳ್ಳ ಭೂಮಿಯನ್ನು ಸಾಗುಮಾಡುತ್ತಿದ್ದಾರೆ. ಹತ್ತಿಪ್ಪತ್ತು ಎಕರೆಯುಳ್ಳವರಿಗೆ ಇದರಿಂದ ಅಡ್ಡಿಯೇನಿಲ್ಲ. ಆದರೆ ಈ ಭೂಮಿಯನ್ನೇ ನಂಬಿಕೊಂಡಿರುವ ನಣ್ಣ ನಣ್ಣ ಹಿಡುವಳಿದಾರರಿಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ, ಕೆಲವು ವರ್ಷಗಳವರೆಗೆ ಎಂದರೆ ಸುಮಾರು ಐದು-ಹತ್ತು ವರ್ಷಗಳವರೆಗೆ ಈ ಗೇಣಿಯ ಪರಿಮಿತಿಯನ್ನು ಮೂರನೆಯ ಒಂದು ಭಾಗ ಗೇಣಿ ಎಂದು ಸೂಚನೆಮಾಡಿ, ಆಮೇಲೆ ನಾಲ್ಕನೆಯ ಒಂದು ಭಾಗ ಎಂದು ಮಾಡಬೇಕೆಂದು ನನ್ನ ಅಭಿಪ್ರಾಯ. ಈ ಅಭಿಪ್ರಾಯಕ್ಕೆ ನಮ್ಮ ಜಿಲ್ಲೆಯಲ್ಲಿ ಬಹುಮಟ್ಟಿಗೆ ಹೆಚ್ಚಿನ ಒಮ್ಮತವಿದೆ.

ಇದಾದಮೇಲೆ ನಮ್ಮ ಕಡೆ ತೆಂಗು ಮತ್ತು ಅಡಕೆ ತೋಟಗಳು ಜಾಸ್ತಿಯಾಗಿರುತ್ತವೆ. ಕರಾವಳಿ ಪ್ರದೇಶವನ್ನು ಬಿಟ್ಟರೆ ಒಳಪ್ರದೇಶದಲ್ಲಿ ಅಡಕೆ ತೋಟಗಳು ಜಾಸ್ತಿ ಇವೆ. ಆದರೆ ಈ ತೋಟಗಳ ವಿಷಯದಲ್ಲಿ ಎಷ್ಟು ವಿಸ್ತೀರ್ಣದ ಭೂಮಿಯಿರಬಹುದೆಂಬ ವಿಚಾರದಲ್ಲಿ ಒಂದು ಮಿತಿಯನ್ನು ಹಾಕುವುದು ಅಷ್ಟು ಅಗತ್ಯವಾಗಿದೆಯೇ ಎಂಬುದು ಒಂದು ಚರ್ಚಾಸ್ಪದವಾದಂಥ ವಿಷಯ. ಅಡಕೆ—ತೆಂಗಿನ ತೋಟಗಳ ವ್ಯವಸಾಯ ಇತರೇ ಟೀ ತೋಟಗಳಂತೆ ಇರುವುದಿಲ್ಲ. ಇವುಗಳ ವ್ಯವಸಾಯ ಬಹಳ ಕಷ್ಟ. ಒಂದು ಎಕರೆಯಲ್ಲಿ ಈ ತೋಟಗಳನ್ನು ಬೆಳೆಸಲು ಐದಾರು ಸಾವಿರ ರೂಪಾಯಿಗಳನ್ನು ಖರ್ಚುಮಾಡಬೇಕಾಗಿರುತ್ತದೆ. ಮೇಲಾಗಿ ಪ್ರತಿ ವರ್ಷವೂ ಈ ತೋಟಗಳ ಆರೈಕೆ ಮತ್ತು ಇವುಗಳಿಗೆ ಗೊಬ್ಬರ–ಗೋದು ಹಾಕಿಕೊಂಡು ಇವುಗಳ ಮೇಲ್ವಿಚಾರಣೆ ನೋಡಿಕೊಳ್ಳಲು ಪ್ರತಿದಿವಸವೂ ಅಲ್ಲಿ ಒಬ್ಬಬ್ಬರ ಅವಶ್ಯಕತೆ ಇದ್ದೇ ಇರುತ್ತದೆ. ಹೀಗೆಲ್ಲ ಇರುವುದರಿಂದ ಈ ತೋಟಗಳ ವಿಚಾರದಲ್ಲಿ ಆ ಒಂದು ಹಿಡುವಳಿಯ ಮಿತಿಯನ್ನು ಹಾಕುವುದರಿಂದ ಅಷ್ಟೇನೂ ಹೆಚ್ಚಿನ ಪ್ರಯೋಜನವಾಗುವುದಿಲ್ಲವೆಂದು ನನಗನಿಸುತ್ತಿದೆ. ಈಗಾಗಲೇ ನಮ್ಮ ಕಡೆಯ ಜನರು ಇಂಥ ಒಂದು ಜಿತ್ತಿ ಸಮಿತಿಯ ವರದಿಯಮೇಲೆ ಭೂಮಿಗಳೆಲ್ಲ ಹೋಗಿಬಿಡುತ್ತವೆಂಬ ಕಾರಣದಿಂದ ಧಾರಾಳವಾಗಿ ಹಣವನ್ನು ಈ ವ್ಯವಸಾಯದಮೇಲೆ ಹಾಕುತ್ತಿಲ್ಲ. ಈ ಬಗ್ಗೆ ಅವರ ಪ್ರಯತ್ನಗಳನ್ನೆಲ್ಲ ನಿಲ್ಲಿಸಿಬಿಟ್ಟಿದ್ದಾರೆ. ಈ ಹಿಂದೆ ಬೊಂಬಾಯಿಯ ಸರ್ಕಾರದವರು ಇಂಥದೇ ಒಂದು ಶಾಸನವನ್ನು ಜಾರಿಗೆ ತರಬೇಕೆಂದು ಉದ್ದೇಶಿಸಿದಾಗ ಅವರು ಈ ತೋಟದ ಜಮೀನುಗಳಿಗೆ ಎಂದರೆ ಹಾಲ ಇದ್ದಂಥ ಬಾಗಾಯಿತು ಆಸ್ತಿಗಳ ವಿಸ್ತೀರ್ಣದ ಬಗ್ಗೆ ಏನೊಂದು ಮಿತಿಯನ್ನೂ ಹಾಕದೆ, ಮುಂದೆ ಅಕ್ವಯಿರ್ ಮಾಡಿಕೊಂಡು ಹಂಚಿಕೆಮಾಡತಕ್ಕ ಭೂಮಿಗಳ ವಿಚಾರದಲ್ಲಿ ಇಂಥಾ ಒಂದು ಮಿತಿಯನ್ನು ಅವರು ಹಾಕಿದ್ದರು. ಅದೇ ರೀತಿ ನಮ್ಮ ಜಿಲ್ಲೆಯ ಮಟ್ಟಿಗಾದರೂ ಈ ಬಗ್ಗೆ ಈಗಿರತಕ್ಕ ಹಿಡುವಳಿಗಳಿಗೆ ಒಂಯ ಮಿತಿಯನ್ನು ಹಾಕಬಾರದೆಂದು ಸೂಚಿಸುತ್ತೇನೆ. ಇಷ್ಟೇ ಅಲ್ಲ, ಮುಂದಿನ ಹಿಡುವಳಿಗಳ ಬಗ್ಗೆ ಒಂದು ಮಿತಿ ಹಾಕಬೇಕೆಂಬ ವಿಚಾರದಲ್ಲಿ ನನಗಿನ್ನೂ ಸಂಶಯ ವಿದ್ದೇ ಇದೆ. ಈಗ ಹಾಲ ಇರತಕ್ಕ ಹಿಡುವಳಿಗಳಿಗೆ ಈ ಸಮಿತಿಯವರ ನಲಹೆಯ ಪ್ರಕಾರ ಒಂದು ಮಿತಿಯನ್ನು ಹಾಕುವುದಾದರೆ ಇದರಿಂದ ಒಕ್ಕಲಿಗೆ ಬಹಳ ತೊಂದರೆಯಾಗುತ್ತದೆ. ಉನ್ನತಸ್ಥಿತಿಯಲ್ಲಿರತಕ್ಕವರೆಲ್ಲ ಭೂ ಮಾಲೀಕರೇ. ಇವರು ತಮ್ಮ ಹಿಡುವಳಿಯಲ್ಲಿರತಕ್ಕ ಭೂಮಿಯನ್ನು ತಮ್ಮ ತಮ್ಮೊಳಗೇ ಹಂಚಿಕೆ ಮಾಡಿಕೊಳ್ಳಲು ಅವಕಾಶವಾಗುತ್ತದೆ. ಹೀಗಾಗಿ ಈ ಧನಿಕ ಆಸ್ತಿವಂತರಮೇಲೆ ಕೋರ್ಟಿಗೆ ಹೋಗಿ ಕಾನೂನುಗಳ ರಕ್ಷಣೆಪಡೆಯಲು ಹೆಚ್ಚಿನ ಖರ್ಚು ಪೆಚ್ಚುಗಳಿಗೆ ಅವಕಾಶವಿದೆ. ಆದುದರಿಂದ ಈ ಕಾನೂನುಗಳಿಂದ ಬಡವನಾದವನಿಗೆ ಯಾವ ಒಂದು ಪ್ರಯೋಜನವಾಗಲೀ ರಕ್ಷಣೆಯಾಗಲೀ ದೊರೆಯಲಾರದೆಂಬುದು ನನ್ನ ಅಭಿಪ್ರಾಯ. ಈಗಿನ ಕಾಲದಲ್ಲಿ ಒಂದು–ಎರಡು ಜೊತೆ ಎತ್ತುಗಳನ್ನಿಟ್ಟುಕ್ಕೊಂಡು ಸ್ವಂತ ಸಾಗುವಳಿ ಮಾಡತಕ್ಕಂಥ ಒಕ್ಕಲುಗಳೇನೂ ಅಷ್ಟು ಹೆಚ್ಚಾಗಿರುವುದಿಲ್ಲ. ಗೇಣಿ ಸಾಗಿಗೆ ಜಮೀನು ಕೊಟ್ಟಿರತಕ್ಕ ನಿದರ್ಶನಗಳು

ಹೆಚ್ಚಾಗಿವೆ. ಇಂಥ ಸಣ್ಣ-ಪುಟ್ಟ ಹಿಡುವಳಿಗಳಲ್ಲಿ ಅರ್ಧ ಜಮೀನು ಮಾಲೀಕನಿಗೆ ಅರ್ಧ ಜಮೀನು ರೈತನಿಗೆಂದು ಹೇಳಿದರೆ ಆ ಅರ್ಧ ಜಮೀನಿನಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಆ ರೀತಿ ಅರ್ಧ ಜಮೀನನ್ನು ಪಡೆಯುವುದಕ್ಕೆ ಬದಲಾಗಿ ನಮಗೇ ನಾದರೂ ಒಂದು ಪರಿಹಾರ ಕೊಟ್ಟುಬಿಡಿ, ನಾವೆಲ್ಲಾದರೂ ಊರುಬಿಟ್ಟು ಹೊರಟುಹೋಗಿಬಿಡುತ್ತೇವೆ ಎಂಬುದಾಗಿ ಹೇಳಬಹುದು. ನಮ್ಮ ಜಿಲ್ಲೆಯ ವಿಷಯ ಹೀಗೆಲ್ಲ ಬಹಳ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದೆ. ಆದರೆ ಏನೇ ಆಗಲಿ ಇದರಲ್ಲಿ ಭೂಮಾಲೀಕರಿಗಿಂತ ಒಕ್ಕಲಿಗೇ ಹೆಚ್ಚು ಬಾಧಕವಾಗುತ್ತದೆಂದು ನನಗೆ ಅನಿಸುತ್ತಿದೆ. ಈ ದಿವಸ ಈ ಅನೇಕ ಕಾರಣಗಳಿಂದ ಭೂಮಾಲೀಕರಿಗೂ ಒಕ್ಕಲಿಗೂ ಇರಬೇಕಾಗಿದ್ದಂಥ ಒಂದು ಸ್ನೇಹದ ಸಂಬಂಧ ಕೆಟ್ಟುಹೋಗಿದೆ. ಎಲ್ಲಿ ನೋಡಿದರೂ ವಿಷವಾತಾವರಣ ಮೂಡುತ್ತಿರುವುದು ಕಂಡು ಬರುತ್ತಿದೆ. ಆದುದರಿಂದ ಸರ್ಕಾರದವರು ಈ ವಿಚಾರದಲ್ಲಿ ಕೂಲಂಕಷವಾಗಿಯೂ ಆಳವಾಗಿಯೂ ಆಲೋಚನೆಮಾಡಿ, ವಿಚಾರಮಾಡಿನೋಡಿ ಭೂಮಿ ಹಿಡುವಳಿಗಳ ಬಗ್ಗೆ ಒಂದು ಮಿತಿಯನ್ನು ಹಾಕುವುದು ಯೋಗ್ಯವೇ. ಉಚಿತವೇ ಅನ್ನುವುದನ್ನು, ತೀರ್ಮಾನ ಮಾಡಬೇಕಾಗಿದೆ. ಆದರೆ ಉಳತಕ್ಕ ಮನುಷ್ಯನಿಗೆ ಎಲ್ಲಿ ಭೂಮಿ ಇಲ್ಲವೋ ಅಲ್ಲಿ ಆತನಿಗೆ ಭೂಮಿ ಕೊಡ ಬಾರದೆಂದು ಯಾರೂ ಹೇಳುವುದಿಲ್ಲ. ಆದರೆ ಅನೇಕರು ಈ ಒಂದು ಸೋಗಿನಲ್ಲಿ ಭೂಮಿಯನ್ನು ಒಂದು ರಿಯಾಯಿತಿ ದರದಲ್ಲಿ ಪಡೆದು ಅದನ್ನು ಸಾವಿರಾರು ರೂಪಾಯಿಗಳ ಫಾಯಿದೆಗೆ ಮಾರಿಕೊಳ್ಳಬೇಕೆಂಬ ಉದ್ದೇಶದಿಂದಲೇ ಭೂಮಿಯನ್ನು ತೆಗೆದುಕೊಳ್ಳುತ್ತಾರೆ. ಆದುದರಿಂದ ಭೂಮಿಯಿಲ್ಲದವರಿಗೆ ಭೂಮಿ ದೊರೆಯಬೇಕೆಂದು ಹೇಳುವುದರಲ್ಲೇನೂ ಅಂಥ ಪ್ರಯೋಜನವಿಲ್ಲ. ಆದರೆ ಇನ್ನು ಮುಂದಕ್ಕೆ ಭೂಮಿ ತೀರಾ ತುಂಡು ತುಂಡುಗಳಾಗಿ ಹಂಚಿಹೋಗದಂತಕ್ಕದ್ದನ್ನು ತಡೆಗಟ್ಟಲು—ಈ ವ್ಯವಸಾಯವನ್ನು ಒಂದು ಸಹಕಾರಪದ್ಧತಿಯ ಮೇಲೆ ನಡೆಸುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ. ಇದು ಬಹಳ ಅಗತ್ಯವೆಂದು ತೋರುತ್ತದೆ. ಆದರೆ ಈ ಹಿಂದೆ ಮಾತನಾಡಿದ ಸದಸ್ಯರ ಹೈಕೆ ಯಾರೋ ಒಬ್ಬಬ್ಬರು ಈ ಸಹಕಾರ ಪದ್ಧತಿಯ ವ್ಯವಸಾಯ ಎಲ್ಲಿಯೂ ಜಯಶಾಲಿಯಾಗಿಲ್ಲವೆಂದು ಹೇಳಿದ್ದಾರೆ. ಈ ವಿಚಾರವಾಗಿ ನಾನು ಕೊಡಗಿನ ಶ್ರೀ ಮಲ್ಲಪ್ಪನವರನ್ನು ಕಂಡು ಮಾತನಾಡಿದ್ದೇನೆ. ಏಕೆಂದರೆ ಅವರು ಈ ಸಹಕಾರ ತತ್ವಗಳ ಬಗ್ಗೆ ಹೆಚ್ಚಾಗಿ ದುಡಿದಿದ್ದಾರೆ. ಅವರೇ ಸ್ವತಃ ಹೇಳಿದ್ದರಲ್ಲಿ ಈ ಸಹಕಾರ ಪದ್ಧತಿಯ ವ್ಯವಸಾಯ ಐದಾರು ಕಡೆಗಳಲ್ಲಿ ಬಹಳ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆಯೆಂದು ಗೊತ್ತಾಯಿತು. ಕೊಡಗಿನಲ್ಲಿ ಗುಂಡೇನಹಳ್ಳಿ ಎಂಬ ಸ್ಥಳದಲ್ಲಿ ಸುಮಾರು 75 ಜನರು ನೆಲಸಿ ಅಲ್ಲಿ ಕಳೆದ ಐದು ವರ್ಷಗಳಿಂದ ಸಹಕಾರ ಪದ್ಧತಿಯ ಮೇಲೆ ವ್ಯವಸಾಯೋದ್ಯಮವನ್ನು ನಡೆಸಿಕೊಂಡು ಬರುತ್ತಿದ್ದಾರೆಂಬುದಾಗಿ ತಿಳಿಸಿದ್ದಾರೆ. ಕಳೆದ ವರ್ಷ ಈ ಜಾಯಿಂಟ್ ಕೋ-ಆಪರೇಷನ್ ಬೇಸಿಸ್ ಮೇಲೆ ವ್ಯವಸಾಯ ನಡೆಸಿ ಐದು ಸಾವಿರ ರೂಪಾಯಿಗಳ ಫಾಯಿದೆಪಡೆದಂತೆ ಈ ವರ್ಷ ಸುಮಾರು 16 ಸಾವಿರ ರೂಪಾಯಿಗಳಷ್ಟು ಫಾಯಿದೆ ಪಡೆದಿದ್ದಾರೆಂದೂ ಮತ್ತು ಈ ಕಾರ್ಯೋನ್ನಿ ಮುಂದಿನ್ನೂ ಬಹಳ ಒಳ್ಳೆಯ ಸ್ಥಿತಿಗೆ ಬರತಕ್ಕದ್ದಾಗಿದೆಯೆಂದೂ ಅವರು ತಿಳಿಸಿದರು. ಅವರಿಗೆ ಅಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರಂತೆ. ಅದೇ ರೀತಿ ಸರ್ಕಾರದವರು ಇಲ್ಲಿಯೂ ಅಂಥ ಯೋಜನೆಯನ್ನು ಜಾರಿಗೆ ತರುವುದು ಒಳ್ಳೆಯದು. ಆದರೆ ಈ ಬಗ್ಗೆ ಜನಗಳು ತಾವಾಗಿಯೇ ಒಂದು ಐಕ್ಯತ್ಯಕ್ಕೆ ಬಂದರೆ ಈ ಕಾರ್ಯ ಬಹು ಬೇಗ ಮುಂದುವರಿಯುತ್ತದೆ. ಹಾಗಿಲ್ಲದೆ ಜನರೇನಾದರೂ ತಮ್ಮ ಅನುಕೂಲಗಳ ಬಗ್ಗೆ ಈ ನೌಕರಶಾಹಿಮೇಲೆ ನಂಬಿಕೆಯಿಟ್ಟರೆ ಅದರಿಂದ ಯಾವ ಅನುಕೂಲವೂ ಆಗಲಾರದು. ಏಕೆಂದರೆ ಈ ನೌಕರಶಾಹಿಗೆ ಪ್ರಜೆಗಳಿಗೆ ಅನುಕೂಲ ಆಗುವಂತೆ ಕೆಲಸಮಾಡಬೇಕೆಂಬ ಮನೋಭಾವ ಅಥವಾ ಅಂಥ ಒಂದು ಪ್ರವೃತ್ತಿ ಅವರಲ್ಲಿಲ್ಲ. ಆ ಗುಂಡೇನಹಳ್ಳಿಯಲ್ಲಿ ನೆಲೆಸಿರತಕ್ಕ ಜನರು ಅವರವರೇ ಒಂದು ಮಾರ್ಗದರ್ಶಕ ರೀತಿಯಲ್ಲಿ ಒಬ್ಬರಿಗೊಬ್ಬರು ಹೊಂದಾಣಿಕೆಯಾಗಿ ಎಲ್ಲವನ್ನೂ ತಮ್ಮ ಸ್ವಂತ ಪ್ರಯತ್ನದಿಂದಲೇ ಮಾಡಿಕೊಂಡು ಏನೋ ಕೆಲವು ಸಲಹೆಗಳನ್ನು ಮಾತ್ರ ಸರ್ಕಾರದವರಿಂದ ಪಡೆದುಕೊಂಡಿದ್ದಾರೆಂದು ಕೇಳಿದೆನು. ಹಾಗೆ ಒಂದು ಹಳ್ಳಿಯಲ್ಲಿ ಜನರು ತಮ್ಮ ಸ್ವಯಂ ಪ್ರೇರಣೆಯಿಂದ ಕೆಲಸಮಾಡಿದರೆ ಅದನ್ನು ನೋಡಿಕೊಂಡು ಮತ್ತೊಂದು ಹಳ್ಳಿಯ ಜನರು ಅದರಂತೆ ಮಾಡಲು ಅವಕಾಶವಾಗುತ್ತದೆ. ಈರೀತಿ ನಮ್ಮ ಉತ್ತರ ಕನ್ನಡ ಜಿಲ್ಲೆ, ದಕ್ಷಿಣಕನ್ನಡ ಜಿಲ್ಲೆ ಮತ್ತು ಕೊಡಗು—ಈ ಪ್ರದೇಶಗಳಲ್ಲಿ ಹೆಚ್ಚುಹೆಚ್ಚಾಗಿ ಕೋ-ಆಪರೇಟೀವ್ ಫಾರಂಗಳನ್ನು ಸ್ಥಾಪನೆ ಮಾಡಿದರೆ ಅಥವಾ ಇಂಥ ಒಂದು ಪದ್ಧತಿಯನ್ನು ಜಾರಿಗೆ ತರಲು ಅವಕಾಶ ಮಾಡಿಕೊಟ್ಟರೆ ಅಲ್ಲಿಯ ಜನರು ತಾವಾಗಿಯೇ ಮುಂದೆ ಬಂದು ಇಂಥ ಸಹಕಾರ ತತ್ವ್ವದ ಸಾಗುವಳಿ ಫಾರಂಗಳನ್ನು ಸ್ಥಾಪನೆಮಾಡಿ ದೇಶದಲ್ಲಿ ಆಹಾರಧಾನ್ಯಗಳ ಉತ್ಪನ್ನವನ್ನು ಹೆಚ್ಚಿಸುವದರ ಜೊತೆಗೆ ಅವರ ಸಾಂಪತ್ತಿಕ ಸ್ಥಿತಿಯೂ ಉನ್ನತಮಟ್ಟಕ್ಕೇರಲು ಸಾಧ್ಯವಿದೆ. ಆದುದರಿಂದ ಮುಂದೆ ಈ ಕೋ-ಆಪರೇಟೀವ್ ಫಾರಂಗಳನ್ನು ಎಲ್ಲಿ ಯಾವ ಜನರಲ್ಲಿ ಅಂಥ ಒಂದು ಉತ್ಪಾಹಕರವಾದ ಸೂಚನೆಗಳಿರುವಂತೆ ಕಂಡು ಬರುತ್ತದೋ ಅಲ್ಲಿ ಮಾತ್ರ ಇವುಗಳನ್ನು ಸ್ಥಾಪಿಸಿದರೆ ಅವು ಅಭಿವೃದ್ಧಿಗೆ ಬರುತ್ತವೆ. ಹಾಗಿಲ್ಲದೆ ಇವುಗಳನ್ನು ಅಲ್ಲಯೋ-ಇಲ್ಲಿಯೋ ಪ್ರಾರಂಭಿಸಿದರೆ ಅದರಿಂದ ದೇಶಕ್ಕೇನೂ ಪ್ರಯೋಜನವಾಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಈ ವರದಿಯ ಕೆಲವು ಸಲಹೆಗಳ ಬಗ್ಗೆ ನನಗೆ ಬಹಳ ಭಯ ಉಂಟಾಗಿದೆ. ಕೆಲವು ಶಿಫಾರಸ್ಸುಗಳ ಬಗ್ಗೆ ಅನೇಕ ದೂರುಗಳಿರುತ್ತವೆ. ವಕೀಲರೂ, ಕೆಲವು ಬುದ್ಧಿವಂತರಾದ ಜನರೂ ಇದರಲ್ಲಿ ಸೇರಿರುತ್ತಾರೆ. ಇದರಲ್ಲಿ ಯಾವ ಸಲಹೆಗಳನ್ನು ಜಾರಿಗೆತಂದರೆ ಏನಾಗುತ್ತದೋ ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಸರ್ಕಾರದವರು ಈ ಬಗ್ಗೆ ಒಂದು ಮಸೂದೆಯನ್ನು ತಯಾರಿಸಿ ಶಾಸನ ಸಭೆಗಳ ಮುಂದೆ ತರುವಾಗ ಈ ಎಲ್ಲ ವಿಚಾರಗಳಿಗೂ ಪೂರಾ ನಿಗಾ ಕೊಟ್ಟು ಸಂಪೂರ್ಣವಾಗಿ ವಿಮರ್ಶೆಮಾಡಿ ಮುಂದು ವರಿಯಬೇಕಾಗಿದೆ. ಈ ಸಮಿತಿಯವರು ಸೂಚಿಸಿರುವಂತೆ ಈ ಮೊಕದ್ದಮೆಗಳ ವಿಚಾರಣೆಯ ಬಗ್ಗೆ ನಮಗೆ ಒಂದು ಜ್ಯೂಡಿಷಿಯಲ್ ಮಂಡಲಿಯೂ ಮತ್ತು ಡಿಸ್ಟ್ರಿಕ್ಟ್ ಜಡ್ಜಿಗಳ ದರ್ಜೆಯ ಒಂದು ಅಪರೇಟ್ ಕೋರ್ಟೂ ಇದ್ದರೆ ಸಾಕೆಂದು ತೋರುತ್ತದೆ. ಇದಕ್ಕೆ ಬದಲಾಗಿ ರೆಗ್ಯುಲರ್ ಸಿವಿಲ್ ಕೋರ್ಟುಗಳಿಗೆ ಈ ಮೊಕದ್ದಮೆಗಳನ್ನು ವಿಚಾರಣೆಮಾಡುವಂತೆ ಮಾಡಿದರೆ ರೈತಾಪಿ ಜನರೆಲ್ಲ ತಮ್ಮ ಉದ್ಯೋಗವನ್ನು ಕೈಬಿಟ್ಟು ಯಾವತ್ತೂ ಅವರು ಈ ಕೋರ್ಟು ವ್ಯವಹಾರಗಳಲ್ಲೇ ಇರಬೇಕಾಗುತ್ತದೆ. ಆದರೆ ಸರ್ಕಾರ ಯಾವ ಕಾನೂನನ್ನೇ ಮಾಡಲಿ ಅದು ಜನರಿಗೆ ಸರಳವಾಗಿ ಗೊತ್ತಾಗುವ ರೀತಿಯಲ್ಲಿರಬೇಕು. ಅವಸರದಲ್ಲಿ ಏನೂ ಮಾಡಬಾರದು. ಆದರೆ ಚತ್ತ ಸಮಿತಿಯವರು

(ಶ್ರೀ ಕೆ. ಕಾಂತಪ್ಪಶೆಟ್ಟಿ)

ಬಹಳ ಅತುರದಲ್ಲಿ ಕೆಲಸಮಾಡಿದ್ದಾರೆಂದು ಕಾಣುತ್ತಿದೆ. ಅವರು ನಮ್ಮ ಜಿಲ್ಲೆಯಲ್ಲಿ ಅಷ್ಟು ತಿರುಗಾಟ ಮಾಡಲೇ ಇಲ್ಲವೆಂಬ ದೂರುಗಳು ಬಂದಿವೆ.

ಕೆಲವು ಕಡೆಗಳಲ್ಲಿರುವ ಜನರಿಗೆ ಇದು ಏನು ಎಂಬುದೇ ಗೊತ್ತಾಗಿಲ್ಲ. ಆದ್ದರಿಂದ ಅವಸರಮಾಡದೆ ಸರಿಯಾದ ರೀತಿಯಲ್ಲಿ ಇತರ ಎಲ್ಲಾ ಜನಾಭಿಪ್ರಾಯವನ್ನು ಕೇಳಿಕೊಂಡು ಆಯಾ ಪ್ರದೇಶಗಳಿಗೆ ಸರ್ವ ಸಾಮಾನ್ಯವಾಗಿ ತೃಪ್ತಿಯಾಗುವ ಹಾಗೆ ಒಂದು ಮಸೂದೆಯನ್ನು ತರಬೇಕು. ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ದೊಡ್ಡ ಅಲ್ಲೋಲ ಕಲ್ಲೋಲವೆದ್ದಿದೆ. ಆದ್ದರಿಂದ ಒಕ್ಕಲಿಗರಿಗೆ ನಿಜವಾಗಿ ಹಿತವಾಗುವ ರೀತಿಯಲ್ಲಿ ಮತ್ತು ಭೂಮಾಲೀಕರು ನ್ಯಾಯವಾಗಿ ಬಾಳುವಂತಹ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕು. ಅಲ್ಲಿನ ಸಂಕಷ್ಟಗಳನ್ನು ಕೇಳಿ ಅವುಗಳಿಗೆ ವಿಶೇಷವಾಗಿ ಸರ್ಕಾರದವರು ನಿಗಾಕೊಡಬೇಕೆಂದು ನೂಚಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ನಾಡಗೌಡ. (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಈಗ ನಾಲ್ಕೈದು ದಿವಸಗಳಿಂದಲೂ ಮಾನ್ಯ ಜತ್ತಿ ಸಮಿತಿಯವರ ವರದಿಯಮೇಲೆ ಕೆಲವು ವಿಚಾರಗಳು ತಮ್ಮ ಮುಂದೆ ಚರ್ಚೆಯಾಗುತ್ತಿವೆ. ಈಗ ನಾನು ಮಾನ್ಯ ಜತ್ತಿ ಕಮಿಟಿಯ ವರದಿಗೆ ಸ್ವಾಗತಬಯಸುತ್ತೇನೆ. ವೈಯಕ್ತಿಕವಾಗಿ ಮಾನ್ಯ ಜತ್ತಿ ಕಮಿಟಿಯ ವರದಿಯಿಂದ ಯಾವೊಂದು ಧಕ್ಕೆ ತಾಗದೆ ಇದ್ದರೂ ಈಗಿನ ಸಮಸ್ಯೆಯನ್ನು ಪರಿಹರಿಸುವುದು ಅತ್ಯಾವಶ್ಯಕವೆಂದು ಹೇಳುತ್ತೇನೆ. ಸರ್ಕಾರದವರು ಇಂತಹ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡದ್ದರಿಂದ ಮಾನ್ಯ ನಿಜಲಿಂಗಪ್ಪನವರ ಮಂತ್ರಿಮಂಡಲಕ್ಕೆ ನನ್ನ ವಂದನೆಗಳು. ಈಗಿನ ಭೂಸುಧಾರಣೆಯ ಪ್ರಶ್ನೆ ಬಹಳ ದೊಡ್ಡ ಪ್ರಶ್ನೆ. ಈ ಪ್ರಶ್ನೆಯನ್ನು ಬಿಡಿಸುವಾಗ ಎಲ್ಲಾ ಜನರಿಗೆ ಅನುಕೂಲವಾಗುವಂತೆ ಭೂಸುಧಾರಣೆಯನ್ನು ಮಾಡುವುದು ಅವಶ್ಯಕವೆಂದು ಈ ಕ್ರಮವನ್ನು ತೆಗೆದುಕೊಂಡಿದ್ದಾರೆಂದು ನಾನು ಭಾವನೆಮಾಡುತ್ತೇನೆ. ಶ್ರೀಮಾನ್ ಜತ್ತಿ ಸಮಿತಿಯ ವರದಿಯನ್ನು ನಾನು ಬಹಳ ಆಸಕ್ತಿಯಿಂದ ಎರಡು-ಮೂರು ತಿಂಗಳುಗಳಿಂದಲೂ ನೋಡುತ್ತಾ ಬಂದಿದ್ದೇನೆ. ಅವರಿಗೆ ಬಾಗಲ ಕೋಟೆಯ ತಾಲ್ಲೂಕ್ ಕಾಂಗ್ರೆಸ್ ಕಮಿಟಿಯಿಂದ ಮತ್ತು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯಿಂದ ಒಂದು ಮನವಿಯನ್ನು ಕೊಟ್ಟಿದ್ದಾರೆ. ಆದರೆ ನಾನು ಒಂದೆರಡು ಸೂಚನೆಗಳನ್ನು ತಮ್ಮ ಮುಂದಿಡಲು ಬಯಸುತ್ತೇನೆ. ಇವೊತ್ತಿನ ದಿವಸ ರ್ಯಾಂಡ್ ರಿಫಾರಮ್ಸ್ ಅಥವಾ ಭೂಸುಧಾರಣೆಯ ಅವಶ್ಯಕತೆ ಏಕೆ ಉಂಟಾಗಿದೆಯೆಂದು ಹೇಳುವುದು ಒಂದು ಸಹಜವಾದ ಮಾತು. ನೂರಕ್ಕೆ 80 ಜನರು ಒಕ್ಕಲುತನದವರು ಇದ್ದಾರೆ. ಇವರು ಹಳ್ಳಿಗಳಲ್ಲಿಯೇ ವಾಸವಾಗಿದ್ದುಕೊಂಡು ಬೆವರು ನುರಿಸಿ ಹೊಲಗಳಲ್ಲಿ ಹೆಚ್ಚು ಹುಮ್ಮಸ್ಸಿನಿಂದ ಕೆಲಸಮಾಡಿ ಉತ್ಪಾದವಾದ ಒಕ್ಕಲುತನದವರು ಎಂದು ಅನ್ನಿಸಿಕೊಂಡಿದ್ದಾರೆ. ಆದರೆ ಈ ಭೂ ಸುಧಾರಣೆಯನ್ನು ಅತಿ ತೀವ್ರವಾಗಿ ಮಾಡದಿದ್ದರೆ, ಮೈಸೂರಿನಲ್ಲಾಗಲೀ, ಅಥವಾ ಇತರ ಪ್ರಾಂತ್ಯಗಳಲ್ಲಾಗಲೀ ಒಕ್ಕಲುತನದವರ ಪರಿಸ್ಥಿತಿ ಬಹಳವಾಗಿ ಹದಗೆಡುತ್ತಿತ್ತು. ಆದ್ದರಿಂದ ಸರ್ಕಾರದವರು ಈ ಒಂದು ವಿಷಯವನ್ನು ಸುತ್ತ ಮುತ್ತ ಪ್ರಾಂತಗಳಲ್ಲಿ ಯಾವ ರೀತಿ ಬಗೆಹರಿಸಿದ್ದಾರೆಂಬುದನ್ನೂ ಸಹ ಸ್ವಲ್ಪ ನೋಡಬೇಕು. ಈಗ ಕೇರಳದಲ್ಲಿ ಕಮ್ಯೂನಿಸ್ಟ್ ಸರ್ಕಾರ ಬಂದಿದೆ. ಈ ರಾಜ್ಯ ಮೈಸೂರಿನ ಮಗ್ಗುಲಲ್ಲಿರುವ ರಾಜ್ಯ. ಆ ರಾಜ್ಯದಲ್ಲಿ ಜನರನ್ನು ಆಕರ್ಷಣೆಮಾಡುವ ಕ್ರಮವನ್ನು ತೆಗೆದುಕೊಂಡಿದ್ದಾರೆ. ಕಾಂಗ್ರೆಸ್ ಸರ್ಕಾರದವರು ಯಾವ ತರಹದ ಪ್ರಯತ್ನವನ್ನೂ ಜನರಿಗೆ ಆಕರ್ಷಿಕವಾಗುವ ರೀತಿಯಲ್ಲಿ ಏಕೆ ಮಾಡಬಾರದು! ಮೈಸೂರು ರಾಜ್ಯ ಮಾದರಿ ರಾಜ್ಯವೆಂಬ ಹೆಸರನ್ನು ಪಡೆದು ಪ್ರಖ್ಯಾತಿಹೊಂದಿರುವಾಗ, ನಾವು ಮಾದರಿ ಕಾಯಿದೆಗಳನ್ನು ಮಾಡುವುದರಲ್ಲಿ ಹಿಂತೆಗೆಯಬಾರದು. ಆದರೆ ಅವರಂತೆ ಇವೊತ್ತಿನ ದಿವಸ ಕೇವಲ ಭೂಸುಧಾರಣೆ ಮಾತ್ರ ಮಾಡಿದರೆ ಸಾಲದು. ಇವೊತ್ತಿನ ದಿವಸ ಕೇಂದ್ರ ಸರ್ಕಾರದಲ್ಲಿ ಮತ್ತು ಇತರ ರಾಜ್ಯ ಸರ್ಕಾರಗಳಲ್ಲಿ ಯಾವ ಯಾವ ಭೂಸುಧಾರಣೆಯ ಕಾನೂನುಗಳು ಜಾರಿಯಲ್ಲಿವೆ ಎಂಬುದನ್ನು ಆಮೂಲಾಗ್ರವಾಗಿ ವಿಚಾರಮಾಡಿ, ಅದಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಂಡು ತಕ್ಕ ಕಾಯಿದೆಗಳನ್ನು ಮಾಡಬೇಕು. ಇವೊತ್ತಿನ ದಿವಸ ಕೂಲಿಗಾರರಿಗೆ ಹೆಚ್ಚು ಅವಕಾಶವನ್ನು ಕೊಡಬೇಕು. ಏಕೆಂದರೆ ಅವರು ಹೊಲಗಳನ್ನು ಆಬಾದುಮಾಡಿ ಹೆಚ್ಚು ಬೆಳೆಯನ್ನು ಬೆಳೆದರೂ, ದೊಡ್ಡ ದೊಡ್ಡ ಭೂಮಾಲೀಕರು ಅವರಲ್ಲಿ ಏನೋ ಒಂದು ದೊಡ್ಡ ಅಧಿಕಾರವಿದೆಯೆಂದು ಬಡ ಒಕ್ಕಲಿಗರನ್ನು ಅಲಕ್ಷ್ಯಭಾವದಿಂದ ನೋಡುತ್ತಾರೆ. ಅವರಿಗೂ ಅವರ ಪಾಲು ಸಿಕ್ಕುವ ಹಾಗೆ ಒಂದು ವ್ಯವಸ್ಥೆಮಾಡಬೇಕು. ಯಾವಾಗಲೂ ಹಿಂದೆ ಹೆಜ್ಜೆ ಇಡಬಾರದು. ನನಗೆ 300-400 ಎಕರೆ ಜಮೀನು ಗಳಿದ್ದರೂ ಸಹ, ಅವುಗಳನ್ನು ಉಳಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲ. ಮುಂಬೈ ರಾಜ್ಯದಲ್ಲಿ ಜೆನೆನ್ಸಿ ಕಾನೂನು ಬಂದು ನಮ್ಮ ಹೊಲಗಳು ಈಗಾಗಲೇ ಒಕ್ಕಲಿಗರಿಗೆ ಸಿಕ್ಕಿವೆ. ಅವನ್ನು ಉಳಿಸಿಕೊಳ್ಳಲು ಇವೊತ್ತಿನ ದಿವಸ ಕಾಂಗ್ರೆಸ್ ಸಂಸ್ಥೆಯಲ್ಲಿರುವವರು ಪ್ರಯತ್ನಮಾಡಬಾರದಾಗಿತ್ತು. ಜತ್ತಿ ಕಮಿಟಿ ರಿಪೋರ್ಟಿನಲ್ಲಿ ಇವೊತ್ತಿನ ದಿವಸ ಈ ಭೂಸುಧಾರಣೆಗೆ ಬೇಕಾದಂಥ ಅನೇಕ ಸಲಹೆಗಳನ್ನು ಮಾಡಿದ್ದಾರೆ. ಜತ್ತಿಯವರ ಕಾಯಿದೆಗಳು ಪ್ರತಿಗಾಮಿಯಾಗಿ ಒಕ್ಕಲಿಗರಿಗೆ ಮಾತ್ರ ಮಾಡಲಲ್ಲ. ಇಂತಹ ವರದಿಯಲ್ಲಿ ತಪ್ಪುಮಾಡುವುದಾದರೂ ಏನಿದೆ? ಒಂದುವೇಳೆ ಜತ್ತಿ ಸಮಿತಿ ವರದಿಯಲ್ಲಿ ಎಷ್ಟೋ ಸೂಚನೆಗಳನ್ನು ಮಾಡಬೇಕಾಗಿ ಬರುತ್ತದೆ. ಸೀಲಿಂಗ್ ನಿಗದಿಮಾಡಿರುವ ಬಗ್ಗೆ ಬೇಕಾದಷ್ಟು ಬದಲಾವಣೆಮಾಡಬಹುದು. 1,200 ರೂಪಾಯಿಗಳಷ್ಟು ಆದಾಯ ಬರುವಂಥ ಭೂಮಿಯನ್ನು ಭೂಮಾಲೀಕನಿಗೆ ಬಿಟ್ಟು ಉಳಿದ ಜಮೀನನ್ನು ಒಕ್ಕಲಿಗರಿಗೆ ಹಂಚಬಹುದು. ಇಷ್ಟಾದರೂ ಸೀಲಿಂಗ್ ಇಡಬಹುದು. ಜತ್ತಿ ಸಮಿತಿಯ ವರದಿಯನ್ನು ಒಪ್ಪದಿದ್ದರೆ ಬಹಳ ತಪ್ಪುಮಾಡಿದಂತಾಗುತ್ತದೆ. ಅದರಂತೆಯೇ ಇನ್ನೊಂದು ನನ್ನ ನಮ್ರವಾದ ಸೂಚನೆ ಏನೆಂದರೆ ಇವೊತ್ತಿನ ದಿವಸ ಸರ್ಕಾರದವರು ಯಾವ ಕಾಯಿದೆ ಕಾನೂನುಗಳನ್ನಾಗಲಿ ಎರಡು ವರ್ಗಗಳಿಗೆ ಅನ್ವಯಿಸುವಂತೆ ಮಾಡುತ್ತಿದ್ದಾರೆ; ದುಡ್ಡಿದ್ದವನಿಗೆ ಮತ್ತು ಕೂಲಿಗಾರನಿಗೆ ಎಂದು ಮಾಡುತ್ತಿದ್ದಾರೆ; ಮಧ್ಯಮವರ್ಗದವರನ್ನು ಸರ್ಕಾರದವರು ವಿಚಾರ ಮಾಡುವುದೇ ಇಲ್ಲ. ರಾಷ್ಟ್ರದ ಬೆನ್ನೆಲುಬು ಮಧ್ಯಮ ವರ್ಗದವರು. ಅವರು ನಿರ್ಮೂಲವಾಗುತ್ತಾರೆ. ಎಂದರೆ, ರಾಷ್ಟ್ರಕ್ಕೇ ಒಂದು ದೊಡ್ಡ ಗಂಡಾಂತರವಿದೆ. ಆದ್ದರಿಂದ ಯಾವುದೇ ಕಾನೂನುಗಳನ್ನು ನಮ್ಮ ಸರ್ಕಾರದವರು ಮಾಡಿದರೂ, ಮಧ್ಯಮ ವರ್ಗದವರ ಹಿತವನ್ನು ಸೂಕ್ಷ್ಮವಾಗಿ ಮತ್ತು ದೀರ್ಘವಾಗಿ ವಿಚಾರಮಾಡಬೇಕು. ಅವರಿಗೆ 40-50 ವರ್ಷಗಳಿಂದ

ಕೇವಲ 15-20 ಎಕರೆ ಜಮೀನು ಇದ್ದರೆ, ಅದನ್ನು ಈ ಚೆನೆನ್ನಿ ವರದಿಯ ಪ್ರಕಾರ ಅವರ ಕೈತಪ್ಪಿಸಿ ತೆಗೆದು ಕೊಂಡು ಹೋಗುವ ವಿಚಾರ ಬರುತ್ತದೆ. ಇಂತಹ ಪರಿಸ್ಥಿತಿ ಅದರಲ್ಲಿ ಅಡಕವಾಗಿದೆ. ಅವನ್ನೆಲ್ಲಾ ವಿಚಾರಮಾಡಬೇಕು. ಒಕ್ಕಲುತನಮಾಡುವ ಒಂದು ಆಸ್ಪದವನ್ನು ಮಧ್ಯಮ ವರ್ಗದವರಿಗೆ ಕೊಟ್ಟಿಲ್ಲ. ಸರ್ಕಾರದವರು ಕಾನೂನು ಕಾಯಿದೆಗಳನ್ನು ಮಾಡು ವಾಗ ಮಧ್ಯಮವರ್ಗದವರ ವಿಚಾರ ಚರ್ಚೆಮಾಡದೆ ಬಿಟ್ಟಿದ್ದು ಒಂದು ಶೋಚನೀಯವಾದ ಸಂಗತಿ. ಆದ್ದ ರಿಂದ ಮುಂದೆ ಜತ್ತಿ ಕಮಿಟಿಯವರ ವರದಿಯ ಪ್ರಕಾರ ಕಾನೂನು ಕಾಯಿದೆಗಳನ್ನು ಜಾರಿಗೆ ತರು ವಾಗ ನಮ್ಮ ಸರ್ಕಾರದವರು ಈ ವಿಚಾರದಲ್ಲಿಯೂ ಹೆಚ್ಚು ಗಮನಕೊಡಬೇಕೆಂದು ನನ್ನ ಸೂಚನೆ. ಅದ ರಂತೆಯೇ ಇನ್ನು ಮುಂದೆ ಚೆನೆಂಟ್ಸ್ ಹೊಲಗಳನ್ನು ತೆಗೆದುಕೊಳ್ಳುವುದಕ್ಕೆ ಏನಾದರೂ ಒಂದು ರಿಸ್ಟ್ರಿಕ್ಷನ್ ಇಡುವುದು ಆವಶ್ಯಕವೆಂದು ನನಗನ್ನಿಸುತ್ತದೆ. ಒಂದು ವಿಚಾರ. ಇವತ್ತಿನ ದಿವಸ ಯಾರಾದರೂ ಭೂ ಒಡೆಯ ಹೆಚ್ಚು ಜಮೀನನ್ನು ತೆಗೆದುಕೊಳ್ಳಬೇಕೆಂದು ಮುಂದೆ ಬಂದರೆ, ಶ್ರೀಮಾನ್ ಜತ್ತಿ ಕಮಿಟಿಯ ವರದಿಯ ಪ್ರಕಾರ ಅದನ್ನು ಒಕ್ಕಲಿಗರಿಗೇ ಹಂಚಿಕೊಡಬೇಕೆಂದು ಹೇಳಿದ್ದಾರೆ. ಒಕ್ಕಲಿಗರೆಲ್ಲರೂ ಒಟ್ಟಾಗಿ ಸೇರಿ ಒಂದು ಸಹಕಾರ ಸಂಘವನ್ನು ಮಾಡಿ, ಅವರಿಗೆ ಜಮೀನು ಹಂಚಬೇಕೆಂದರೆ ಅದು ಅಶಕ್ಯವಾದ ಮಾತು, ಹೊಲಗಳು ಸಿಕ್ಕುವುದು ಸುಲಭ. ಒಕ್ಕಲಿಗರ ನಂಬ್ಯೆ ಕಡಮೆ. ಇದರಿಂದ ಒಂದು ತರಹದ ವೆಸ್ಟೆಡ್ ಇಂಟರೆಸ್ಟನ್ನು ಕ್ರಿಯೇಟ್‌ಮಾಡಬೇಕಾಗಿದೆ. ಸಹ ಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುವುದು ಎಂದು ಎಷ್ಟೋ ಜನರ ಅಭಿಪ್ರಾಯವಿದ್ದರೂ, ಅವುಗಳನ್ನು ಸರ್ಕಾರದವರು ಜಾಯಿಂಟ್ ಫಾರಂಗೆ ಕೊಡಬೇಕು. ಕೋ-ಆಪರೇಟಿವ್ ಸೊಸೈಟಿಗಳಿಗೆ ಕೊಡಬಾರದು. ಜತ್ತಿ ಸಮಿತಿಯ ವರದಿಯ ಪ್ರಕಾರ. ಭೂಮಾಲೀಕರೇ ಆಗಲಿ, ಗೇಣಿದಾರರೇ ಆಗಲೀ ಸ್ಪೆಷಲ್ಲಾಗಿ ಹುಮ್ಮಸ್ಸಿನಿಂದ ಕೆಲಸಮಾಡಬೇಕು. ಆ ವರದಿಯಲ್ಲಿರುವ ಕಟ್ಟಳೆಗಳನ್ನು ತೀರ್ಮಾನಿಸ ಬೇಕಾದರೆ ಸಿವಿಲ್ ಕೋರ್ಟುಗಳು ಅವಶ್ಯಕ.

ಕೋರ್ಟುಗಳಿಗೆ ಕಟ್ಟಳೆಗಳನ್ನು ಕೊಡಬೇಕು. ಈ ಚೆನೆನ್ನಿ ಕೇಸುಗಳನ್ನು ಮೂರು-ನಾಲ್ಕು ತಿಂಗಳಲ್ಲಿ ಮುಗಿಸಬೇಕೆಂದು ಕೋರ್ಟುಗಳಿಗೆ ನಿರ್ಬಂಧ ಹಾಕ ಬೇಕು. ಈ ಬಿಲ್ಲಿನಲ್ಲಿ ಆ ರೀತಿ ಅವರಿಗೆ ಟ್ರೈಂಕೊಟ್ಟರೆ ಹೆಚ್ಚು ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಕೋರ್ಟು ಗಳಲ್ಲಿ ವಿಳಂಬವಾಗುತ್ತದೆ. ಆದ್ದರಿಂದ ನನ್ನ ಸೂಚನೆ ಏನಂದರೆ, ಕೋರ್ಟುಗಳು ಹೆಚ್ಚು ವೇಳೆಗಳನ್ನು ತೆಗೆದುಕೊಳ್ಳಬಾರದು, ಆರು ತಿಂಗಳಲ್ಲಿ ಚಾಲಿಸಿ ಆಗ ಬೇಕು ಎಂದು ತಿಳಿಸಬೇಕು. ಹಾಗೆ ಮಾಡಿದರೆ, ಆ ಕಟ್ಟಳೆಗಳಿಗೆ ಪ್ರಾಶಸ್ತ್ಯಕೊಟ್ಟು ಮಾಡುತ್ತಾರೆ. ಇಲ್ಲ ದಿದ್ದರೆ ಒಕ್ಕಲಿಗರಿಗೆ ನಿರ್ಬಂಧಮಾಡುವ ಪರಿಸ್ಥಿತಿ ಬರು ತ್ತದೆ. ಒಕ್ಕಲಿಗರನ್ನು ಇನ್ನೂ ನಿರ್ಬಂಧಮಾಡಬಾರದು. ಲಿಟಿಗೆಂಟ್ ಪಬ್ಲಿಕ್ಕಿಗೆ ಕೋರ್ಟಿನಲ್ಲಿ ವಕೀಲರಿಗೆ ಹಾಜರು ಆಗಲಿಕ್ಕೆ ಅಪ್ಪಣೆಕೊಟ್ಟು ನ್ಯಾಯ ಕೀಳ್ಪು ವಾಗಿ ದೊರೆಯುವ ಹಕ್ಕು ಇರಬೇಕು. ನ್ಯಾಯ ದೊರಕುವ ಹಾಗೆ ಕಟ್ಟಳೆಗಳನ್ನು ಮಾಡಿಕೊಡಬೇಕು. ಒಕ್ಕಲಿಗರಿಗೆ ನ್ಯಾಯಬದ್ಧವಾದ ಹಕ್ಕುಗಳು ದೊರೆಯು ವಂತೆ ಏರ್ಪಾಡುಮಾಡಬೇಕು ಎಂದು ನನ್ನ ನಮ್ರ ಸೂಚನೆ ಇದೆ. ಇನ್ನೊಂದು ಮುಖ್ಯವಿಷಯ. ಇವೊತ್ತಿನ ದಿವಸ ಜತ್ತಿ ಸಮಿತಿಯ ರಿಪೋರ್ಟಿನಲ್ಲಿ ಶಿಕ್ಷಣ ಸಂಸ್ಥೆ ಗಳಿಗೆ ವತನದಾರರು ಪುಣ್ಯವಂತರು ಹೊಲವನ್ನು ಕೊಡುವುದಕ್ಕೆ ಅವಕಾಶವಿಲ್ಲ. ಮುಂಬೈ ರಾಜ್ಯದಲ್ಲಿ ಇಂಥ ಪರಿಸ್ಥಿತಿ ಇದೆ. ಜತ್ತಿ ಸಮಿತಿಯವರ ರಿಪೋರ್ಟಿನಲ್ಲಿ ಇದಕ್ಕೆ ಅವಕಾಶಕೊಟ್ಟಿಲ್ಲ. ಶಿಕ್ಷಣ ಸಂಸ್ಥೆ ಗಳಿಗೆ ಚಾರಿಟಬಲ್ ಎಂಡೋಮೆಂಟ್‌ಗಳ ಆಸ್ಪದಕೊಡ ಬೇಕು. ಅದಕ್ಕಾಗಿ ಒಂದು ಎಗ್ಜಮೆಷನ್ ಕ್ಲಾಸ್ ಹಾಕಬೇಕು. ಇಲ್ಲದಿದ್ದರೆ ಶಿಕ್ಷಣ ಸಂಸ್ಥೆಗಳು ನಡೆಯು ವುದು ಕಠಿಣ. ಶಿಕ್ಷಣ ಸಂಸ್ಥೆಗಳು ಸರಿಯಾಗಿ ನಡೆಯ ಬೇಕಾದರೆ, ಭೂದಾನ ಇಡಬೇಕು, ಎಂದರೆ ಅಂಥ ಸಂಸ್ಥೆಗಳು ಚೆನ್ನಾಗಿ ನಡೆಯುತ್ತವೆ. ಸರ್ಕಾರದವರಿಗೆ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನೂ ನಡೆಸುವ ಸಾಮರ್ಥ್ಯ ಇಲ್ಲದೆ ಇರುವುದರಿಂದ ಈ ರೀತಿ ಎಗ್ಜಮೆಷನ್‌ನನ್ನು ಬಿಲ್ಲಿ ನಲ್ಲಿ ಹಾಕುವುದು ಅವಶ್ಯಕ ಎಂದು ನನಗನ್ನಿಸುತ್ತದೆ. ಇವೊತ್ತಿನ ದಿವಸ ಏನು ಈ ಜತ್ತಿ ಕಮಿಟಿ ರಿಪೋರ್ಟು ಇದೆ ಅದನ್ನು ಸ್ವಾಗತಮಾಡುತ್ತಿದ್ದೇನೆ. ಸರ್ಕಾರ ದವರು ಈ ಬಗ್ಗೆ ತೀವ್ರವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಪರಿಸ್ಥಿತಿ ನಮ್ಮ ಕೈಯಲ್ಲಿ ಉಳಿಯುವುದಿಲ್ಲ. ಕಾಂಗ್ರೆಸ್ ಸರ್ಕಾರ ದವರು ಈ ಒಂದು ಸುಧಾರಣೆಯನ್ನು ತರಲು ಬದ್ಧ ಕಂಕಣರಾಗಿದ್ದಾರೆ. ನಾವು ಜನರ ಮುಂದೆ ಹೋಗ ಬೇಕಾದರೆ ಈ ಕಾಯಿದೆಯನ್ನು ತೆಗೆದುಕೊಂಡು ಹೋದರೆ ನಮ್ಮನ್ನು ನಂಬುತ್ತಾರೆ, ಇಲ್ಲದಿದ್ದರೆ ಇವರು ಬರಿಯ ಎಲೆಕ್ಷನ್‌ಗೋಸ್ಕರ ಬಂದಿದ್ದರು, ಇವರ ಕೆಲಸ ವಾಯಿತು; ದೇಶಕ್ಕಾಗಿ ಇವರು ಏನೂ ಕಲಸಮಾಡು ವುದಿಲ್ಲವೆಂದು ತೀರ್ಮಾನಕೊಳ್ಳುತ್ತಾರೆ. ಆದ್ದರಿಂದ ನಾನು ಜತ್ತಿ ಸಮಿತಿಯ ರಿಪೋರ್ಟನ್ನು ಸ್ವಾಗತಿಸಿ ನನಗೆ ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ವೆಂಕಟರಮಣಯ್ಯ (ಸ್ಥಾನೀಯ ಪ್ರಾಧಿ ಕಾರೀ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಸರ್ಕಾರ ದವರು ಶ್ರೀಮಾನ್ ಜತ್ತಿಯವರ ಆಶ್ರಯದಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿದಮೇಲೆ ಅವರು ಸಂಸ್ಥಾನ ದಲ್ಲ ತಿರುಗಿ ರೈತರಿಗೂ ಜಮೀನ್ದಾರರಿಗೂ ಇರತಕ್ಕ ಬಾಂಧವ್ಯ ಮತ್ತು ಇರಬೇಕಾದ ರೀತಿ ನೀತಿಗಳನ್ನು ನಿರೂಪಿಸಿ ನಮ್ಮ ಮುಂದೆ ಒಂದು ರಿಪೋರ್ಟನ್ನು ಇಟ್ಟಿದ್ದಾರೆ. ಬೊಂಬಾಯಿ ಭಾಗ, ಹೈದ್ರಾಬಾದ್ ಭಾಗ ಮತ್ತು ಇನ್ನೂ ಕೆಲವು ಭಾಗಗಳಲ್ಲಿ ಇರತಕ್ಕಂಥ ಅನುಕೂಲಗಳನ್ನು ಮತ್ತು ಅನನುಕೂಲಗಳನ್ನು ಪರಿಶೀಲಿಸಿ ವಿಶದವಾಗಿ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆ ಭಾಗದಲ್ಲಿ ಇರತಕ್ಕಂಥ ರೈತರ ತೊಂದರೆಗಳನ್ನು ನಿವಾರಿಸುವುದಕ್ಕೆ ತತ್ಯಶಃ ಕೆಲವು ಅಂಶಗಳನ್ನು ಈ ರಿಪೋರ್ಟಿನಲ್ಲಿ ಅಡಕಮಾಡಿದ್ದಾರೆ. ಆದರೆ ಹಳೆಯ ಮೈಸೂರಿಗೆ ಸಂಬಂಧಪಟ್ಟಂತೆ ಅವರು ವಿಶೇಷವಾಗಿ ಪರಿಶೀಲನೆಗಳನ್ನು ನಡೆಸಿದ ಹಾಗೆ ಕಾಣಿ ಸುವುದಿಲ್ಲ. ಅವರು ಹೇಳಿರತಕ್ಕ ಅಂಕಿ ಅಂಶಗಳ ಪ್ರಕಾರ ನಮ್ಮಲ್ಲಿ ಜಮೀನ್ದಾರರು ಅಥವಾ ಹೆಚ್ಚು ಎಕರೆಗಳ ಜಮೀನು ಇರತಕ್ಕವರು ಬಹಳ ಕಡಮೆ ಅದ ರಲ್ಲೂ ಕೂಡ ಈ ರೀತಿಯಾಗಿ ಅವರ ರಿಪೋರ್ಟನ್ನು ಇಲ್ಲಿ ಜಾರಿಗೆ ತಂದಿದ್ದೇ ಆದರೆ ಮಂಡ್ಯ ಡಿಸ್ಟ್ರಿಕ್ಟಿನಲ್ಲೆ ಎರಡು ಎಕರೆಗಳಿಗಿಂತ ಜಾಸ್ತಿಯಾಗಿ ಯಾರೂ ಇಟ್ಟು ಕೊಳ್ಳುವದಕ್ಕೆ ಸಾಧ್ಯವಿಲ್ಲ. ಅದರಿಂದ ಬಹಳ ಜನಗ ಳಿಗೆ ತೊಂದರೆಯಾಗುತ್ತದೆ. ಅವರು ಹೇಳಿರತಕ್ಕ ಅಂಕಿ ಅಂಶಗಳನ್ನು ತೆಗೆದುಕೊಂಡರೆ ಒಬ್ಬರಿಗೆ ಎಷ್ಟು ಜಮೀನು ಇರಬೇಕು ಎಂಬುದನ್ನು ನಿರ್ಧಾರಮಾಡಲು ಆದಾಯದ ಮೇಲೆ ಲೆಕ್ಕಹಾಕಿದರೆ ಒಬ್ಬರಿಗೆ ಕೇವಲ ಎರಡು ಎಕರೆ ಬರುತ್ತದೆ. ಮೈಸೂರು ಡಿಸ್ಟ್ರಿಕ್ಟಿನ ಕೆಲವು ಭಾಗದಲ್ಲಿಯೂ ಹೀಗೆಯೇ ಆಗುತ್ತದೆ. ಅಂಕಿ ಅಂಶಗಳನ್ನು ಪರಿಶೀಲಿಸಿದರೆ ಮುಂದೆ ವ್ಯವಸಾಯಕ್ಕೆ

(ಶ್ರೀ ಟಿ. ವೆಂಕಟರಮಣಯ್ಯ)

ಎಷ್ಟು ಅನನುಕೂಲವಾಗುತ್ತದೆ ಎಂಬುದನ್ನು ಈ ಮಾನ್ಯ ಸಭೆಯಲ್ಲಿ ಅನೇಕರು ವಿವರಿಸಿದ್ದಾರೆ. ನಾನೂ ಕೆಲವು ಅಂಶಗಳನ್ನು ಸಭೆಯ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಪೊನ್ನೆ ತಾನೆ ಪಾಂಡವಪುರ ತಾಲ್ಲೂಕಿನಲ್ಲಿ ಈ ಸಾರಿ ಸುಗ್ಗಿಯ ಕಾಲದಲ್ಲಿ ನರಿಯಾಗಿ ಯಾರೂ ಗುತ್ತಿಗೆಗಳನ್ನು ಪಾವತಿಮಾಡದೆ ಪೋಲೀ ಸರು ಹೋಗಿ ಅನಂತರ ಗುತ್ತಿಗೆ ಕೊಡಿಸಬೇಕಾದ ಪ್ರಸಂಗ ಒದಗಿತ್ತು. ಇದಕ್ಕೆ ಕಾರಣ ಐದಾರುವರ್ಷ ಗಳಿಂದ ಗೇಣಿ ಕಾನೂನನ್ನು ಸರ್ಕಾರದವರು ಕೂಲಂ ಕಷವಾಗಿ ವಿಮರ್ಶಿಸಿದ್ದಾರೆ. ಒಂದೇ ಸಾರಿ ಒಂದು ಕಾನೂನನ್ನು ಮಾಡದೆ ಪದೇ ಪದೇ ಪೀಸ್‌ಮೀಲಾಗಿ ಮಾಡಿರುವುದು. ಅದರಿಂದ ಕೆಲವರಲ್ಲಿ ತಪ್ಪು ಅಭಿ ಪ್ರಾಯಗಳು ಬಂದು ಕೆಲವರು ಕೆಲಸಗಳು ಇಲ್ಲದೆ ಇರತಕ್ಕ ಜನರು ರೈತರ ಹತ್ತಿರ ದುಡ್ಡುಗಳನ್ನು ವಸೂ ಲ್ಮಾಡಿ ಅವರು ಈ ವರ್ಷ ಯಾವ ವಿಧವಾದ ಫಸ ಲನ್ನೂ ಜಮೀನ್ದಾರರಿಗೆ ಸಂದಾಯ ಮಾಡಬೇಕಾದ್ದು ಇಲ್ಲ ಎಂದು ತಪ್ಪು ತಿಳಿವಳಿಕೆಗಳನ್ನು ಕೊಟ್ಟು ಬಹಳ ಅನನುಕೂಲಗಳನ್ನು ಮಾಡಿದರು.

ಸಭಾಪತಿಯವರು.—ಯಾರು ಮಾಡಿದರು ?

ಶ್ರೀ ಟಿ. ವೆಂಕಟರಮಣಯ್ಯ.—ಕೆಲಸ ಇಲ್ಲದೆ ಇರುವ ಜನಗಳು. ಆದ್ದರಿಂದ ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುವುದು ಏನೆಂದರೆ ಯಾವುದಾದರೂ ಕಾನೂನು ಮಾಡಬೇಕಾದರೆ ಕೂಲಂಕಷವಾಗಿ ವಿಮರ್ಶಿಸಿ ಮಾಡಬೇಕು. ಇನ್ನೂ ಹತ್ತು ಹದಿನೈದು ವರ್ಷ ಗಳಕಾಲ ಯಾವ ವಿಧವಾಗಿಯೂ ಗೇಣಿದಾರರ ವಿಷ ಯದಲ್ಲಿ ಬೇರೆ ಕಾನೂನು ಮಾಡುವುದಿಲ್ಲ ; ಕಡ್ಡಾಯ ವಾಗಿ ಇಷ್ಟೇ ಉಳಿಸಿಕೊಳ್ಳುವುದು, ಇಷ್ಟೇ ಬಿಡ ತಕ್ಕದ್ದು ಎಂದು ಒಂದು ನಿಖರವಾದ ಕಾನೂನು ಮಾಡಿದರೆ ಜನರಿಗೂ ನಮ್ಮಿಡಿಯಾಗುತ್ತದೆ ; ಮತ್ತು ಜನರು ನಮ್ಮಲ್ಲಿ ಏನು ವಿಶ್ವಾಸ ಇಟ್ಟಿದ್ದಾರೆ ಅದಕ್ಕೂ ಬೆಲೆ ಸಿಕ್ಕಿದ ಹಾಗಾಗುತ್ತದೆ. ಪ್ರತಿಯೊಂದು ವರ್ಷವೂ ಕಾನೂನನ್ನು ಹೊಸದಾಗಿ ಸೇರಿಸಿದರೆ ಜನರು ನಮ್ಮ ವಿಷಯದಲ್ಲಿ ಏನು ವಿಶ್ವಾಸ ಇಟ್ಟುಕೊಂಡಿದ್ದಾರೆ ಅದು ನಶಿಸಿ ಹೋಗುವುದಕ್ಕೆ ಅವಕಾಶವಾಗುತ್ತದೆ. ಸರ್ಕಾರದಲ್ಲಿ ನಾನು ಪ್ರಾರ್ಥಿಸುವುದು ಇಷ್ಟೆ : ಯಾವ ಒಂದು ಕಾನೂನೇ ಆಗಲೀ ಒಂದು ಖಚಿತವಾದ ಅಭಿಪ್ರಾಯವನ್ನು ನಿರೂಪಿಸಿ ಅದರಂತೆ ಮಾಡ ತಕ್ಕದ್ದು ಒಳ್ಳೆಯದು. ಇನ್ನು ಸೀಲಿಂಗ್ ವಿಷಯ. ನನ್ನ ಅಭಿಪ್ರಾಯದಲ್ಲಿ ಯಾವಾಗಲೂ ಕೂಡ ಒಬ್ಬ ಮನುಷ್ಯನಿಗೆ ಆದಾಯ ಇಷ್ಟೆ ಬರುತ್ತದೆ ಎಂದು ಹೇಳತಕ್ಕದ್ದು ಬಹಳ ಕಷ್ಟವಾಗುತ್ತದೆ. ಕಾರಣ ಮಳೆ ಬೆಳೆ ಇಲ್ಲದಿರುವ ವರ್ಷ ಏನೂ ಇರು ವುದಿಲ್ಲ. ನೀರಾವರಿ ಇರತಕ್ಕ ಕಡೆ ಸರಿಯಾಗಿ ನೀರು ಸೌಕರ್ಯ ಇದ್ದರೆ ಹೆಚ್ಚು ಗೊಬ್ಬರವನ್ನು ಗೋದು ಗಳನ್ನು ಹಾಕಿ ಬಹಳ ಮುತುವರ್ಜಿಯಿಂದ ವ್ಯವ ಸಾಯ ಮಾಡಿದರೆ ಆಗ ಅವನು ಏನಾದರೂ ಫಲಕಾಣ ಬಹುದು. ಆದ್ದರಿಂದ ಇಷ್ಟೇ ನಿಖರವಾಗಿ ಒಬ್ಬ ವ್ಯವಸಾಯಗಾರನಿಗೆ ಉತ್ಪತ್ತಿ ಇದೆ ಎಂದು ಹೇಳ ತಕ್ಕದ್ದು ಯಾರಿಂದಲೂ ಸಾಧ್ಯವಿಲ್ಲ. ಕಾರಣ, ಯಾವ ಖರ್ಚು ವೆಚ್ಚಗಳ ಪಟ್ಟಿಯನ್ನು ಬರೆದು ಇಟ್ಟು ಕೊಳ್ಳಲು ಅನುಕೂಲ ಅವನಲ್ಲಿಲ್ಲ. ಇದರ ಮೇಲೆ ಬರೆದು ಇಟ್ಟುಕೊಂಡಿರುವುದನ್ನು ನೋಡಿ ತಿಳಿದುಕೊಳ್ಳುವುದು ಕೂಡ ಅವನಿಗೆ ಬಹಳ ಕಷ್ಟವಾದ ಕೆಲಸ. ವ್ಯವಸಾಯ ಗಾರರು ವಿದ್ಯಾವಂತರೂ ಆಗಿಲ್ಲದಿರುವುದರಿಂದ ಕಾಫಿ ಪ್ಲಾಂಟೇಷನ್ನು, ಟೀ ಮತ್ತು ರಬ್ಬರ್ ಎಸ್ಟೇಟುಗಳಲ್ಲಿ ಖರ್ಚಿನ ಬಾಬುಗಳನ್ನು ಬರೆಯುವಂತೆ ರೈತನು ಬರೆದಿಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಆದುದರಿಂದ ಈ ವ್ಯವಸ್ಥೆಯಲ್ಲಿ ಒಂದು ceiling limit ಗಾಗಿ 1,200, 5,400 ರೂಪಾಯಿಗಳು ಎನ್ನತಕ್ಕದ್ದು ಅಷ್ಟು ಹೊಂದಿಕೊಳ್ಳುವುದಿಲ್ಲವೆಂದು ನನ್ನ ಅಭಿಪ್ರಾಯ ವನ್ನು ತಮ್ಮಮುಂದೆ ಇಟ್ಟಿದ್ದೇನೆ. ಕೊನೆಯದಾಗಿ ಮನುಷ್ಯನು ವಿದ್ಯಾವಂತನಾಗಿ ಅವನ ಇಚ್ಛೆಗೆ ಅನು ಸಾರವಾಗಿ ಯಾವ ವ್ಯತ್ತಿಯನ್ನಾದರೂ ಅನುಸರಿಸ ಬಹುದು. ಅದನ್ನು ಮೊಟಕುಮಾಡಬೇಕು ಎಂದರೆ ಯಾರಿಂದಲೂ ಸಾಧ್ಯವಿಲ್ಲ. ಎಲ್ಲ ಕಡೆಗಳಲ್ಲಿ ಅವನು ತನ್ನ ಸ್ವಂತ ಸಾಮರ್ಥ್ಯಗಳಿಂದಲೇ ತನ್ನ ಸಂಪಾದ ನೆಯನ್ನು ಮಾಡುತ್ತಾನೆ. ನನ್ನ ಸ್ವಂತ ಅನುಭವ ದಿಂದ ಹೇಳುವುದಾದರೆ, ಮೈಸೂರಿನ ಹತ್ತಿರ ಒಬ್ಬ ಜಮೀನುದಾರರಲ್ಲಿ ಒಂದು ಜಮೀನಿತ್ತು. ನಾನು ನೋಡಿದ ಹಾಗೆ ಆ ಜಮೀನಿನಿಂದ ಸಾಲಿಯಾನ 1,800 ರೂಪಾಯಿಗಳ ಗುತ್ತಿಗೆ ಬರುತ್ತಿತ್ತು. ಅಲ್ಲದ್ದ ರೈತರು ಎಲ್ಲರೂ ಸೇರಿಕೊಂಡು ನರಿಯಾದ ಖರ್ಚನ್ನು ಸರ್ಕಾಲ ದಲ್ಲಿ ಮಾಡದೆ ಐದಾರುವರ್ಷಗಳಲ್ಲಿ ಅದರ ಗುತ್ತಿಗೆ ಯನ್ನು ನಾಲ್ಕು ನೂರು ರೂಪಾಯಿಗಿಳಿಸಿದರು. ಹೀಗಾದಾಗ ಆ ಜಮೀನುದಾರರು ಇದರ ಉತ್ಪತ್ತಿ ಸರಿಯಾಗಿಲ್ಲವೆಂದು ಮಾರಬೇಕಾಗಿಬಂತು, ಮಾರಿ ದರು. ಮಾರಿದಮೇಲೆ ಮತ್ತೊಬ್ಬರು ಸ್ವಂತವಾಗಿ ಈ ವ್ಯವಸಾಯದಲ್ಲಿ ಅನುಭವವಿರುವವರು ಈ ಜಮೀ ನನ್ನು ಮಾಡುತ್ತಿದ್ದಾರೆ. ಇವರು ಅದೇ ರೈತರಿಂ ದಲೇ ಕೆಲಸ ಮಾಡಿಸುತ್ತಿದ್ದಾರೆ. ಇದಕ್ಕಾಗಿ ಹೇರಳ ವಾಗಿ ದುಡ್ಡನ್ನು ಖರ್ಚುಮಾಡಿ ಇದೇ ರೀತಿಯಾಗಿ ಕೆಲಸ ಮಾಡುತ್ತಿರುವುದರಿಂದ ಅದರ ಉತ್ಪತ್ತಿ ಹೆಚ್ಚಾಗಿದೆ. ಹೀಗೆ ಸ್ವಂತ ಹಿಡುವಳಿಗೆ ಕೊಟ್ಟಾಗ ನನ್ನ ಅನುಭವ ದಿಂದ ಹೇಳುವುದಾದರೆ, ಬಂಡವಾಳವನ್ನು ಹಾಕಿ ಸ್ವಲ್ಪ ಮುಂದುವರಿಸುವಂತೆ ಮಾಡಿದರೆ ಅದರಿಂದ ವ್ಯವಸಾಯ ಉತ್ತಮಗೊಳ್ಳುತ್ತದೆ. ವ್ಯವಸಾಯ ದಲ್ಲಿ ಸಕಾಲದಲ್ಲಿ ಕೆಲಸ ಮಾಡದಿದ್ದರೆ ಸರಿಯಾದ ಫಲ ದೊರಕುವುದಿಲ್ಲ. ಮಳೆ ಎಂಟು ದಿವಸ ಮೊದಲು ಬಂದರೂ ಸರಿ ಹೋಗುವುದಿಲ್ಲ. ಮಳೆ ಬಂದು ಮೂರು ದಿನಗಳಲ್ಲಿ ನರಿಯಾಗಿ ಬಿತ್ತನೆ ಕೆಲಸವನ್ನು ಮಾಡದಿದ್ದರೆ ಆ ವ್ಯವಸಾಯ ಪೆಲ್ಲ ಹಾಳಾಗುತ್ತದೆ. ಕೂಲಿ ಆಳುಗಳನ್ನು ನೇಮಿಸಿ ವ್ಯವಸಾಯವನ್ನು ಮಾಡ ಬೇಕಾದರೆ ಯಾರೇ ಆಗಲೀ ಬರಿಯ ಕೈಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ರೈತರನ್ನು ಉದ್ಧಾರ ಮಾಡಬೇಕು ಎಂದರೆ ಅವರಿಗೆ ತಕ್ಕಹಾಗೆ ಆಧುನಿಕ ಸಕಲ ಸೌಲಭ್ಯಗಳನ್ನು ಒದಗಿಸದೇ ಇದ್ದರೆ ಯಾವ ರೈತನಿಂದಲೂ ಇದರಲ್ಲಿ ಎಷ್ಟು ಉತ್ಪತ್ತಿ ಸಿಕ್ಕಬೇಕೋ ಅಷ್ಟು ಉತ್ಪನ್ನವನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಈ ರೀತಿಯಾದ ಎಲ್ಲ ಸೌಕರ್ಯಗಳನ್ನು ರೈತನಿಗೆ ಕೊಟ್ಟರೆ ಹೆಚ್ಚು ಉತ್ಪನ್ನವನ್ನು ಬೆಳೆಸುವುದಕ್ಕೆ ಸಾಧ್ಯ ವಾಗುತ್ತದೆ. ಇದಕ್ಕಾಗಿ ವಿಪುಲವಾದ ಖರ್ಚು ಮಾಡದೇ ಇದ್ದರೆ ಹೆಚ್ಚಿನ ಉತ್ಪನ್ನವನ್ನು ಬೆಳೆಯುವು ದಕ್ಕೆ ಆಗುವುದಿಲ್ಲ. ಈ ದೃಷ್ಟಿಯಲ್ಲಿ ಸರಕಾರ ಯೋಚನೆಮಾಡಿ ಎಲ್ಲ ವಿಷಯಗಳನ್ನೂ ಪುಷ್ಟೀಕರಿಸಿ ಮುಂದೆ ಮಾಡತಕ್ಕ ಕಾನೂನನ್ನು ಒಂದು ಅತ್ಯು ತ್ತಮವಾದ ಕಾನೂನನ್ನಾಗಿಮಾಡಿ ಜನರಿಗೆ ಯಾವ ವಿಧವಾದ ನ್ಯೂನತೆಗಳೂ ಇಲ್ಲದಂತೆ ಮಾಡತಕ್ಕದ್ದು ಒಳ್ಳೆಯದು ಎಂದು ಇಷ್ಟನ್ನು ಹೇಳಿ, ನನಗೆ ಇಷ್ಟು ಮಾತುಗಳನ್ನು ಆಡುವುದಕ್ಕೆ ಅವಕಾಶವನ್ನು ಕೊಟ್ಟಿ ದ್ದಕ್ಕಾಗಿ ನನ್ನ ವಂದನೆಗಳನ್ನು ತಮ್ಮಲ್ಲಿ ಅರ್ಪಿಸಿ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

ನಭಾಪತಿಯವರು.–ಈಗ ಉಪಾಹಾರಕ್ಕಾಗಿ ಅರ್ಧ ಗಂಟೆಕಾಲ ಎದ್ದು ಮತ್ತೆ ನಾಲ್ಕು ಗಂಟೆಗೆ ಸೇರೋಣ.

The House adjourned for recess at Thirty Minutes past Three of the Clock and re-assembled at Four of the Clock.

[MR. CHAIRMAN in the Chair]

ಶ್ರೀ ಕೆ. ಎಂ. ನಂಜುಂಡಪ್ಪ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ನಾನು ಜತ್ತಿ ಸಮಿತಿಯ ವರದಿಯ ಮೇಲೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಈಗಾಗಲೇ ನನ್ನ ಮಾನ್ಯ ಮಿತ್ರರನೇಕರು ಮೂರು ದಿವಸಗಳಿಂದಲೂ ಅನೇಕ ಸಂಗತಿಗಳನ್ನು ಕೂಲಂಕಷವಾಗಿ ತಿಳಿಸಿರುತ್ತಾರೆ. ನಾನು ಈಗ ಹೆಚ್ಚಾಗಿ ಹೇಳಲು ಬಯಸುವುದಿಲ್ಲ. ಕೆಲವು ವಿಷಯಗಳನ್ನು ಮಾತ್ರ ಸಭೆಯ ಗಮನಕ್ಕೆ ತರುತ್ತೇನೆ.

ಭೂಮಿಯನ್ನು ಭೂಮಾಲಕರೇ ಮಾಡಬೇಕೇ ಹೊರತು ಭೂಮಿಯು ಸಮಾಜಕ್ಕೆ ಸೇರತಕ್ಕದ್ದಲ್ಲ. ಆ ಸಮಾಜಕ್ಕೆ ಸೇರಿದವರು ಇಟ್ಟುಕೊಳ್ಳುವುದಿಲ್ಲ. ಏಕೆಂದರೆ, ಕಷ್ಟಪಟ್ಟು ವರ್ಷಗಟ್ಟಳೆ ಮಾಡಿರುವ ಭೂಮಿಯನ್ನು ಬಿಡುವುದು ಸರಿಯಲ್ಲ. ನನ್ನ ಸ್ವಂತ ಆಸ್ತಿಯೆಂದು ಬಹಳ ತೊಂದರೆಯಿಂದ ಸಾಗುವಳಿ ಮಾಡಿರುವ ಭೂಮಿಯನ್ನು ಹೀಗೆ ಹೋಗಲು ಬಿಡಬಾರದು. ಸಂಪಾದನೆ ಮಾಡಿರತಕ್ಕ ಜಮೀನು ಭೂ ಮಾಲೀಕನ ಬಳಿಯೇ ಇರಬೇಕಾಗಿದೆ. ಸಮಾಜಕ್ಕೆ ಸೇರುವುದಕ್ಕೆ ಅವಕಾಶವಿಲ್ಲ. ಸಮಾಜಕ್ಕೆ ಸೇರಬೇಕು, ಸಮಾಜಕ್ಕೆ ಕೊಡಬೇಕು ಎಂದು ಬಹಳ ಸುಲಭವಾಗಿ ಹೇಳಬಹುದು. ಆದರೆ ಸಮತಾವಾದ ಸಮಾಜ ಮಾಡಬೇಕೆಂದು ಹೇಳಿ ಭೂ ಮಾಲಿಕನು ಭೂಮಿಯನ್ನು ಬಿಟ್ಟುಬಿಡುವುದಿಲ್ಲ. ಅವನು ಸ್ವಂತವಾಗಿ ತನ್ನ ಜಮೀನಿಗಾಗಿ ಹೆಚ್ಚಿನ ವೆಚ್ಚವನ್ನು ಖರ್ಚು ಮಾಡಿರುವುದರಿಂದ ಆ ಜಮೀನಿನ ಜವಾಬ್ದಾರಿಯೆಲ್ಲ ಅವನೊಬ್ಬನಿಗೇ ಸೇರಿದ್ದು. ಆದರೆ ನೌಕರರಾಗಿರುವ ಪ್ರತಿಯೊಬ್ಬರೂ ಜಮೀನನ್ನು ಸಮಾಜಕ್ಕೆ ಕೊಡಬೇಕು ಎಂದು ಹೇಳುವುದನ್ನು ನೋಡಿದರೆ ಬಹಳ ಶೋಚನೀಯವಾಗಿ ಕಾಣುತ್ತಿದೆ. ಆದರೆ ಈ ಟೆನೆನ್ಸಿ ಆಕ್ಟನ್ನು ಜಾರಿಗೆ ತಂದಾಗ ಏನೇನು ಪರಿಣಾಮವಾಯಿತು ಎನ್ನುವುದನ್ನು ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ನನ್ನ ಡಿಸ್ಟ್ರಿಕ್ಟಾದ ಕೋಲಾರದಲ್ಲೇ ಇದರಿಂದ ಬಹಳ ಕಷ್ಟಗಳಾದುವು. ಅಲ್ಲಿಯ ತಾಲ್ಲೂಕು ಆಫೀಸುಗಳಲ್ಲಿ ಇದರ ವಿವಾದದ ಕೇಸುಗಳ ಫೈಸಲಾತಿಗಾಗಿ ಪರಿಷೆಯಂತೆ ಜನ ಸೇರುತ್ತಿದ್ದರು. ಆದರೆ ಒಂದು ಕೇಸಾದರೂ ಕೂಡ ಇತ್ಯರ್ಥವಾಗುತ್ತಿರಲಿಲ್ಲ. ಭೂ ಮಾಲೀಕನಿಗೂ ಉಳುವವನಿಗೂ ಹೋಲಿಸಿದರೆ ಬಹಳ ವ್ಯತ್ಯಾಸಗಳಿರುತ್ತವೆ. ಹದಿನೈದು ಜನ ಇರತಕ್ಕ ಒಂದು ಸಂಸಾರದಲ್ಲಿ ಹಳ್ಳಿಯಲ್ಲಿ ಎಲ್ಲರೂ ವ್ಯವಸಾಯವನ್ನೇ ನಂಬಿರುವುದಿಲ್ಲ. ಒಬ್ಬ ವಿದ್ಯಾವ್ಯಾಸಂಗ ಮಾಡಲು ಹೋಗುತ್ತಾನೆ. ಅಂತಹವನನ್ನು ಓದುವುದರಿಂದ ಬಿಡಿಸಿ ಜಮೀನನ್ನು ಉಳಲಿಕ್ಕೆ ಎಂದು ಕರೆದು ತಂದರೆ ಅವನಿಂದ ಈ ಭೂಮಿಯ ಕೆಲಸ ಮಾಡಲು ಸಾಧ್ಯವಿಲ್ಲ. ಜಮೀನುದಾರರಾದವರಿಗೆ ಭೂಮಿಯನ್ನು ರೈತರಿಂದ ಮಾಡಿಸುವುದು ಎಷ್ಟು ಕಷ್ಟ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ. ರೈತರಾದವರು ಪ್ರತಿ ವರ್ಷವೂ ಜಮೀನಿಗಾಗಿ ಹೆಚ್ಚು ವೆಚ್ಚವನ್ನು ಮಾಡಲಾರರು. ಭೂ ಮಾಲೀಕನಾದವನೇ ಈ ವೆಚ್ಚಗಳನ್ನೆಲ್ಲ ಹೊತ್ತು ಕಷ್ಟಪಟ್ಟು ಭೂಮಿಗಾಗಿ ಕಷ್ಟಪಡುತ್ತಿರುತ್ತಾನೆ. ಅಂತಹ ಜಮೀನನ್ನು ನೀವು ಸಮಾಜಕ್ಕೆ ಬಿಟ್ಟುಕೊಡು ಎಂದು ಸುಲಭವಾಗಿ ಹೇಳಬಹುದು. ಹಾಗೆ ನಾವುಕೊಡುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಈ ಜತ್ತಿ ಸಮಿತಿಯ ರಿಪೋರ್ಟಿನಿಂದ ದೇಶಕ್ಕೆ ಹಾನಿಕರವೇ ಹೊರತು ಅದರಿಂದ ಯಾವ ಪ್ರಯೋಜನವೂ ಇಲ್ಲ.

ಸ್ವಾಮಿ, 1,200 ರೂಪಾಯಿಗಳಷ್ಟು ವರಮಾನ ಬರುವ ಜನಗಳಿರುವ ಒಂದು ಸಂಸಾರಕ್ಕೆ ಎನ್ನುವುದೇನೋ ಒಪ್ಪತಕ್ಕದ್ದೇ. ನೂರು ರೂಪಾಯಿಗಳ ಸಂಬಳವೇ ಹೆಚ್ಚು ಎನ್ನತಕ್ಕ ಜನಗಳು ಒಬ್ಬ ರೈತನಿಗೆ 20 ರೂಪಾಯಿಗಳ ವರಮಾನ ಸಾಕೇ ಎನ್ನುವುದನ್ನು ಯೋಚಿಸಬೇಕು. 5,400 ಎಂದು ಸೀಲಿಂಗೇನೋ ಇಟ್ಟಿದ್ದಾರೆ.

ನಮ್ಮ ತಾಲ್ಲೂಕಿನ ಒಂದು ಹಳ್ಳಿಯಲ್ಲಿ 130 ಜನರ ಒಂದು ಸಂಸಾರವಿದೆ. ಅವರ ವಿಷಯವಾಗಿ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಡಿ. ವೆಂಕಟರಾಮಯ್ಯನವರು ಹೇಳಿದ್ದಾರೆ. ನೂರು ಜನಗಳಿರುವ ಜನಗಳೆಲ್ಲ ಸೇರಿ ಒಂದು ಸಂಸಾರದವರಾಗಿದ್ದಾರೆ. ಅವರಲ್ಲಿ ಇಪ್ಪತ್ತೈದು ಜನ ಈ ಗೇಣಿದಾರಿ ಸಮಿತಿಯ ವರದಿಯಂತೆ ಬೇರೆಯಾಗಬೇಕಾಗುತ್ತದೆ. ಅದರಿಂದ ಅವರ ಮನೆಯೆಲ್ಲ ಭಾಗವಾಗಬೇಕಾಗುತ್ತದೆ, ಅಂತಹದನ್ನು ಉಳಿಸಬೇಕು ; ಮತ್ತು ಉಳಿಸುವುದಕ್ಕೆ ಇದರಲ್ಲಿರುವ ನಿರ್ಬಂಧದಿಂದ ಆಗುತ್ತಿಲ್ಲ. ಸರಕಾರ ಜಮೀನನ್ನೇನೋ ತೆಗೆದುಕೊಳ್ಳಲಿ ಎಂದರೆ, ಅಂತಹ ಒಂದು ಸಂಸಾರಕ್ಕೆ ಹೇಗೆ ಪರಿಹಾರವನ್ನು ಕೊಡುತ್ತಾರೆ. ನನ್ನಂತಹವನೊಬ್ಬನಿಗೇ ಈಗಿನ ಕಾಲದಲ್ಲಿ 300 ರೂಪಾಯಿಗಳ ಸಂಬಳವೇ ನನ್ನ ಜೀವನಕ್ಕೆ ಸಾಕಾಗುವುದಿಲ್ಲ, ಅದಕ್ಕಾಗಿ ಇನ್ನು ಹೆಚ್ಚಾಗಿ ಕೊಡಬೇಕಾಗಿದೆ.

ಹೀಗೆ ಸಮಾಜದಲ್ಲಿ ಕೆಲವರ ಅಂತರವನ್ನು ತಗ್ಗಿಸಿ ಮತ್ತೆ ಕೆಲವರ ಅಂತರವನ್ನು ಹೆಚ್ಚುಮಾಡುವುದರಲ್ಲಿ ಯಾವ ನ್ಯಾಯವಿದೆ ? ಬಾಕಿ ಜಮೀನ್ದಾರರ ವಿಚಾರ ಹಾಗಿರಲಿ, ನನ್ನ ವಿಚಾರವನ್ನೇ ನಾನು ಹೇಳುವುದಾದರೆ ನಾನೂ ಒಬ್ಬ ದೊಡ್ಡ ಜಮೀನ್ದಾರನೆ. ನಾಲ್ಕು ಪಂಪುಗಳನ್ನು ನನ್ನ ಜಮೀನಿಗೆ ಹಾಕಿಸಿ ವ್ಯವಸಾಯ ಮಾಡಿಸುತ್ತಿದ್ದೇನೆ. ಇಷ್ಟು ಆಸ್ತಿಯನ್ನು ಸಂಪಾದಿಸಬೇಕಾಗಿದ್ದರೆ ನಾನೂ ನನ್ನ ಪೂರ್ವೀಕರೂ ಅದೆಷ್ಟು ಕಷ್ಟಪಟ್ಟಿದ್ದೇವೆಂಬುದು ನಮಗೇ ಗೊತ್ತು. ಆದರೂ ಈ ನಮ್ಮ ಆಸ್ತಿಯೆಲ್ಲ ಪೇಟೆಯಲ್ಲಿರತಕ್ಕ ಒಬ್ಬ ಸಾಹುಕಾರರ ಕಾರಿನ ಬೆರೆಗೆ ಸಮವಿಲ್ಲ. ಹೀಗೆ ನಾವು ಎಷ್ಟೇ ದೊಡ್ಡ ಜಮೀನ್ದಾರರಾದಾಗ್ಯೂ ನಮಗೆ ಒಂದು ಕಾರನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಏನೋ ಈ ರೀತಿಯ ಒಂದು ಸೋಗನ್ನೆಬ್ಬಿಸಿ ಜಮೀನಿಲ್ಲದ ಕೆಲವು ಬಡವರಿಗೆ ಜಮೀನು ಕೊಟ್ಟರೆ ಮುಂದೆ ಅವರಿಂದ ಸುಲಭವಾಗಿ ಓಟನ್ನು ಪಡೆಯಲು ಅನುಕೂಲವಾಗುತ್ತದೆಂದು ಹೇಳಿ ಈರೀತಿ ಮಾಡತಕ್ಕದ್ದು ಯಾವ ನ್ಯಾಯ ? ಈಗ ಸರ್ಕಾರದವರು ನ್ಯಾಷನಲ್ ಡೆವಲಪ್‌ಮೆಂಟ್ ಸ್ಕೀಂ, ಕಮ್ಯೂನಿಟಿ ಪ್ರಾಜೆಕ್ಟ್ ಮುಂತಾದುದರ ಬಗ್ಗೆ ಏಳು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದರೆ ಅದರಿಂದ ದೇಶಕ್ಕಾಗಿರುವ ಪ್ರಯೋಜನವೇನು? ಬಡವನಿಗೇನು ಉದ್ಧಾರಮಾಡಿದಂತಾಯಿತು? ಆ ಹಣವೆಲ್ಲ ಕೇವಲ ಕಾರು, ಆಫೀಸರುಗಳ ಟೂರಿಂಗಿಗೇ ಆಗಿಹೋಯಿತು. ಆ ಯೋಜನೆಗಳಲ್ಲಿ ಏನೂ ಒಂದು ಮಕ್ಕೀಕಾಮಕ್ಕಿ ಕೆಲಸ ನಡೆಯುತ್ತಿದೆ. ನಮ್ಮ ಜಿಲ್ಲೆಯಲ್ಲಿ ಈ ಸ್ಕೀಂನ ಬಗ್ಗೆ ರಚಿಸಿರತಕ್ಕ ಸಮಿತಿಯಲ್ಲಿ

(ಶ್ರೀ ಕೆ. ಎಂ. ನಂಜುಂಡಪ್ಪ)

ನಾನೂ ಕೂಡ ಒಬ್ಬ ಸದಸ್ಯನಾಗಿದ್ದೇನೆ. ಶಿಡ್ಲಘಟ್ಟ ದಿಂದ ಗೋರಿಬಿದನೂರಿಗೊಂದು ಟಪ್ಪಾಲು ಕಳಿಸುವು ದಕ್ಕೆ ಅದಕ್ಕೇ ಒಂದು ಜೀಪ್ ಬೇಕಾಗಿದೆ. ಇಲ್ಲಿ ಸರ್ಕಾರದವರೇನೋ ಸುಲಭವಾಗಿ ಪ್ರತಿಯೊಂದು ಕೆಲಸವನ್ನೂ ಕೊ-ಆಪರೇಟಿವ್ ಬೇಸಿಸ್ ಮೇಲೆ ನಡೆ ಸುವುದುತ್ತಮ ಎಂದು ಹೇಳುತ್ತಾರೆ. ಹಳ್ಳಿಗಳಲ್ಲಿ ಒಂದು ಮನೆಯವರೇನಾದರೂ ಸ್ವಲ್ಪ ಕಸವನ್ನು ಪಕ್ಕದ ಮನೆಯವರ ಕಡೆಗೆ ಒತ್ತರಿಸಿದ್ದರೆ ಅದಕ್ಕೇ ಎಷ್ಟೋ ದೊಡ್ಡ ಜಗಳಗಳಾಗಿವೆ. ಹಾಗೆ ಸರ್ಕಾರ ದವರಿಗೆ ಜಮೀನಿಲ್ಲದ ಬಡಜನರ ಬಗ್ಗೆ ಒಂದು ಕನಿಕರ ವಿದ್ದರೆ ಅವರ ಸುಪರ್ದಿನಲ್ಲಿರುವ ಹತ್ತಾರು ಲಕ್ಷ ಪಾಳುಬಿದ್ದಿರುವ ಬಂಜರ್ ಭೂಮಿಯನ್ನು ಅವರಿಗೆ ಕೊಟ್ಟು ಅಲ್ಲ ಕೋ-ಆಪರೇಟೀವ್ ಬೇಸಿಸ್ ಮೇಲೆ ಕೆಲಸ ನಡೆಸುವಂತೆ ಮಾಡಲಿ, ಅವರಿಗೆ ಮನೆಗಳನ್ನು ಕಟ್ಟಿಸಿಕೊಡಲಿ, ಬಾವಿಗಳನ್ನು ತೋಡಿಸಿಕೊಡಲಿ, ಅದಕ್ಕೆ ಯಾರೂ ಅಡ್ಡಿಬರುವುಲ್ಲ. ಅಷ್ಟು ಶಿವಾಯಿ ಈ ಕಾರ್ಯಕ್ಕೆ ಊರಿನವರ್ಯಾರೂ ತಮ್ಮ ಜಮೀನನ್ನು ಬಿಟ್ಟು ಕೊಡುವುದಕ್ಕೆ ಈ ದಿವಸ ತಯಾರಾಗಿಲ್ಲ. ಈ ಸಮಿತಿಯವರು ವ್ಯವಸಾಯಗಾರನಿಗೆ ಒಂದು ಸಂಸಾ ರಕ್ಕೆ ಒಂದು ವರ್ಷಕ್ಕೆ 1,200 ರೂಪಾಯಿಗಳ ಆದಾ ಯಬಂದರೆ ಸಾಕೆಂದು ಹೇಳಿದ್ದಾರೆ. ಆದರೆ ಇದು, ತೀರಾ ಕಡಮೆಯೆಂದು ನಾನು ಹೇಳುತ್ತೇನೆ. ಐದು ಜನರಿರತಕ್ಕಂಥ ಒಂದು ಸಂಸಾರಕ್ಕೆ ತಿಂಗಳೊಂದಕ್ಕೆ ತಲಾ ಒಂದು ನೂರು ರೂಪಾಯಿಗಳಂತೆ ಒಂದು ವರ್ಷಕ್ಕೆ ಆರು ಸಾವಿರ ರೂಪಾಯಿಗಳ ವರಮಾನ ಬರುವಂತೆ ನಿಗದಿಮಾಡಿ, ಇನ್ನೂ ದೊಡ್ಡ ಸಂಸಾರ ಗಳಿಗೆ ಒಂದು ವರ್ಷಕ್ಕೆ ಕನಿಷ್ಠಪಕ್ಷ 12 ಸಾವಿರ ರೂಪಾಯಿಗಳ ವರಮಾನ ಬರುವಂತೆ ಭೂಮಿಯ ಮಿತಿಯನ್ನು ನಿಗದಿಮಾಡಬೇಕೆಂದು ಹೇಳುತ್ತೇನೆ. ಜಮೀನಿಲ್ಲದವರಿಗೆ ಜಮೀನು ಕೊಡಿ. ಈ ಸಮಿತಿಯ ವರ ವರದಿಯಲ್ಲಿ ಏನೂ ಇಲ್ಲ. ಏನೋ ಸರ್ಕಾರಕ್ಕೆ ಒಂದು ವರದಿ ಒಪ್ಪಿಸಬೇಕಲ್ಲ ಎಂದು ಹೀಗೆಲ್ಲ ಬರೆದು ಕೊಟ್ಟಿದ್ದಾರೆ. ಈ ಜತ್ತಿ ಸಮಿತಿಯವರು ನಮ್ಮ ಕೋಲಾರಕ್ಕೂ ಬಂದಿದ್ದರು. ಅಲ್ಲದ್ದುದೆಲ್ಲ ಕೇವಲ ಅರ್ಧಗಂಟೆ ಕಾಲ ಮಾತ್ರ. ಅನಂತರ ಅವರು ತಮಗೆ K.G.F. ನ ಪ್ರೋಗ್ರಾಂ ಇದೆಯೆಂದು ಹೇಳಿ ಹೋಗಿ ಬಿಟ್ಟರು. ಹಾಗೆ ಇವರು ಅಲ್ಲಿಗೆ ಬಂದು ಟ್ರಾವಲರ್ಸ್ ಬಂಗಲೆಯಲ್ಲಿ ಹಾಯಾಗಿ ಅರ್ಧಗಂಟೆಯ ಕಾಲವಿದ್ದು ಮುಂದಕ್ಕೆ ಪ್ರಯಾಣ ಬೆಳಸಿದರು. ಆದರೆ ನನಗೆ ಶ್ರೀ ಜತ್ತಿಯವರ ಪರಿಚಯವೇ ಇರಲಿಲ್ಲ-ಅವರನ್ನು ನಾನು ನೋಡೇ ಇರಲಿಲ್ಲ. ಮೊನ್ನೆತಾನೆ ನಾನು ಅವರನ್ನು ಇಲ್ಲೇ ನೋಡಿದೆ. "ನೀವೇನೇ ಸ್ವಾಮಿ ಈ ಒಂದು ವರದಿಯನ್ನು ಬರೆದು ಸರ್ಕಾರಕ್ಕೆ ಒಪ್ಪಿಸಿದವರು" ಎಂಬುದಾಗಿ ಕೇಳಿದೆ. ಅದಕ್ಕೆ ಅವರು ಹೌದು, ಸರ್ಕಾರದವರು ಈ ವಿಚಾರದಲ್ಲಿ ಒಂದು ವರದಿಯನ್ನು ಒಪ್ಪಿಸಬೇಕೆಂದು ಒಂದು ಸಮಿತಿಯನ್ನು ಮಾಡಿದರು, ಆದ್ದರಿಂದ ನಾವು ಒಂದು ವರದಿಯನ್ನು ಒಪ್ಪಿಸಬೇಕಾ ಗಿತ್ತು. ಅವರ ಪ್ರಕಾರ ಈ ವರದಿಯನ್ನು ಒಪ್ಪಿಸಿದ್ದೇ ನೆಂದು ಹೇಳಿದರು. ಆದರೆ ಇದರಿಂದ ಸರ್ಕಾರಕ್ಕಾದು ದೇನೆಂದರೆ 20-30 ಸಾವಿರ ರೂಪಾಯಿಗಳ ಖರ್ಚು. ಆದರೆ ನಾನೇ ಇಂಥ ಕಮಿಟಿಯಲ್ಲಿದ್ದಿದ್ದರೆ ಇಂಥ ವರದಿ ಒಪ್ಪಿಸುವುದಕ್ಕೆ ಬದಲಾಗಿ ರಾಜೀನಾಮೆ ಕೊಟ್ಟು ಮನೆಗೆ ಬರುತ್ತಿದ್ದೆನು. ವ್ಯವಸಾಯ ಮಾಡದಿರತಕ್ಕವರೆಲ್ಲ ಜಮೀನನ್ನು ಬಿಟ್ಟುಕೊಡಬೇಕು; ಉಳುವವನೇ ಭೂಮಿಗೆ ಬಡೆಯನಾಗಬೇಕು ಎಂದರೇನು ಅರ್ಥ? ಹಾಗಾದರೆ ವ್ಯವಸಾಯಮಾಡದವರಿಗಾರಿಗೂ ಭೂಮಿ ಇರಲೇ ಕೂಡದೋ? ಈ ಒಂದು ಗಾಬರಿ ಯಿಂದ ನನ್ನ ಮಕ್ಕಳ ವಿದ್ಯಾಭ್ಯಾಸ ಹೋಯಿತು. ಅಲ್ಲಿಗಾದರೂ ಶಾಂತಿಯಿದೆಯೇ ಎಂದರೆ ಯಾರೇ ಆಗಲೀ ಇಷ್ಟು ಭೂಮಿಗಿಂತ ಜಾಸ್ತಿ ಇಟ್ಟುಕೊಳ್ಳಬಾರ ದೆಂದು ಹೇಳಿದರೆ ಆಗ ನನ್ನ ಜಮೀನೂ ಹೋಗುತ್ತದೆ. ಇದೇನು ನ್ಯಾಯವೋ ನಾನು ಕಾಣೆ. ವ್ಯವಸಾಯ ಗಾರರಿಗೆ ಯಾರಿಗೆ ಭೂಮಿಯಿಲ್ಲವೋ ಅಂಥವರಿಗೆ ಸರ್ಕಾರದವರು ತಮ್ಮ ಕೈಯಲ್ಲರುವ ಭೂಮಿ ಯನ್ನು ಕೊಡಲಿ. ಆದನ್ನು ಬಿಟ್ಟು ಜಮೀನ್‌ದಾ ರರಲ್ಲರತಕ್ಕ ಜಮೀನನ್ನು ನೀವು ಬೇರೆಯವರಿಗೆ ಉಳಲು ಭೂಮಿಯಿಲ್ಲದವರಿಗೆ ಬಿಟ್ಟುಕೊಡಬೇಕೆಂದರೆ ಅದು ಹೇಗೆ ಸಾಧ್ಯ? ಮೊನ್ನೆತಾನೆ ನಾನು ನಮ್ಮ ಗ್ರಾಮದಲ್ಲಿ ಬೇರೆಯವರೊಬ್ಬರ ಜಮೀನನ್ನು ಐದು ಸಾವಿರಕ್ಕೆ ಕೊಂಡಿದ್ದೇನೆ. ಅದಕ್ಕೋಗಾಗಲೇ 15 ಸಾವಿರಕ್ಕೂ ಮೇಲ್ಪಟ್ಟು ಖರ್ಚುಮಾಡಿದ್ದೇನೆ. ಆದರೆ ಅಲ್ಲೇ ಇನ್ನು 200-300 ಎಕರೆ ಜಮೀನು ಖರೀ ದಿಗಿದೆ. ಆದರೆ ಅಲ್ಲಿ ಕೊಳ್ಳತಕ್ಕವರೇ ಇಲ್ಲ. ಏಕೆಂದರೆ ಸರ್ಕಾರದವರು ಪುಕ್ಕಟೆಯಾಗಿ ಜಮೀನು ಕೊಡಿಸು ತ್ತಾರೆಂಬ ಆಸೆಯಿಂದ ಜನರು ತಪ್ಪಗಿದ್ದಾರೆ. ಸರ್ಕಾರದವರು ಒಂದು ವೇಳೆ ಹಾಗೆ ಜಮೀನನ್ನು ಪುಕ್ಕಟೆಯಾಗಿ ಕೊಡಬಹುದು. ಆದರೆ ನಾಳೆ ಯಾವ ಸಂಸ್ಥೆಯವರೂ ಅವರಿಗೆ ಒಂದು ಕಾಸನ್ನೂ ಕೂಡ ಸಾಲ ಕೊಡುವುದಿಲ್ಲ. ಸರ್ಕಾರಕ್ಕೇ ಒಂದು ವೇಳೆ ಅವನು ಸಾಲಕ್ಕೆ ಅರ್ಜಿ ಹಾಕಿಕೊಂಡರೂ—ಅವರು ಸಾಲಕೇಳತಕ್ಕ ಆಸ್ತಿಗೆ ಬೆಲೆಯೇನೆಂದು ಕೇಳುತ್ತಾರೆ. ಅದಕ್ಕೇನು ಮಾಡುವುದು! ಅದಕ್ಕೆ ಸಾಲಕೊಡುವ ವರು ಅವನಿಗೇನಯ್ಯ, ಆ ಜಮೀನನ್ನು ಸರ್ಕಾರದವರು ಪುಕ್ಕಟೆಯಾಗಿ ಕೊಟ್ಟಿದ್ದಾರೆ, ಅವನಿಗೆಲ್ಲ ಸಾಲಮಂ ಜೂರು ಮಾಡುವುದಕ್ಕಾಗುತ್ತದೆ ಎಂದು ಕೇಳುತ್ತಿ ದ್ದಾರೆ. ಅಲ್ಲಿಗೆ ಆ ಬಡವನ ಉದ್ಧಾರವಾಯಿ ತೇನು! ಹಾಗಿಲ್ಲದೆ ಜಮೀನಿನ ಕ್ರಯಪತ್ರದಲ್ಲಿ ಅದರ ಬೆಲೆ ಆರು ಸಾವಿರ ಎಂದು ಹಾಕಿದ್ದರೆ ಆಗ ಯಾರಾ ದರೂ ಅದಕ್ಕೆ ಸಾಲಕೊಟ್ಟಾರು. ಹೀಗಿರುವುದರಿಂದ ಈ ನಿಮ್ಮ ಯೋಜನೆಯಲ್ಲಿ ನಿರ್ಗತಿಕನು ಇನ್ನೂ ನಿರ್ಗತಿ ಕನಾಗುತ್ತಾನೆಯೇ ಶಿವಾಯಿ ಅವನೇನೂ ಗತಿಕನಾ ಗುವುದಿಲ್ಲ. ಹೀಗೇ ನೀವು ಹೇಳುವುದೆಲ್ಲ ಒಂದು, ಮಾಡು ವುದು ಮತ್ತೊಂದು. ಈ ದಿವಸ ಸರ್ಕಾರಕ್ಕೆ ಯಾರೇ ಸಾಲಕ್ಕಾಗಿ ಅರ್ಜಿಹಾಕಲಿ ಅದುಇಂಡಸ್ಟ್ರಿಯಲ್ ಬಗ್ಗೆ ಕೇಳಿರತಕ್ಕ ಸಾಲವೇ ಆಗಿದ್ದರೂ ಸಾಲಕೇಳತಕ್ಕವನಿಗೆ ಆಸ್ತಿಯಿದ್ದೇತೀರಬೇಕು. ಇಂಥ ಪರಿಸ್ಥಿತಿಯಲ್ಲಿ ಒಬ್ಬನ ಆಸ್ತಿಯನ್ನು ಕಿತ್ತು ಇನ್ನೊಬ್ಬನಿಗೆ ಕೊಡಲು ಸಾಧ್ಯವಿದೆಯೇ ಎಂದು ಕೇಳುತ್ತೇನೆ. ಹಳ್ಳಿಗಳಕಡೆ ಏನಾದರೂ ಒಬ್ಬ ಜಮೀನ್ದಾರನಿಗೆ ಒಂದು ಎಕರೆ ಜಮೀನೇನಾದರೂ ಈ ರೀತಿ ಕಿತ್ತುಕೊಂಡಿದ್ದೇ ಆದರೆ ಪಟ್ಟಣಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಸಿರತಕ್ಕ ಮನೆಯ ಮಾಲೀಕರಿಗೆ ಎಂದಿಗೂ ಉಳಿಗಾಲವಿಲ್ಲ. ಅವನು ಈ ದಿವಸ ಮನೆಗಳನ್ನು ಯಾರ್ಯಾರಿಗೆ ಬಾಡಿಗೆಗೆ ಕೊಟ್ಟಿರುತ್ತಾನೋ ಅವ ರನ್ನು "ನೀವು ಮನೆಬಡಬೇಡಿ ಆ ಮನೆ ನಿಮ್ಮದೇ ಎಂದು ತಕರಾರುಹೂಡಿ ಎಂದು ಹೇಳಿಕೊಡತಕ್ಕ ಅವಕಾಶ ತೀರ ಹತ್ತಿರದಲ್ಲಿದೆ. ಅಂತೂ ಇಂತೂ ಎರಡು ಕಡೆಗಳಿಂ ದಲೂ ವ್ಯಾಜ್ಯಗಳು ಸರ್ಕಾರಕ್ಕೆ ಬಂದೇ ಬರುತ್ತವೆ. ಆಗ ನಾವೂ ನೀವೂ ಯಾರೂ ಉಳಿಯುವುದಿಲ್ಲ. ಹೀಗೆಲ್ಲ ಆಗತಕ್ಕ ಸಂಭವಗಳಿರುವುದರಿಂದ ಈಗ ಈ ಸಮಿತಿ ಯವರು ಒಪ್ಪಿಸಿರತಕ್ಕ ನಲಹೆಗಳೊಂದೂ ಸರಿಯಾಗಿಲ್ಲ; ತಾವು ಇದನ್ನು ನಿಷ್ಪಕ್ಷಪಾತದಿಂದ ಜಾರಿಗೆ ತರುವುದಾ

ಗಿದ್ದರೆ ಪ್ರತಿಯೊಂದು ಬಾಬಿನಲ್ಲೂ ಯಾರ್ಯಾರಿಗೆ ಎಷ್ಟೆಷ್ಟು ನಲ್ಲಬೇಕೆಂಬುದನ್ನು ಮೊದಲು ನಿರ್ಧರ ಮಾಡಿ. ಶಿಡ್ಲಘಟ್ಟದಿಂದ—ಬೆಂಗಳೂರಿಗೆ ಬರತಕ್ಕ ದಾರಿಯಲ್ಲಿ ವ್ಯವಸಾಯಕ್ಕೆ ಯೋಗ್ಯವಾದಂಥ ಜಮೀನು ಲಕ್ಷಾಂತರ ಎಕರೆಇದೆ. ಅಲ್ಲಿ ನೀರಿನ ಅನುಕೂಲವೂ ಇದೆ. ಬಾವಿಮಾಡಿಸುವುದಕ್ಕೂ ಅವಕಾಶವಿದೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಬೇಕಾದರೂ ತಾವು ಖರ್ಚುಮಾಡಿ, ಯಾರ್ಯಾರಿಗೆ ಜಮೀನಿಲ್ಲವೋ ಅವರಿಗೆ ಅಲ್ಲಿ ಜಮೀನು ಕೊಡುವುದರ ಜೊತೆಗೆ ಮನೆಯನ್ನೂ ಕಟ್ಟಿಸಿಕೊಡಿ; ಅಲ್ಲಿ ಪ್ರತಿಯೊಬ್ಬರಿಗೂ ನಾಲ್ಕು ಎಕರೆ ಭೂಮಿ, ಒಂದು ಬಾವಿ, ಒಂದು ಜೊತೆ ಎತ್ತು ಇಷ್ಟನ್ನು ಕೊಟ್ಟು ಅವರು ಆ ಜಮೀನನ್ನು ಯಾರಿಗೂ ಇಷ್ಟು ವರ್ಷಗಳವರೆಗೆ ಮಾರಾಟ ವಗೈರೆ ಮಾಡಬಾರದೆಂದು ನಿಗದಿಮಾಡಿ. ಈ ರೀತಿ ತಾವು ಅನುಕೂಲ ಎಲ್ಲೆಲ್ಲಿದೆಯೋ ಅಲ್ಲ ಮಾಡುತ್ತ ಹೋದರೆ ಇನ್ನು ಹತ್ತು ವರ್ಷಗಳೊಳಗಾಗಿ ನಮ್ಮ ದೇಶದಲ್ಲ ಬಡವರೆಂಬುವವರೇ ಇಲ್ಲದಂತಾಗುತ್ತದೆ. ಈ ರೀತಿ ಏನಾದರೂ ಒಂದು ಏರ್ಪಾಡನ್ನುಮಾಡುವುದು ಬಿಟ್ಟು ಬರಿಯ ಮಾತುಗಳಿಂದ ಆಶೆ ಉಬ್ಬಿಸುವುದನ್ನು ಬಿಟ್ಟು ಮತ್ತು ಖಾಲ ಯೋಜನೆಗಳನ್ನು ಮಾಡುತ್ತಾ ಕಾಲ ಕಳೆಯುವುದರಿಂದೇನೂ ಪ್ರಯೋಜನವಾಗುವುದಿಲ್ಲ. ನಮ್ಮನೆ ನಾವು ಅಂಥ ಯೋಜನೆ ಮಾಡುತ್ತೇವೆ, ಇಂಥ ಯೋಜನೆ ಮಾಡುತ್ತೇವೆಂದು ಬರಿಯ ಸಿನ್ಪಂಆದ ಮಾತುಗಳನ್ನಾಡುತ್ತಾಹೋದರೇನು ಸಾರ್ಥಕ? ಬಡವನೇನು ಉದ್ಧಾರವಾಗಲಲ್ಲ. ತತ್ತ್ವ ಹೇಳುವುದು ಬಹಳ ಸುಲಭ. ಆದರೆ ಅದರಂತೆ ನಡೆಯುವುದು ಬಹಳ ಕಷ್ಟ. ಆದ್ದರಿಂದ ಸರ್ಕಾರದವರು ಈ ಜಿತ್ತ ಸಮಿತಿಯ ವರದಿಯನ್ನು ಕಿಂದಕ್ಕಡಬೇಕೆಂದು ಹೇಳುತ್ತೇನೆ. ಈ ಒಂದು ವರದಿಯನ್ನು ಸರ್ಕಾರದವರೇ ತಂದಿದ್ದರೆ ಆಗ ನಾವು ಇದಕ್ಕೆ ಒಂದು ಸ್ವಾಗತವನ್ನು ಬಯಸಬೇಕಾಗಿತ್ತು. ಆದರೆ ಅದೇ ಸ್ವಾಗತವನ್ನು ನಾವು ಈಗಲೂ ಇದಕ್ಕೆ ಬಯಸಬಹುದಿತ್ತು. ಹಾಗೆ ನಾವು ಈ ವರದಿಗೊಂದು ಸ್ವಾಗತ ಬಯಸಿ ನಮ್ಮ ಊರುಗಳಿಗೆ ವಾಪಸು ಹೋದಾಗ ನಮ್ಮಗತಿ ಏನಾಗಬೇಕು? ಈವರೆಗೆ ಮಾತನಾಡಿರತಕ್ಕ ಸದಸ್ಯರಲ್ಲಿ ಶೇಕಡ 75 ರಷ್ಟು ಸದಸ್ಯರು ಈ ವರದಿಯನ್ನು ವಿರೋಧಿಸಿದ್ದಾರೆ. ಆದ್ದರಿಂದ ಈ ವರದಿಯಿಂದ ಖಂಡಿತ ಸುಖವಿಲ್ಲ. ಇದರಿಂದ ದೇಶಕ್ಕೆ ತುಂಬ ತೊಂದರೆಯಾಗುತ್ತದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಲ್. ರಾಮಯ್ಯ (ನಾಮನಿರ್ದೇಶ ಹೊಂದಿದವರು).—ಮಾನ್ಯ ಸಭಾಪತಿಗಳೇ, ಮೈಸೂರು ಗೇಣಿದಾರರ ಶಾಸನರಚನೆಗೆ ಸಂಬಂಧಪಟ್ಟ ವರದಿಯ ಕನ್ನಡ ಪ್ರತಿಯೊಂದನ್ನು ನಮ್ಮಗಳಿಗೆ ಓದಗಿಸಿದ್ದಾರೆ. ಆದರೆ ಈ ವರದಿಯಲ್ಲಿ ಉಪಯೋಗಿಸಿರತಕ್ಕ ಹಲವಾರು ಪದಗಳು ನಮಗೆ ಅರ್ಥವಾಗುತ್ತಿಲ್ಲ. ಪುಟ 13ರಲ್ಲಿ ''ದಂಟಿನ'' ಎಂಬುದಾಗಿ ಒಂದು ಪದವನ್ನು ಪಯೋಗಿಸಿದ್ದಾರೆ. ನಮ್ಮ ಕಡೆ ''ದಂಟು'' ಎಂದರೆ ಸಾರಿಗೆ ಹಾಕುವ ದಂಟು ಎಂದು ಅರ್ಥವಾಗುತ್ತದೆ. ಹೀಗೆ ಇನ್ನೊಂದುಕಡೆ ''ಲಾಗೂ'' ಎಂಬುದಾಗಿದೆ. ಇದೂ ಕೂಡ ನಮಗೆ ಸರಿಯಾಗಿ ಅರ್ಥವಾಗುವುದಿಲ್ಲ. ಮತ್ತೊಂದು ಕಡೆ ''ರಾವಣಿ'' ಎಂಬ ಶಬ್ದವನ್ನುಪಯೋಗಿಸಿದ್ದಾರೆ. ನಮ್ಮಕಡೆ ರಾವಣಿ ಎಂದರೆ ಹಾಡು ಹೇಳುವುದೆಂದು ಅರ್ಥವಾಗುತ್ತದೆ. ಇನ್ನೂ ಹಾಗೆಯೇ ಮುಂದುವರಿದು ಈ ವರದಿಯನ್ನು ವಿಮರ್ಶೆಮಾಡುತ್ತಾ ಹೋದರೆ ಇದರಲ್ಲಿ ಹೇಳಿರುವ ತತ್ತ್ವಗಳು ಕಾಂಗ್ರೆಸ್ ಸರ್ಕಾರಕ್ಕೂ ಅನ್ವಯಿಸಿದಂತೆ ಕಾಣುವುದಿಲ್ಲ, ಸೋಷಿಯಲಿಸ್ಟ್ಪಕ್ಷದ ತತ್ತ್ವಗಳಿಗೂ ಅನ್ವಯಿಸುವುದಿಲ್ಲ; ಕಮ್ಯುನಿಸ್ಟ್ ತತ್ತ್ವಗಳಿಗೂ ಇವು ಅನ್ವಯಿಸುವುದಿಲ್ಲ. ಕಾಂಗ್ರೆಸ್ ಸರ್ಕಾರದವರು ಯಾವ ಧೈರ್ಯದಿಂದ ಈ ದಿವಸ ಈ ಭೂಸುಧಾರಣೆಗಳನ್ನು ಜಾರಿಗೆ ತರಬೇಕೆಂದು ಮನಸ್ಸು ಮಾಡಿದ್ದಾರೋ ಇದೇ ರೀತಿ ಅವರು ಎಲ್ಲ ವಿಚಾರಗಳಲ್ಲೂ ಹೀಗೇ ಮಾಡಬೇಕಾಗಿರುತ್ತದೆ.

ಕಾಂಗ್ರೆಸ್ ತತ್ತ್ವ ಏನಿದೆ ಎಂದರೆ, ಕೆಳಮಟ್ಟದಲ್ಲಿರುವವರನ್ನು ಮೇಲ್ಮಟ್ಟಕ್ಕೆ ತರುವುದು. ಆ ರೀತಿ ಮಾಡಬೇಕಾದರೆ ಹೆಚ್ಚಿಗೆ ಜಮೀನು ಇರುವವರ ಹತ್ತಿರ ತೆಗೆದುಕೊಳ್ಳಿ. ಅಲ್ಪ ಸ್ವಲ್ಪ ಇಟ್ಟುಕೊಂಡಿರುವವನು ಎಲ್ಲೋ ವಾಸಿಸಾಗಿರುತ್ತಾನೆ. ಅವನಿಗೇಕೆ ಭೂಮಿ ಇರಬೇಕೆಂದು ಶ್ರೀಮಾನ್ ಶೆಟ್ಟಿಯವರು ಹೇಳಿದರು. ಆದರೆ ಈ ವಿಚಾರದಲ್ಲಿ ಅನೇಕರು ವಿಶದವಾಗಿ ಹೇಳಿದ್ದಾರೆ. ಒಬ್ಬ ಮನುಷ್ಯ ತಾನು ಜಮೀನ್ದಾರನಾಗಿದ್ದು, ಜಮೀನು ಸಾಗುವಳಿ ಮಾಡುತ್ತ ತನ್ನ ಮಗನಿಗೆ ವಿದ್ಯಾಭ್ಯಾಸ ಮಾಡಿಸಿಕೊಂಡು ಜೀವನ ಮಾಡುತ್ತಿರುತ್ತಾನೆ. ತಂದೆ ತೀರಿಹೋಗುತ್ತಾನೆ. ಮಗ ಸರ್ಕಾರೀ ನ ಕರಿಯರ್ಲ್ಲೋ ಅಥವಾ ಖಾಸಗೀ ಸಂಸ್ಥೆಗಳಲ್ಲೋ ಕೆಲಸ ಮಾಡಿಕೊಂಡು ಇರುತ್ತಾನೆ. ಅವನು ಕೆಲಸದಿಂದ ನಿವೃತ್ತನಾಗುವಾಗ ಅವನ ಮಕ್ಕಳಿಗೆ ಸರ್ಕಾರದವರು ಕೆಲಸ ಕೊಡುವುದಿಲ್ಲ. ಎಲ್ಲೆ ಹೋದರೂ ನಿರುದ್ಯೋಗ ಸಮಸ್ಯೆ ಜಾಸ್ತಿ ಇರುತ್ತದೆ. ಅವನು ಯಾವ ರೀತಿ ಜೀವನ ಮಾಡಬೇಕೆಂಬುದನ್ನು ಮಾನ್ಯ ಶ್ರೀ ಶೆಟ್ಟಿಯವರು ಯೋಚಿಸಲಲ್ಲವೆಂದು ಕಾಣುತ್ತದೆ. ಹಿಂದೆ ಭಾಷಣ ಮಾಡಿದ ಮಹನೀಯರಲ್ಲಿ ಕೆಲವರು ಮಾತ್ರ ಮಧ್ಯಮವರ್ಗದವರ ವಿಷಯವನ್ನು ಪ್ರಸ್ತಾಪ ಮಾಡಿದರು; ಅವರೂ ಸಹ ಕೆಳಮಟ್ಟದವರನ್ನು ಮೇಲ್ಮಟ್ಟಕ್ಕೆ ತರಬೇಕೆಂದು ಹೇಳಿದರು ಸಂಸ್ಕೃತದಲ್ಲಿ, ಉತ್ತಮ, ಮಧ್ಯಮ, ಅಧಮ ಎಂದು ಮೂರು ಬಗೆಗಳಿವೆ ಆದರೆ ಅಧಮನ ಗತಿಯೇನು? ಭಾಷಣಕಾರರು ಇವರ ವಿಚಾರದಲ್ಲಿ ಏನೂ ಪ್ರಸ್ತಾಪ ಮಾಡಲಿಲ್ಲ. ಈಗ ಇಲ್ಲಿ ಚರ್ಚೆಯಾಗುತ್ತಿರುವ ಗೇಣಿ ವರದಿಯಲ್ಲಿ ಗ್ರಾಮದಲ್ಲಿ ರೈತರು ಯಾರು ಎಂಬ ಪ್ರಶ್ನೆಯನ್ನು ಮೊದಲು ಬಗೆಹರಿಸಬೇಕಾಗಿದೆ. ಕೂಲಿ ಮಾಡುವವರು ರೈತರೇ, ಅಥವಾ ಒಬ್ಬ ಜಮೀನ್ದಾರನಿಂದ ಗುತ್ತಿಗೆ ಪಡೆದು ಜಮೀನು ಮಾಡುವವರು ರೈತರೇ. ಇದು ಮೊದಲು ವಿಮರ್ಶೆ ಮಾಡಬೇಕಾದ ವಿಚಾರ. ಒಬ್ಬ ರೈತ ಜಮೀನ್ದಾರನಿಂದ ಒಂದು ಜಮೀನನ್ನು ಪಡೆದು ತನ್ನ ಕೂಲಿಗಾಗಿ, ಹೊಟ್ಟೆಬಟ್ಟೆಗಾಗಿ ತಾನು ಯಾರಿಂದ ಗುತ್ತಿಗೆ ಪಡೆದಿದ್ದಾನೋ ಅತನ ಜಮೀನಿನಲ್ಲಿ ಕೂಲಿಕೆಲಸ ಮಾಡುತ್ತಾನೆ. ಹಾಗಾದರೆ ರೈತ ಕೂಲಿಗಾರನಾದನೇ ಅಥವಾ ಜಮೀನ್ದಾರನಿಂದ ಕೂಲಿಪಡೆದು ಗುತ್ತಿಗೆದಾರನೆಂದನ್ನಿಸಿಕೊಂಡವನು ರೈತನೇ? ಆ ವಿಷಯವನ್ನು ಇದರಲ್ಲಿ ಯಾವ ರೀತಿಯಲ್ಲೂ ವಿಮರ್ಶೆ ಮಾಡದೆ ಇರುತ್ತಾರೆ. ಕೂಲಿಗಾರನಾದವನನ್ನು ಇನ್ನೂ ಅಧೋಗತಿಗೆ ಇಳಿಸಬೇಕೆಂಬ ಅಂಶ ಇದರಲ್ಲಿ ಕಾಣುತ್ತದೆ. ಆದ್ದರಿಂದ ಜಮೀನ್ದಾರನಾದವನು ಜಮೀನಿನಲ್ಲಿ ಕಷ್ಟಪಡದೆ ಕೂಲಿಗಾರನಿಂದ ಶ್ರಮ ತೆಗೆದುಕೊಂಡು ಬೆಳೆ ಬೆಳೆದು ತನ್ನ ಗುತ್ತಿಗೆದಾರನಿಗೆ ಎಷ್ಟು ಕೊಡಬೇಕೋ ಅಷ್ಟು ಪ್ರಮಾಣವನ್ನು ಕೊಟ್ಟು ಮಿಕ್ಕಿದ್ದನ್ನು ಅವನು ಉಪಯೋಗಿಸಿಕೊಳ್ಳುತ್ತಾನೆ. ಆದರೆ ರೈತ ಯಾರು ಎಂಬುದನ್ನು ದೀರ್ಘವಾಗಿ ವಿಮರ್ಶೆಮಾಡಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಪಾಳುಬಿದ್ದ ಜಮೀನುಗಳ ವಿಮರ್ಶೆ ಮಾಡೋಣ. ನಾನು ಸುಮಾರು 20-30 ವರ್ಷ

(ಶ್ರೀ ಎಲ್. ರಾಮಯ್ಯ)

ಗಳಿಂದಲೂ ಮೈಸೂರಿನಿಂದ ಬೆಂಗಳೂರಿಗೆ ಪ್ರಯಾಣ ಮಾಡುತ್ತಿರುತ್ತೇನೆ. ಆಹಾರಧಾನ್ಯಗಳ ಬೆಲೆ ಯಾವಾಗ ಜಾಸ್ತಿ ಇದೆಯೋ ಆ ಸಂದರ್ಭದಲ್ಲಿಯೂ, ಈಚೆಗೆ ಎಂದರೆ ಈ ಯುದ್ಧ ಪ್ರಾರಂಭವಾದ ಮೇಲೆ ಮತ್ತು ಆಹಾರದ ಬೆಲೆ ಜಾಸ್ತಿಯಾದಮೇಲೂ ಅನೇಕ ಬಂಡವಾಳಗಾರರು ಹಳ್ಳಿ ಕೊಳ್ಳಗಳನ್ನು ಮುಚ್ಚಿ ದ್ರಾಕ್ಷೆ ಗಿಡಗಳನ್ನು ಹೆಚ್ಚಿಗೆ ಬೆಳೆಸಿರುವುದನ್ನು ನಾವು ಬೆಂಗಳೂರಿನಿಂದ ಮೈಸೂರಿಗೆ ಹೋಗುವಾಗ ಕಾಣಬಹುದು. ಇನ್ನು ಕೆಲವು ದುಡ್ಡಿರುವ ಮನುಷ್ಯರು ಎಲ್ಲಿ ಜಮೀನು ಸಾಗುವಳಿಗೆ ಅನುಕೂಲವಾಗುತ್ತದೋ ಅಲ್ಲಿ ಹೆಚ್ಚಿಗೆ ಹಣವನ್ನು ಖರ್ಚುಮಾಡಿ, ಜಮೀನನ್ನು ಆಬಾದುಮಾಡಿ ಆಹಾರೋತ್ಪತ್ತಿಯನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದರಿಂದ ದೇಶದಲ್ಲಿ ಆಹಾರೋತ್ಪತ್ತಿ ಜಾಸ್ತಿಯಾಗುತ್ತಿದೆ ಎಂದು ನಾನು ಘಂಟಾಘೋಷವಾಗಿ ಹೇಳಬೇಕಾಗಿದೆ. ಹಾಗೆ ಹೇಳುತ್ತಾ ಈಗ ಜಮೀನನ್ನು ರೈತನಿಗೆ ಕೊಡಬೇಕು. ಕೂಲಿಗಾರನನ್ನು ರೈತನೆಂದು ಪರಿಗಣಿಸಿ ಜಮೀನನ್ನು ಕೊಡಬಹುದು. ಆ ರೀತಿ ಕೊಟ್ಟು ವ್ಯವಸಾಯಕ್ಕೋಸ್ಕರ ಗೊಬ್ಬರ, ನೇಗಿಲು ಪಗ್ಯೆರೆ ತೆಗೆದುಕೊಳ್ಳುವುದಕ್ಕೆ, ಮತ್ತು ಜಮೀನು ಆಬಾದುಮಾಡುವುದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಳ್ಳುವುದಕ್ಕೆ ಮತ್ತು ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಸರ್ಕಾರದವರು ಹಣವನ್ನು ಸಾಲದ ರೂಪವಾಗಿ ಒದಗಿಸಬೇಕು. ಶ್ರೀಮಾನ್ ನಂಜುಂಡಪ್ಪನವರು ಸರ್ಕಾರ ಸಾಲವನ್ನು ಕೊಡುವುದಿಲ್ಲವೆಂದು ಹೇಳಿದರು. ನೀವು ಈ ಕಾನೂನನ್ನು ಜಾರಿಗೆ ತಂದ ಮೇಲೆ ಯಾರು ದುಡ್ಡನ್ನು ಕೊಡುತ್ತಾರೆ? ಜಮೀನ್ದಾರನಾಗಲಿ ರೈತನಾಗಲಿ, ಯಾರೇ ಆಗಲಿ ಕೂಲಿ ಮಾಡುವವನಿಗೆ ಸಾಲವನ್ನೇ ಕೊಡುವುದಿಲ್ಲ. ಆಗ ಅವನು ಜಮೀನನ್ನು ಪಾಳು ಬಿಡಬೇಕಾಗುತ್ತದೆ. ಆಗ ಆಹಾರೋತ್ಪತ್ತಿ ಎಲ್ಲಿಂದ ಬಂತು? ದುಡ್ಡು ಇರುವವನು ಆಹಾರೋತ್ಪತ್ತಿಯನ್ನು ಜಾಸ್ತಿಮಾಡಬೇಕೆಂಬ ಭಾವನೆಯನ್ನಿಟ್ಟುಕೊಂಡು ತನ್ನಲ್ಲಿರುವ ಹಣವನ್ನು ಪಯೋಗಿಸಿ ಅದರಿಂದ ಲಾಭ ಪಡೆಯುತ್ತಾನೆ. ಈಗಾಗಲೇ ಅನೇಕ ಜಮೀನುಗಳನ್ನು ಪಾಳುಬಿಟ್ಟಿದ್ದಾರೆಂದು ಅನೇಕ ಮಹನೀಯರು ವಿಶದವಾಗಿ ಹೇಳಿದ್ದಾರೆ. ಹಾಗೆ ಮಾಡುವುದರಿಂದ ಸರ್ಕಾರಕ್ಕೆ ಬರತಕ್ಕ ವರಮಾನ ಖೋತಾ ಆಗುತ್ತದೆ ಎನ್ನುವುದನ್ನೂ ಕೂಡ ಯೋಚನೆ ಮಾಡಬೇಕು. ಈಗ ಜಮೀನು ಒಬ್ಬನಿಂದ ಇನ್ನೊಬ್ಬನಿಗೆ ಖರೀದಿ, ಭೋಗ್ಯ, ಆಧಾರವಾಗುತ್ತಿದೆ. ನಾಳೆ ಯಾರೂ ಅಂತಹ ಜಮೀನನ್ನು ಭೋಗ್ಯ, ಕ್ರಯ, ಆಧಾರಮಾಡಿಕೊಳ್ಳುವುದಿಲ್ಲ. ಇದರಿಂದ ರಿಜಿಸ್ಟ್ರೇಷನ್ ಫೀಸ್ ಮೂಲಕ, ಸರ್ಕಾರಕ್ಕೆ ಬರುವ ಆದಾಯ ಕೈತಪ್ಪಿ ಹೋಗುತ್ತದೆ. ಇದನ್ನು ಸರ್ಕಾರದವರು ದೀರ್ಘವಾಗಿ ಯೋಚನೆ ಮಾಡಬೇಕು.

ಇನ್ನೊಂದು ವಿಷಯ. 20 ವರ್ಷಗಳವರೆಗೂ ಕಂತು ಕೊಡಬೇಕೆಂದು ಹೇಳಿದ್ದಾರೆ. ಜಮೀನ್ದಾರನು ಕಪ್ಪಪಟ್ಟು ಜಮೀನನ್ನು ಆಬಾದು ಮಾಡಿ 20 ವರ್ಷಗಳವರೆಗೂ ಕಂತ ಕೊಡಬೇಕೆಂದು ಹೇಳಿದರೆ ಯಾವ ನ್ಯಾಯ? ಆಗ ಶೇಕಡ ನಾಲ್ಕು ಅಥವಾ ಶೇಕಡ ಐದರಂತೆ ಬಡ್ಡಿ ಹಾಕುತ್ತಾರೆ. ಆ 20 ವರ್ಷಗಳೊಳಗೆ ಒಂದು ವೇಳೆ ಆ ಜಮೀನ್ದಾರನು ಗೋತಾ ಆದರೆ ಆ ಸಾಲವನ್ನು ತೀರಿಸುವ ಕೆಲಸ ಮಗನಿಗೆ ಬರುತ್ತದೆ. ಈ ಚೆನೆನ್ಸಿ ಕಾನೂನು ತೆಗೆದುಕೊಂಡು ಬಂದಮೇಲೆ ಎಷ್ಟೋ ಜನ ಜಮೀನ್ದಾರರಿಗೆ ಗುತ್ತಿಗೆ ಕೂಡ ಕೊಡುತ್ತಿಲ್ಲ. ತಾನು ಕೊಟ್ಟಿದ್ದಕ್ಕೆ ರಸೀದಿ ಇಲ್ಲ, ಗುತ್ತಿಗೆ ಕರಾರು ಬರಯಲಿಲ್ಲ. ತಾನು ಎಲ್ಲವನ್ನೂ ಕೊಟ್ಟಿದ್ದೇನೆ ಎಂದು ಹೇಳುವ ಸನ್ನಿವೇಶ ನಾಳೆ ಬರುತ್ತದೆ. ಈ 20 ವರ್ಷಗಳಲ್ಲಿ ಸಾಲ ತೀರಿಸುವಾಗ ಒಂದೆರಡು ವರ್ಷ ಕಂತುಗಳನ್ನು ಕೊಡುವುದನ್ನು ನಿಲ್ಲಿಸಿ, ನನಗೆ ತೊಂದರೆಯಾಯಿತು, ಈ ವರ್ಷ ಬೆಳೆಯಾಗಲಿಲ್ಲ, ನಾನು ಹಣವನ್ನು ಕಂತಿನ ರೂಪವಾಗಿ ಎಲ್ಲಿಂದ ಕೊಡಲಿ ಎಂದು ಕೋರ್ಟಿಗೆ ದಾವಾ ಹಾಕುತ್ತಾನೆ. ಇದರಿಂದ 20 ವರ್ಷಗಳು ಹೆಚ್ಚು ಎನ್ನುವುದನ್ನು ಯೋಚನೆಮಾಡಿ. ಒಂದು ವೇಳೆ ಹೆಚ್ಚಿಗೆ ಜಮೀನನ್ನು ತೆಗೆದುಕೊಂಡರೆ, ಅವರ ಹಣ ಪೂರ್ತಿ ನಂದಾಯವಾಗಬೇಕು.

ಒಬ್ಬ ಸದಸ್ಯರು.—ಹಣಕ್ಕೆ ಬದಲು ಈಗ ಪೇಪರ್ ಕೊಡುತ್ತಾರೆ.

ಶ್ರೀ ಎಲ್. ರಾಮಯ್ಯ.—ಬಾಂಡ್ ವಿಚಾರ ಹೇಳಬೇಕಾಗಿಯೇ ಇಲ್ಲ. ಇಂಡಸ್ಟ್ರೀಸ್ ವಿಚಾರ. ನಮ್ಮ ಮೈಸೂರಿನಲ್ಲಿ ಅನೇಕ ಇಂಡಸ್ಟ್ರಿಗಳಿವೆ. ಅದರಲ್ಲಿ ಕೆಲವು ಇಂಡಸ್ಟ್ರಿಗಳನ್ನು ನೇರವಾಗಿ ನಮ್ಮ ಸರ್ಕಾರದವರೇ ನಡೆಸುತ್ತಿದ್ದಾರೆ. ಯಾವ ಇಂಡಸ್ಟ್ರಿ ಬಂಡವಾಳಗಾರನ ಕೈಯ್ಯಲ್ಲಿ ಇರುತ್ತದೋ, ಅಂಥ ಇಂಡಸ್ಟ್ರಿ ಎಫಿಷಿಯೆಂಟ್ ಆಗಿ ಕೆಲಸ ಮಾಡುತ್ತಿದೆ ಎಂದು ನಾನು ಹೇಳಬೇಕಾಗುತ್ತದೆ. ಸರ್ಕಾರದವರು ನಡೆಸುತ್ತಾ ಇರುವ ಇಂಡಸ್ಟ್ರೀಸ್‌ನಲ್ಲಿ ಬಹಳ ನಷ್ಟವಾಗುತ್ತಿದೆ. ಉದಾಹರಣೆಗೆ ಪೋರ್ಸಿಲೈನು ಫ್ಯಾಕ್ಟರಿ ತೆಗೆದುಕೊಂಡರೆ, ಸಾಧಾರಣವಾಗಿ ಮೂರು ನಾಲ್ಕು ವರ್ಷಗಳಿಂದಲೂ ಅದರಿಂದ ನಷ್ಟವಾಗುತ್ತಿದೆ. ಹಾಗೆಯೇ ಉತ್ಪತ್ತಿ ಜಾಸ್ತಿ ಮಾಡಬೇಕು ಎನ್ನುವ ಸಂದರ್ಭದಲ್ಲಿ ನಾವು ಜಮೀನನ್ನು ಬಂಡವಾಳಗಾರನ ಕೈಯಲ್ಲಿ ಕೊಟ್ಟರೆ ಅವರು ಎಷ್ಟುಮಟ್ಟಿಗೆ ಎಫಿಷಿಯೆನ್ಸಿಯಿಂದ ಕೆಲಸಮಾಡುತ್ತಾರೆ ಎಂಬುದನ್ನು ನೋಡಬಹುದು. ಜಮೀನು ಇಲ್ಲದೆ ಇರುವವರಿಗೆ ಕೊಡಬೇಕು ಎಂದರೆ ಇವೊತ್ತಿನ ದಿವಸ ಜಮೀನು ಕೊಟ್ಟರುವವರು ಜಮೀನನ್ನು ಉಳಿಸಿಕೊಂಡಿದ್ದಾರೆಯೇ ಎಂಬುದನ್ನು ನೋಡಬೇಕು. ಅನೇಕರು ಜಮೀನು ಮಾಡದೆ ಸ್ವಲ್ಪ ಆಬಾದು ಮಾಡುತ್ತಾರೆ. ಆದ್ದರಿಂದ ಯಾರು ಮುಂದೆ ಬರುತ್ತಾರೋ ಅಂಥವರಿಗೆ ಖಾಲಿ ಇರುವ ಜಮೀನು ಕೊಡಬೇಕು. ಆಹಾರ ಉತ್ಪತ್ತಿಯನ್ನು ಸರ್ಕಾರದವರು ದೃಷ್ಟಿಯಲ್ಲಿ ಇಟ್ಟುಕೊಂಡು ಐಶ್ವರ್ಯವಂತರಿಗೆ ಜಮೀನುಕೊಟ್ಟು ಅವರ ಕೈಕೆಳಗೆ ರೈತರನ್ನು ಕೊಟ್ಟರೆ ಕೆಲವಾರು ವರ್ಷಗಳಲ್ಲಿ ಕೊಟ್ಟ ಜಮೀನಿನ ಮೇಲೆ ಆಶೆ ಉಂಟಾಗಿ ಆ ಜಮೀನು ಸರಿಯಾಗಿ ಸಾಗು ಆಗುತ್ತದೆ. ಇದರಲ್ಲಿರುವ ಅನೇಕ ವಿಚಾರಗಳನ್ನೂ ತಮ್ಮ ಗಮನಕ್ಕೆ ತಂದಿದ್ದೇನೆ. ಇದು ಅಷ್ಟು ಸಮರ್ಪಕವಾಗಿಲ್ಲ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಿ. ಎಸ್. ತಿಮ್ಮಾರೆಡ್ಡಿ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ ಈ ನಮ್ಮ ಜತ್ತಿ ಸಮಿತಿಯವರು ಏನು ರಿಪೋರ್ಟು ಬರೆದಿದ್ದಾರೆ ಅದರ ಮೇಲೆ ಎರಡು ಮೂರು ಸೂಚನೆಗಳನ್ನು ಮಾಡಬೇಕು ಎಂದು ಇಚ್ಛಿಸುತ್ತೇನೆ. ಜತ್ತಿ ಸಮಿತಿಯವರು ಅಲ್ಪ ವತಿಯೊಳಗೆ ತಮಗೆ ತಿಳಿದಮಟ್ಟಿಗೆ ಅಂಕಿಸಂಖ್ಯೆಗಳನ್ನು ಕೂಡಿಸಿ ಬಹಳ ವೇಳೆ ತೆಗೆದುಕೊಳ್ಳದೆ ಒಂದು ಉತ್ತಮವಾದಂಥ ರಿಪೋರ್ಟು ಮಾಡಿದಾರೆ. ಇದು ತುಂಬ ಖರೆ ಇದೆ. ಆದರೆ ಅಷ್ಟು ಅಲ್ಪವತಿಯೊಳಗೆ ರಿಪೋರ್ಟ್ ಹೇಗೆ ತಯಾರು ಆಯಿತು ಎಂದು ನೋಡಿದರೆ ಅಷ್ಟು ಅಲ್ಪವತಿಯೊಳಗೆ ಆಗಿಲ್ಲ ಎಂದು ಹೇಳುತ್ತೇನೆ. ಶ್ರೀ ಜತ್ತಿಯವರಿಗೆ 20 ವರ್ಷದ ತಾಳಿಂ

ಇದೆ. ಮುಂಬೈ ಟೆನೆನ್ಸಿ ಕಾಯಿದೆ ಏನು ಇದೆ ಅದು 1937ರಲ್ಲೇ ಪ್ರಾರಂಭವಾಗಿದೆ. ಆ ಕಾಲಕ್ಕೆ ಜಮೀನ್ದಾರರು ಮತ್ತು ಗೇಣಿದಾರರು ಅಥವಾ ಲೇವಣಿದಾರರು ಅತ್ಯಂತ ಸೂಕ್ಷ್ಮವಾದ ವಿಚಾರ ವಿನಿಮಯವಾಗಿ ಒಂದು ಕಾಯಿದೆ ಆಗಿದೆ. ಆ ಕಾಯಿದೆಯೊಳಗೆ ಲೋಪದೋಷಗಳು ಕಂಡುಬಂದಾಗ ಮತ್ತೆ ಪುನಃ ಅಮೆಂಡ್‌ಮೆಂಟ್ಸ್ ತಂದರು. ಅದು ಪಾಸು ಆದಮೇಲೆ ಉತ್ತಮವಾದ ಕಾಯಿದೆ ಆಯಿತು. ಜಮೀನ್ದಾರರವತಿಯಿಂದ, ಗೇಣಿದಾರರವತಿಯಿಂದ ತಕರಾರು ಬಂದ ಮೇಲೆ ಮತ್ತೆ ಪುನಃ ಹೊಸದಾಗಿ 1955 ರೊಳಗೆ ಕಾಯಿದೆಯಾಯಿತು. ಆ ಕಾಲಕ್ಕೆ ಅವರು ಇದನ್ನೆಲ್ಲಾ ಹೀಗೆ ತಿಳಿದುಕೊಂಡಿರಬೇಕು. ಉತ್ತರ ಕರ್ನಾಟಕ ಬೇಜವಾಬ್ದಾರಿಯಿಂದ ಗೇಣಿದಾರ ಪಕ್ಷ ಕಟ್ಟಿ ಟೆನೆನ್ಸಿ ಕಾಯಿದೆಯನ್ನು ಆಗಲೇ ತರಬೇಕು ಎಂದು ಮಾಡಿಲ್ಲ. ಗೇಣಿದಾರರ ಕಾಯಿದೆ ಆಗುವುದಕ್ಕೆ ಮುಂಚೆ, ಉತ್ತರ ಕರ್ನಾಟಕದವರು 54 ಮಂದಿ ವಕಾಲತ್ತು ಮಾಡುವ ಪ್ರಸಂಗ ಬಂತು. ಅದರ ದೆಶೆಯಿಂದ ಬೊಂಬಾಯಿ ಸ್ಟೇಟಿನೊಳಗೆ ಏನು ಕಾಯಿದೆ ಆಗಿದೆ ಅದು ಉತ್ತರ ಕರ್ನಾಟಕದವರ ಸೌಮ್ಯತೆಯಿಂದ ಆಯಿತು ಎಂದು ನಮ್ಮ ಮೇಲೆ ಅಪವಾದ ಇದೆ. ಅಷ್ಟೆಲ್ಲಾ ತಾಲಂ ಅವರಿಗೆ ಇದೆ. ಶ್ರೀ ಜತ್ತಿಯವರು ಬಹಳ ತೀವ್ರವಾಗಿ ಈ ಕಾರ್ಯವನ್ನು ಮಾಡಿದರು. ಸರ್ವೇ ಸಾಧಾರಣವಾಗಿ ಗೇಣಿದಾರರ ಮತ್ತು ಜಮೀನ್ದಾರರ ಸಂಬಂಧ ಏನು ಎಂದು ತಿಳಿದುಕೊಂಡು ಸರ್ವಸಾಮಾನ್ಯವಾದ ರಿಪೋರ್ಟನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಮಾನ್ಯ ಶಾಸ್ತ್ರಿಯವರು ಹೇಳಿದರು ಭೂಸಂಪತ್ತು ಏನು ಇದೆ ಅದನ್ನೂ ಮನುಷ್ಯ ನ್ಯಾಕ್ಯಿಫೈಸ್ ಮಾಡುವುದಕ್ಕೆ ತಯಾರಾಗಿಲ್ಲ, ಭೂಸಂಪತ್ತು ಒಂದು ಪ್ರಾಣಿ ಇದ್ದಹಾಗೆ ಎಂದು. ಅಂದಮೇಲೆ ಹೀಗಿದ್ದರೂ ಕೂಡ ಜತ್ತಿ ರಿಪೋರ್ಟು ಮೂರು ನಾಲ್ಕು ಸೀಲಿಂಗ್ ಮಾಡಿದೆ. ಅದರಮೇಲೆ ಎಲ್ಲಾ ಮಾನ್ಯ ಸದಸ್ಯರೂ ಚರ್ಚೆ ಮಾಡಿದ್ದಾರೆ. ಆದರೆ ಅದನ್ನು ಸ್ವಾಗತ ಮಾಡಬೇಕಾಗುತ್ತದೆ. ನಾವು ಆಗಲೇ ನಮ್ಮ ಎರೆಕ್ಷನ್ ಮ್ಯಾನಿಫೆಸ್ಟೋದಿನಲ್ಲಿ ಇದನ್ನು ಕಬೂಲು ಮಾಡಿದ್ದೇವೆ. ಈ ಉದ್ದೇಶ ನಮ್ಮದು ಇದೆ. ಗೇಣಿದಾರರಿಗೆ ರೈತರಿಗೆ ಕಾಯಿದೆ ಮಾಡಿ ಸೌಲಭ್ಯಗಳನ್ನು ಒದಗಿಸಿ ಕೊಡುತ್ತೇವೆ, ಎಂದು ಕಳೆದ ಎರೆಕ್ಷನ್ ಪತ್ರದಲ್ಲಿ ಬರೆದು ಕೊಂಡಿದ್ದೇವೆ. ಅದನ್ನು ತಿಳಿದಮೇಲೆ ನಮಗೆ ಓಟು ಹಾಕಿರುವುದರಿಂದ ನಮ್ಮ ಮೇಲೆ ಬೇಜವಾಬ್ದಾರಿ ಇದೆ. ಇಲ್ಲಿ ಮೆಜಾರಿಟಿ ಪಾರ್ಟಿ ಕಾಂಗ್ರೆಸ್ ಇರುವ ದೆಶೆಯಿಂದ ನಮ್ಮ ಕರ್ತವ್ಯ ಮಾಡಬೇಕಾಗಿದೆ. ಕಾಂಗ್ರೆಸ್ಸಿನವರು ಸಮತಾಪಾದ ಸಮಾಜ ರಚನೆ ಮಾಡಬೇಕೆಂದು ಉದ್ದೇಶ ಇದೆ. ಆ ಉದ್ದೇಶದಿಂದಲೇ ಲುಕ್ಸಾನು ಆಗಲಿ ಅಥವಾ ಲಾಭವಾಗಲಿ ಈ ಕಾಯಿದೆ ಬರುವುದು ಅತ್ಯಂತ ಅನಿವಾರ್ಯ ಮತ್ತು ಇದನ್ನು ಸ್ವಾಗತ ಮಾಡಬೇಕು. ಇದರಿಂದ ಎಲ್ಲರಿಗೂ ಉಪಯೋಗ ಆಗುತ್ತದೆ. ಮಾನ್ಯ ಸದಸ್ಯರು ಹೇಳಿದರು ಜುಲುಮೆ ಮಾಡುತ್ತೇವೆ ಎಂದು. ಇದು ಕಮ್ಯುನಿಸ್ಟ್ ಪಾರ್ಟಿಯು ಅಲ್ಲ ಸೊಷಲಿಷ್ಟ್ ಪಾರ್ಟಿಯು ಅಲ್ಲ. ಇದು ಕಾಂಗ್ರೆಸ್ ಸಂಸ್ಥೆ. ಇದು ಒಂದು ಸರ್ವಸ್ ಇದ್ದ ಹಾಗೆ; ಇದರಲ್ಲಿ ಜಮೀನ್ದಾರರೂ, ಇದ್ದಾರೆ, ರೈತರೂ ಇದ್ದಾರೆ, ಗೇಣಿದಾರರೂ ಇದ್ದಾರೆ, ಕೂಲಿಗಾರರೂ, ಬಂಡವಾಳಿಗಾರರೂ ಇದ್ದಾರೆ. ಸರ್ವಸ್ಸನ್ನು ಉತ್ತಮ ರೀತಿಯಲ್ಲಿ ಆಡಿತೋರಿಸಬೇಕು ಎಂದು ಕಾಂಗ್ರೆಸ್ ಸಂಸ್ಥೆಯ ಉದ್ದೇಶ. ಯಾವರೀತಿಯಾದರೂ ಗೇಣಿದಾರರ ಮನಸ್ಸಿಗೆ ನಂತಾಪವಾಗಬಾರದು, ಗೇಣಿದಾರರಿಗೆ ಶೋಷಣೆ ಮಾಡುವ ಹಾಗೆಯೂ ಇರಬಾರದು ಆ ದೃಷ್ಟಿಯಿಂದ ಕಾಯಿದೆ ತರಬೇಕು. ಭೂಮಿಯಿಲ್ಲದವರಿಗೆ ಭೂಮಿ ಕೊಡುವುದು ಸರಿ. ಆದರೆ ಒಬ್ಬರ ಭೂಮಿ ಕಿತ್ತು ಇನ್ನೊಬ್ಬರಿಗೆ ಕೊಡುವುದು ಕಾಂಗ್ರೆಸಿನ ಉದ್ದೇಶವಲ್ಲ. ಕಾಂಗ್ರೆಸ್ ಹಾಗೆ ಮಾಡಲಿಲ್ಲ. ಈ ಜತ್ತಿ ಸಮಿತಿಯ ರಿಪೋರ್ಟ್ ನೋಡಿ ಹಳೆಯ ಮೈಸೂರಿನೊಳಗೆ ಬಹಳ ಮುಂದಿ ಗಾಭರಿಯಾಗಿಬ್ಬಾರೆ. ಈ ಕಾಯಿದೆ ಒಪ್ಪಿದಮೇಲೆ ನಮ್ಮಗತಿ ಏನು ? ಎಂದು ಹೆದರಿದ್ದಾರೆ. ಅಷ್ಟು ಗಾಬರಿಯಾಗತಕ್ಕ ಕಾರಣವಿಲ್ಲ. ಏತಕ್ಕೆಂದರೆ ನನ್ನ ವಿಷಯವನ್ನೇ ಹೇಳುವುದಾದರೆ ನನಗೆ 130 ಎಕರೆಯಿದೆ, ನನ್ನ ತಮ್ಮನಿಗೆ 150 ಎಕರೆ ಇದೆ. ನಾನು ಜಮೀನ್ದಾರನಲ್ಲ. ನಾನು ಸೀಲಿಂಗ್ ನೊಳಗೆ ಬರುವುದಿಲ್ಲ. ಜಮೀನ್ದಾರ ಯಾರೆಂದು ನಿರ್ಧಾರ ಮಾಡುವುದು ಕಠಿಣ. ಒಂದು ಜಿಲ್ಲೆಯಲ್ಲ ಅಲ್ಲ, ಒಂದು ತಾಲ್ಲೂಕು ಅಲ್ಲ, ಒಂದು ಊರು ಅಲ್ಲ, ಜಮೀನು ಜಮೀನಿಗೆ ವ್ಯತ್ಯಾಸ ಬರುತ್ತದೆ. ಒಬ್ಬರಿಗೆ 100 ಎಕರೆ ತಗಡುಕೊಳ್ಳುತ್ತಾರೆ, ಇನ್ನೊಬ್ಬರಿಗೆ ಐದು ಎಕರೆ ತೆಗೆದುಕೊಳ್ಳುತ್ತಾರೆ, ಇದರ ಸೀಲಿಂಗ್ ಹೀಗೆ ಇಡಬೇಕು ಎನ್ನುವುದು ಕಠಿಣ ಇದೆ. ಗೇಣಿದಾರರ ಕಾಳಿದೆ ಪಡುವ ಪ್ರಶ್ನೆಯಿಲ್ಲ. ಹಾಗೆಯೇ ಮಾಡಿದರೆ ತಪ್ಪು ಆಗುತ್ತದೆ. ಎಲ್ಲರೂ ಸಂತೋಷದಿಂದ ಇರಬೇಕು, ಎಲ್ಲರಿಗೂ ನ್ಯಾಯ ಕೊಡುತ್ತೇವೆ ಎನ್ನುವ ಕಾಲದಲ್ಲಿ ಯಾವ ಜಮೀನ್ದಾರ ಅನ್ನಿಸುತ್ತಾನೋ ಅವನು ಜಮೀನು ಹೋಗುತ್ತದೆ ಎಂದು ಹೇಳುವುದಕ್ಕೆ ಕಾರಣವಿಲ್ಲ, ಎಂದು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಜಮೀನ್ದಾರ ಕಾಯಿದೆ 1947 ಇತ್ತು. ಅದರಿಂದ ಮುಗ್ಗಟ್ಟು ಆಯ್ತು. ಹಾಗೆ ಆದ ಮೇಲೆ ಪರಿಸ್ಥಿತಿ ಅಲ್ಲೋಲ ಕಲ್ಲೋಲವಾಗಿ, ಆಗ ಒಂದು ತಿಳಿವಳಿಕೆ ಬಂತು.

ಈಗ ಜಮೀನುಹೊರರಿಲ್ಲ ಬಹುತೇಕ ಒಂದು ಐವತ್ತು ಎಕರೆ ಜಮೀನಿರಬಹುದು. ಅದರಲ್ಲಿ ಏನು ಅಥವಾ ಹತ್ತು ಎಕರೆಯನ್ನು ನಾಗು ಮಾಡಬೇಕಾದರೆ ಅದಕ್ಕೆ ತಕ್ಕಂತೆ ಮಳೆ ಬೇಳಬೇಕು. ಹವಾಬೇಕು. ಹೀಗೆ ಮಳೆ ಬಿದ್ದು ಆ ಭೂಮಿಯಿಂದ ಬೆಳೆದ ಉತ್ಪನ್ನಗಳನ್ನು ಮಾರಾಟಮಾಡಲಕ್ಕೆ ತಕ್ಕ ಮಾರುಕಟ್ಟೆಗಳು ಸಿಕ್ಕಬೇಕು.

ಈಗ ಇಲ್ಲಿ ಮಾಡಿರುವಂತೆ ಹಿಡುವಳಿಯಲ್ಲಿ ರೂ. 1,200 1,500, 5,400, ನಿಶ್ಚಿತವಾಗಿ ಬರುತ್ತದೆ ಎಂದು ಯಾರಾದರೂ ಜವಾಬ್ದಾರಿ ತೆಗೆದುಕೊಳ್ಳುತ್ತೀರೇನು ! ರೈತನು ಗೇಣಿದಾರನಾಗಿ, ಜಮೀನು ದಾರನಿಗೆ ಸರಿಯಾದ ಗೇಣಿಯನ್ನು ಕೊಡಬೇಕಾದರೆ ಮೊದಲು ಆತನಲ್ಲಿ ರೊಕ್ಕವಿದ್ದರೆ ತಾನೇ ಅವನು ಜಮೀನಿಗಾಗಿ ಖರ್ಚುಮಾಡಿ ಬೆಳೆಯನ್ನು ಬೆಳೆಯಲು ಅನುಕೂಲವಾಗುತ್ತದೆ ! ಇವನ್ನೆಲ್ಲ ವಿಚಾರಮಾಡಬೇಕು ; ಮತ್ತು ಈಗ ಸಮಿತಿಯು ಶಿಫಾರಸು ಮಾಡಿರುವಂತೆ ಹಿಡುವಳಿಯ ಮಿತಿಯೊಳಗೇ ಬಹುತೇಕ ಹಿಡುವಳಿದಾರರು ಪಾರಾಗುತ್ತಾರೆ, ಈಗ ನನ್ನಲ್ಲ 190 ಎಕರೆಯಷ್ಟು ಜಮೀನಿದ್ದರೆ ಅದಕ್ಕೆ ಎಷ್ಟು ಹಿಡುವಳಿ ಮಿತಿಯೆನ್ನುವುದನ್ನು ಮುಂದೆ ಅವರೇ 1,200, 1,500, 3,600, 5,600 ಹೀಗೆ ಎಲ್ಲರಿಗೂ ಬೇರೆಯಾಗಿ ಕೊಡುತ್ತಾರೆ. ಒಬ್ಬ ಜಮೀನುದಾರನಿಗೆ ಇಬ್ಬರು ಹುಡುಗರಿರುತ್ತಾರೆ. ಅವರನ್ನೆಲ್ಲ ಓದಿನ, ಅವರಿಗೆ ಸರಿಯಾದ ಶಿಕ್ಷಣವನ್ನು ಕೊಟ್ಟರೆ ಹಿಂದೂಸ್ತಾನದ ಸರಕಾರದಿಂದ ನೇಮಿತವಾಗಿರುವ ಡಿಗ್ರಿಯನ್ನು ಪಡೆಯುತ್ತಾರೆ. ಆದರೆ ಓದಿದವರೆಲ್ಲ ಹಿಂದೂಸ್ತಾನದ Prime Minister ಆಗಬೇಕೆಂದರೆ ಅದು ಸಾಧ್ಯ

(ಶ್ರೀ ಎ. ಎಸ್. ತಿಮ್ಮಾರೆಡ್ಡಿ)

ವಾಗುವುದಿಲ್ಲ. ಒಬ್ಬೊಬ್ಬರಿಗೆ ಒಂದೊಂದು ಬಾಬು ನಲ್ಲಿ ಆಸಕ್ತಿಯಿರುತ್ತದೆ. ಹೀಗೆ ಜಮೀನುದಾರರಾಗಿರುವವರು ದೊಡ್ಡ ವ್ಯವಸಾಯಗಾರರಾಗಿರುವುದಿಲ್ಲ. ಕೂಲಿಯವರ ಕೈಯಲ್ಲಿ ತಮ್ಮ ಜಮೀನಿನ ಕೆಲಸಗಳನ್ನು ಮಾಡಿಸುತ್ತಾರೆ. ಸ್ವಂತವಾಗಿ ವ್ಯವಸಾಯ ಮಾಡುವುದಿಲ್ಲ. ನಮ್ಮ ಉತ್ತರ ಕರ್ನಾಟಕದಲ್ಲಿ ಈ ರೀತಿಯಾಗಿ ವ್ಯವಸಾಯವನ್ನು ಮಾಡುತ್ತಿದ್ದಾರೆ. ಈ ಕೂಲಿಯವರು ಜಮೀನುದಾರರ ಹತ್ತೋಟಿಯಲ್ಲಿದ್ದು ಅವರು ಉತ್ತಮತರವಾದ ಕೆಲಸವನ್ನು ಮಾಡುತ್ತಿದ್ದಾರೆ. ಅಲ್ಲದೆ ಅಲ್ಲಿ ಗೇಣಿದಾರರು ತುಂಬ ಬರುತ್ತಾರೆ. ಶ್ರೀಮಂತರಾಗಿರುವವರು ತಮ್ಮ ಜಮೀನನ್ನು ಉತ್ತಮವಾದ ರೀತಿಯಲ್ಲಿ ಮಾಡುತ್ತಾರೆ. ಬಡವರಾದವರಿಗೆ ಹೀಗೆ ಖರ್ಚು ಮಾಡುವುದು ಕಷ್ಟವಾಗುತ್ತದೆ. ಈಗ ಯಾರಿಗಾದರೂ ರೋಗ ಬಂದರೆ ಔಷಧಿಗಾಗಿ ಡಾಕ್ಟರವರ ಬಳಿಗೆ ಹೋಗುತ್ತಾರೆ. ರೋಗವಿಲ್ಲದಿದ್ದರೆ ಹೋಗುವುದಿಲ್ಲ. ಹಾಗೆ ಗೇಣಿದಾರರು ಬಡವರಾಗಿದ್ದರೆ. ಜಮೀನುದಾರರಿಂದ ಸಹಾಯವನ್ನು ಪಡೆದು ಜಮೀನನ್ನು ಮಾಡುತ್ತಾರೆ. ಈಗ ಸುಮಾರು ಒಂದು ಸಾವಿರ ಅಥವಾ ಎರಡು ಸಾವಿರ ಎಕರೆ ಗಳಷ್ಟು ಜಮೀನಿದ್ದರೆ ಅಂತಹ ಕಡೆಗಳಲ್ಲಿ ಸರಿಯಾದ ಗೊಬ್ಬರ, ಬೀಜಗಳನ್ನು ಸರಬರಾಜುಮಾಡಿ ಅದಕ್ಕೆ ತಕ್ಕ ಯಂತ್ರೋಪಕರಣಗಳನ್ನು ಉಪಯೋಗಿಸಿದರೆ ವ್ಯವಸಾಯ ಮಾಡಲಿಕ್ಕೆ ಸಾಧ್ಯವಾಗುವುದು. ಇಲ್ಲದಿದ್ದರೆ ಆಗುವುದಿಲ್ಲ. ಇದಕ್ಕಾಗಿ ಈಗ ಈ ವರದಿಯಲ್ಲಿ ಹಿಡುವಳಿಯ ಮಿತಿಯನ್ನು ನಿರ್ಧರಿಸಲಾಗಿದೆ. ಆದರೆ ಈ ರೀತಿಯಾಗಿ ದೊಡ್ಡದಾಗಿರುವ ಕ್ಷೇತ್ರದಲ್ಲಿ ಅಮೇರಿಕ ಇಂಗ್ಲೆಂಡುಗಳಲ್ಲಿ Mechanisation ಪದ್ಧತಿಯಿಂದ ಮಾಡಲು ಸಾಧ್ಯವಾಗಿದೆ. ಇಲ್ಲಿ ಹಾಗೆ ಮಾಡಲು ಸಾಧ್ಯವಿಲ್ಲ, ಸಾವಿರಾರು ಎಕರೆ ಜಮೀನು ಪಡೆದಿರುವವರು ಜಮೀನನ್ನು ಈ ಭೂಸುಧಾರಣೆಯ ಪ್ರಕಾರ ಕೊಡಬೇಕಾಗುತ್ತದೆ. ಆದುದರಿಂದ ಅವರು ತಮಗೆ ಎಷ್ಟು ಬೇಕೋ ಅಷ್ಟು ತೆಗೆದುಕೊಂಡು ಬಾಕಿಯದನ್ನು ಕೊಟ್ಟು ರೊಕ್ಕವನ್ನು ತೆಗೆದುಕೊಳ್ಳಬಹುದು. ಹೀಗೆ ಇಂತಹವರು ವಿಶಾಲ ಮನಸ್ಸಿನಿಂದ ಮಾಡಿದರೆ ಆ ಜಮೀನುದಾರರಿಗೇ ಕಲ್ಯಾಣವಾಗುತ್ತದೆ. ಇದಕ್ಕೆ ಮಿತಿಯೇನೋ ಇರಬೇಕು. ಆದರೆ ಈ ceiling ನ ಮಿತಿ ಎಷ್ಟು ಎನ್ನುವುದನ್ನು ನಿರ್ಣಯ ಮಾಡಿ. ಅದು ರೈತರಿಗೆ ಎಷ್ಟೋ ಸಂತೋಷವಾಗುತ್ತದೆ. ಮತ್ತು ಎಷ್ಟೋ ಹಣ ಉಳಿತಾಯವಾಗುತ್ತದೆ. ಹೀಗೆ ಒಂದು ಮಧ್ಯ ಮಾರ್ಗವನ್ನು ಹಿಡಿದು ಜಮೀನುದಾರರು ಸಂತೋಷದಿಂದ ಒಪ್ಪಿಮಾಡಿದರೆ ದೇಶಕ್ಕೆ ಇದರಿಂದ ಅನುಕೂಲವಾಗತ್ತದೆ. ಇದಕ್ಕಾಗಿ ಟ್ರಿಬ್ಯೂನಲ್ಲಿಗಾಗಲಿ ಕೋರ್ಟಿಗಾಗಲಿ ಹೋಗುವ ಅಗತ್ಯವಿಲ್ಲ.

ಅಲ್ಲದೆ, ಈ ವ್ಯವಹಾರಗಳ ಪರಿಶೀಲನೆಗಾಗಿ ಟ್ರಿಬ್ಯೂನಲ್‌ಗೆ ಹೋಗಬೇಕೆಂದಿದೆ. ಆದರೆ ಈ ವ್ಯವಹಾರಗಳೆಲ್ಲ ಸಿವಿಲ್ ಕೋರ್ಟುಗಳಿಗೇ ಹೋದರೆ ಅನುಕೂಲವಾಗುತ್ತದೆ.

ನಮ್ಮಲ್ಲಿ ರಾಗಿ, ಭತ್ತದ ಬೆಳೆಗಳು ಇವೆ. ಗೋಧಿ, ತಂಬಾಕು, ಜೋಳ ಹೀಗೆ ಎಲ್ಲ ಬೆಳೆಗಳನ್ನೂ ಬೆಳೆಯುತ್ತಾರೆ. ಅವನ್ನೆಲ್ಲ ಪಾಲುಮಾಡುವುದಕ್ಕೋಸ್ಕರ ಒಂದು ಕಡೆ ಬೆಳೆದ ಬೆಳೆಯನ್ನೆಲ್ಲ ರಾಶಿ ಹಾಕುತ್ತಾರೆ. ಗೇಣಿದಾರರು ಇಷ್ಟು ಪಲ್ಲದಷ್ಟು ಬೆಳೆಗಳನ್ನು ಬೆಳೆದಿದ್ದೇವೆಂದು ಹೇಳುವುದನ್ನು ಜಮೀನುದಾರರೂ ಒಪ್ಪಿಕೊಳ್ಳುತ್ತಾರೆ. ಅದರಿಂದಾಗಿ ರೈತರು ಬಂದು ಸಂತೋಷದಿಂದ ಎಷ್ಟು ಬೆಳೆಯನ್ನು ಬೆಳೆಯಬೇಕೆಂದು ಜಮೀನುದಾರರಿಂದ ನೇಮಕವಾಗಿದೆಯೋ ಅದಕ್ಕಿಂತ ಹೆಚ್ಚಿನ ಬೆಳೆಯನ್ನು ಬೆಳೆಯುತ್ತಾರೆ. ಸಾಮೆ, ನಜ್ಜೆ ಬೆಳೆಯತಕ್ಕ ಭೂಮಿಯೂ ಕೂಡ ಇದೆ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಭತ್ತದ ಜಮೀನುಗಳು ಬಹುವಾಗಿ ಇರುವುದಿಲ್ಲ, ಅದರಿಂದ ಅಲ್ಲಿ ರೈತರು ಕೂಲಿಮಾಡುತ್ತಾರೆ. ನಾಲ್ಕು ಎಕರೆಯಿಂದ ಐದು ಎಕರೆಯವರಿಗೆ ಕೂಲಿಮಾಡುತ್ತಾರೆ. ಗೋಧಿ ಬೆಳೆಯುತ್ತಾರೆ. ಅವರು ಬೆಳೆದ ಗೋಧಿಯ ಪ್ರಮಾಣದಂತೆ ಅವರಿಗೆ ಗೋಧಿಯನ್ನು ಕೂಲಿಗಾಗಿ ಕೊಡುತ್ತಾರೆ. ಅಲ್ಲದೆ ಎಂಟನೆಯ ಒಂದು ಭಾಗ ಹತ್ತಿ, ಜೋಳ, ರಾಗಿ ಬೆಳೆಯಲ್ಲಿ ಒಂದು ನಿಗದಿಯಾದ ಪಾಲನ್ನು ಕೊಡುತ್ತಾರೆ.

ಸಭಾಪತಿಯವರು.—ಅವರ ಜೊತೆಗೆ ರೊಕ್ಕ ಕೊಡುವುದಿಲ್ಲವೇನು?

ಶ್ರೀ ಎ. ಎಸ್. ತಿಮ್ಮಾರೆಡ್ಡಿ.—ಅವರು ಇಷ್ಟು ಪಟ್ಟರೆ ಕೊಡುತ್ತಾರೆ. ಅರಿವೆಗಳನ್ನು ಹಾಕಲು ಕೊಡುತ್ತಾರೆ. ಅಲ್ಲದೆ ರೊಕ್ಕ ಒಂದೂ ಕಾಲು ರೂಪಾಯಿನಿಂದ ಒಂದೂವರೆ ರೂಪಾಯಿನವರೆಗೆ ಕೊಡಬೇಕೆಂದು ವ್ಯವಸ್ಥೆ ಇದೆ. ಅವರಿಗೆ ಭೂಮಿ ಕೊಡುವುದಿಲ್ಲ, ಅವರು ಇಷ್ಟೇ ಕೊಡಬೇಕೆಂದೂ ಕೇಳುವುದಿಲ್ಲ.

ಇಲ್ಲಿ ತಂದಿರುವಂತೆ ನಾಲ್ಕನೆಯ ಒಂದುಪಾಲು ಕೊಡುವುದಕ್ಕೆ ಬದಲಾಗಿ ಮೂರನೆಯ ಒಂದುಪಾಲು ಎಂದು ತೆಗೆದುಕೊಂಡು ಬಂದರೆ ಸರಿಯಾಗಿ ಕೇಳುರುತ್ತದೆ.

ಇಷ್ಟು ನೂಚನೆಯನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಎಂ. ಗಂಗಾಧರಯ್ಯ (ವಿಧಾನ ಸಭಾಕ್ಷೇತ್ರ).—ಮಾನ್ಯ ಸಭಾತಿಗಳೇ, ಈಗಾಗಲೇ ಅನೇಕ ಮಾನ್ಯ ಸದಸ್ಯರು ನಮ್ಮ ಮುಂದೆ ಇರತಕ್ಕ ಶ್ರೀಮಾನ್ ಜತ್ತಿಯವರ ಭೂಸುಧಾರಣಾ ವರದಿಯ ಮೇಲೆ ತಮ್ಮ ನಿಲುವನ್ನು ಸಭೆಯ ಮುಂದೆ ಇಟ್ಟಿದಾರೆ. ನಾನೂ ಅವೆಲ್ಲವನ್ನೂ ಇಲ್ಲಿಯವರೆಗೆ ಕೂಲಂಕಷವಾಗಿ ಕೇಳಿದ್ದೇನೆ. ನಮ್ಮ ಮುಂದೆ ಇಂದು ಇರತಕ್ಕ ಮುಖ್ಯವಾದ ಪ್ರಶ್ನೆ ಎಂದರೆ ಆಹಾರದ ಪ್ರಶ್ನೆ. ಮೊದಲನೆಯ ಪಾಂಚವಾರ್ಷಿಕ ಯೋಜನೆಯನ್ನು ಮುಗಿಸಿ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ನಾವು ಇದ್ದೇವೆ; ಈ ಯೋಜನೆಯ ಅವಧಿಯೊಳಗೆ ನಾವು ಆಹಾರದ ಸ್ವಯಂ ಪರಿಪೂರ್ಣತೆಯನ್ನು ಪಡೆಯಬೇಕಾಗಿದೆ. ಅದನ್ನು ಪಡೆಯುವುದಕ್ಕಾಗಿ ಮೂರು ಕಾರಣಗಳು ಮುಖ್ಯವಾದುವು ಎಂದು ನನಗೆ ಕಂಡುಬರುತ್ತದೆ. ಮೊದಲನೆಯದು ಜಮೀನು ಹಂಚಿಕೆ ವ್ಯವಸ್ಥಿತವಾಗಿರಬೇಕು. ಎರಡನೆಯದು, ಪುರಾತನವಾಗಿ ಬಂದಿರತಕ್ಕ ವ್ಯವಸಾಯ ಪದ್ಧತಿಯನ್ನು ಮಾರ್ಪಾಡು ಮಾಡುವುದು; ಮೂರನೆಯದು, ಜಮೀನಿನಲ್ಲಿ ಇಷ್ಟು ಆಹಾರ ಪದಾರ್ಥಗಳನ್ನು ಬೆಳೆಯ ಬೇಕೆಂಬ ನಿರ್ಬಂಧ ಹಾಕುವುದು. ಇದರಿಂದಲೇ ನಾವು ಆಹಾರ ಪದಾರ್ಥಗಳ ಉತ್ಪನ್ನದ ಬಗ್ಗೆ ಸ್ವಯಂಪರಿಪೂರ್ಣತೆಯನ್ನು ಪಡೆಯುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ನಮ್ಮ ದೇಶದಲ್ಲಿ ಎದ್ದು ಕಾಣುತ್ತಿರುವ ಈ ಆಹಾರ ಸಾಮಗ್ರಿಗಳ ಕೊರತೆಯನ್ನು ಹೇಗೆ ಸರಿಪಡಿಸಬೇಕೆಂಬ ಸಮಸ್ಯೆ ಇನ್ನೂ ನಮ್ಮ ಮುಂದೆ ಇದ್ದೇ ಇದೆ. ಆದರೆ ಇಲ್ಲಿಯವರೆಗೂ ಮಾತನಾಡಿರತಕ್ಕ ನನ್ನ ಮಾನ್ಯ ಸ್ನೇಹಿತರುಗಳೆಲ್ಲ ಕೇವಲ ಭೂಮಿ ಒಡೆತನದ ವಿಚಾರವಾಗಿಯೇ ಹೆಚ್ಚಾಗಿ ಮಾತನಾಡಿದ್ದಾರೆ. ಅದರೆ ಅವರ ಗಮನ

(ಗ್ರಂಥಾಲಯ)
ಕ್ರಮಾಂಕ Accession No. 4743
ದಿನಾಂಕ Date.....

ಅಷ್ಟಾಗಿ ಇಂದು ನಮಗಿರತಕ್ಕ ಆಹಾರ ಕೊರತೆಯ ಕಡೆಗೆ ಹೋಗಿರುವುದಿಲ್ಲ. ನಮ್ಮ ದೇಶದಲ್ಲಿರುವ ಆಹಾರಕೊರತೆಯನ್ನು ನೀಗಲು ನಮಗಿರತಕ್ಕ ಒಂದೇ ಒಂದು ಮಾರ್ಗವೆಂದರೆ ಅದು ಭೂಸುಧಾರಣಾ ವ್ಯವಸ್ಥೆ. ಇದನ್ನು ಬಿಟ್ಟರೆ ಬೇರೆ ಉಪಾಯವೇ ಇಲ್ಲ. ಭೂಸುಧಾರಣೆಗಳನ್ನು ನಾವು ಎಷ್ಟು ಬೇಗ ಜಾರಿಗೆ ತಂದರೆ ಅಷ್ಟು ಬೇಗ ನಮ್ಮ ಆಹಾರ ಕೊರತೆಯನ್ನು ನಾವು ಕೊನೆಗಾಣಿಸ ಬಹುದು. ನಾವೇನಾದರೂ ಹೀಗಯೇ ಈ ಸುಧಾರಣೆಗಳ ವಿಚಾರದಲ್ಲಿ ಕಾಲತಳ್ಳುತ್ತ ಹೋದರೆ ಇನ್ನು ಹತ್ತಾರು ವರ್ಷಗಳಲ್ಲೇ ಇಡೀ ದೇಶವೇ ಕೂಳಿಲ್ಲದೆ ಕೊನೆಗಾಣತಕ್ಕ ಕಾಲಬರಬಹುದೆಂದು ಕಾಣುತ್ತದೆ. ಸ್ವಾಮಿ, ಶ್ರೀ ಎಂ. ಪಿ. ಶಾಸ್ತ್ರಿಗಳವರು ವಿದ್ವನ್ ಮಣಿಗಳು, ಅವರೂ ಸಹ ಭೂಹಿಡುವಳಿಗಳ ಬಗ್ಗೆ ಈ ರೀತಿ ಒಂದು ಸೀಲಿಂಗ್ ಪರಿಮಿತಿಯನ್ನು ಹಾಕ ಬಾರದೆಂದೂ, ಇದನ್ನು ಹಾಕಿದರೆ ವ್ಯವಸಾಯಗಾರ ರಿಗೆ ಬಹಳ ತೊಂದರೆಯಾಗುತ್ತದೆಂದೂ ಹೇಳಿದರು. ಆದುದರಿಂದ ಅವರ ಅಭಿಪ್ರಾಯ ಶ್ರೀಮಂತರಾಗಿರ ತಕ್ಕವರು ಸೌಧಗಳ ಮೇಲೆ ಸೌಧಗಳನ್ನು ಕಟ್ಟಿಸಿ ಕೊಂಡು ಅವರು ಶ್ರೀಮಂತಿಕೆಯ ತುಟ್ಟತುದಿಯಲ್ಲೇ ಇರಲಿ ಕಡುಬಡತನದಲ್ಲಿರತಕ್ಕವರು ಹೀಗೆ ದಿನದಿನಕ್ಕೂ ಇನ್ನೂ ಅತಿಯಾದ ಬಡತನಕ್ಕೆ ಇಳಿಯುತ್ತಿರಲಿ ಎನ್ನುವಂತೆ ಕಾಣುತ್ತಿದೆ. ಆದರೆ ಅದು ಎಷ್ಟು ಸರಿಯಾದುದೆಂದು ನನಗೆ ಅನಿಸುತ್ತಿಲ್ಲ. ಈ ದಿವಸ ಸಮಾಜದಲ್ಲಿ ಅಂತರಗಳೂ ಏರುಪೇರುಗಳೂ ಬಹಳವಾಗಿವೆ. ಇವರು ವಿದ್ಯಾವಂತರು, ಇವರು ಅವಿದ್ಯಾವಂತರು, ಬಡವರು ಶ್ರೀಮಂತರು, ಇವರು ಮೇಲು, ಇವರು ಕೀಳು ಎನ್ನತಕ್ಕ ಭೇದಭಾವನೆಗಳು ಒಂದಲ್ಲ ಒಂದು ರೀತಿಯಲ್ಲಿ ಹೋಗಲೇ ಬೇಕು. ಇಂಥ ಅಸಮಾನತೆಗಳನ್ನು ಸಮಾಜದಿಂದ ತೊಡೆದು ಹಾಕಬೇಕಾದ್ದು ಪ್ರಜಾಪ್ರಭುತ್ವ ಸರ್ಕಾರದ ಗುರಿಗಳಲ್ಲಿ ಬಹಳ ಮುಖ್ಯವಾದದ್ದು.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಸಭಾಪತಿಗಳೆ, ನಾನು ಹೇಳಿದ್ದೇನೆಂದರೆ–ಭೂಹಿಡುವಳಿಯ ಬಗ್ಗೆ ಒಂದು ಮಿತಿಯನ್ನು ಹಾಕಬಾರದೆಂದು ಹೇಳಿದುದರ ಅಭಿಪ್ರಾಯ ಸಮಾಜದಲ್ಲಿರುವ ಈ ಅಂತರಗಳು ಅವಶ್ಯಕವಾಗಿ ಹೋಗಬೇಕು ಎಂಬ ಉದ್ದೇಶದಿಂದಲೇ ಹಾಗೆ ಹೇಳಿದ್ದೇನೆ. ಹಾಗಿದ್ದರೇನೇ ಇತರರೂ ಕೂಡ ಸೌಧಗಳನ್ನು ಕಟ್ಟಿಸತಕ್ಕ ಮಟ್ಟಕ್ಕೇರಲು ಅವಕಾಶ ವಿರುತ್ತದೆ. ಅಂಥ ಅವಕಾಶವನ್ನು ಈ ದಿವಸ ಮುರಿದುಹಾಕಬಾರದೆಂದು ನಾನು ತಿಳಿಸಿದೆ ಅಷ್ಟೆ.

ಶ್ರೀ ಎಚ್. ಎಂ. ಗಂಗಾಧರಯ್ಯ.—ಆ ರೀತಿ ಒಂದು ಮಿತಿಯನ್ನು ಇಡದಿರುವುದು ಅಂತರಗಳನ್ನು ತಪ್ಪಿಸಲು ಹೇಗೆ ಅವಕಾಶ ನೀಡಬಲ್ಲದೆಂಬುದನ್ನು ಎಲ್ಲರೂ ಆಲೋಚಿಸಬೇಕಾದಂಥ ವಿಷಯ. ಆ ಮಾತು ಹಾಗಿರಲಿ. ಒಂದು ಇರುವೆಗೂಡಿನಲ್ಲಿರತಕ್ಕ ಇರುವೆಗಳಲ್ಲಿ ಸಹ ಕೇವಲ ನಾಲ್ಕಾರು ಇರುವೆಗಳನ್ನು ಮಾತ್ರ ಹೊರಗೆ ಕಳುಹಿಸಿ ಅವುಗಳು ತರತಕ್ಕ ಆಹಾರದಿಂದ ಜೀವಿಸಬೇಕೆಂಬ ಭಾವನೆ ಇರುವುದಿಲ್ಲ ಎನ್ನುವಾಗ ಇನ್ನು ಮಾನವ ಸಮಾಜದ ಏಳಿಗೆಯ ಬಗ್ಗೆ ಎಲ್ಲರೂ ಎಷ್ಟರಮಟ್ಟಿಗೆ ದುಡಿಮೆ ಮಾಡಬೇಕಾಗಿದೆಯೆಂಬ ಒಂದು ತತ್ವವನ್ನು ಆ ಪ್ರಾಣಿಗಳಿಂದ ನಾವಿನ್ನೂ ತಿಳಿದುಕೊಳ್ಳಬೇಕಾದ್ದಿದೆ. ಆ ಇರುವೆಗಳೆಲ್ಲ ನಿರಂತರವೂ ಸೋಮಾರಿಗಳಾಗಿರದೆ ಕೆಲಸ ಮಾಡುತ್ತಿರುವುದಾದರೂ ಅವುಗಳ ಆಹಾರ ಶೇಖರಣೆಗೋಸ್ಕರವಾಗಿಯೇ. ನಮ್ಮ ಬಾಳೂ ಇಷ್ಟೇ. ಹೀಗೆ ಸಮಾಜದಲ್ಲಿರತಕ್ಕವರೆಲ್ಲರೂ ದುಡಿಯುವಂತಾಗಬೇಕಾದರೆ, ನಮ್ಮ ದೇಶದ ಆಹಾರ ಕೊರತೆ ನಿವಾರಣೆಯಾಗ ಬೇಕಾಗಿದ್ದರೆ ಇಂದಿನ ಈ ಭೂಮಾಲೀಕ ವ್ಯವಸ್ಥೆಯೇ ನಿದೆ ಅದುಮೊದಲು ಹೋಗಬೇಕು. ಸ್ವಾಮಿ, ತಮಗೆಲ್ಲಾ ಗೊತ್ತಿರುವಂತೆ ಮತ್ತು ಈ ಜತ್ತಿ ಸಮಿತಿಯ ವರದಿಯಲ್ಲಿ ಸೂಚಿಸಿರುವಂತೆ ಸಮಾಜದಲ್ಲಿರತಕ್ಕ ಕೆಲವು ಜನರು ಮಾತ್ರ ಒಂದಕ್ಕಿಂತ ಹೆಚ್ಚು ಉದ್ಯೋಗಗಳನ್ನಿಟ್ಟು ಕೊಂಡಿರತಕ್ಕದ್ದು ಎಲ್ಲರಿಗೂ ಗೊತ್ತಿದೆ. ಇತ್ತ ಸರ್ಕಾರಿ ಕೆಲಸದಲ್ಲಿದ್ದುಕೊಂಡು ತಿಂಗಳಿಗೆ ಸಾವಿರ ಗಟ್ಟಲೆ ಸಂಬಳವನ್ನೂ ಪಡೆಯುತ್ತಿದ್ದಾರೆ; ಅತ್ತ ರಾಗಿ ಜಮೀನನ್ನಿಟ್ಟುಕೊಂಡು ಅದರಿಂದಲೂ ಸಂಪಾದನೆ ಹೊಂದುತ್ತಿದ್ದಾರೆ. ಹೀಗಾಗಿ ಈ ದಿವಸ ಹೊಲದಲ್ಲಿ ಕೆಲಸಮಾಡತಕ್ಕ ರೈತನಿಗೆ ಜಮೀನಿನ ವಿಚಾರದಲ್ಲಿರಬೇಕಾದಂಥ ಶ್ರದ್ಧಾಭಕ್ತಿ ಹೊರಟು ಹೋಗಿದೆ. ಶ್ರೀಮಾ ಕೆಂಪಹೊನ್ನಯ್ಯನವರು ಕೌಪೀನದಷ್ಟಿರುವ ಭೂಮಿಯನ್ನು ಹೇಗೆ ಹರಿದು ಹಂಚಬೇಕೆಂದು ಕೇಳಿದರು. ಅಷ್ಟೆ ಅಲ್ಲ, ಆ ಕೌಪೀನ ಹಿಂದೂ ಮುಂದೂ ತೂತುಬಿದ್ದು ಹೋಗಿರತಕ್ಕದ್ದೆಂದು ಹೇಳಿದರು. ಇರಲಿ, ಈ ದಿವಸ ಜಮೀನು ಸಾಗುವಳಿ ಮಾಡತಕ್ಕ ವ್ಯವಸಾಯಗಾರನಿಗೆ ಆ ಜಮೀನು ತನ್ನದಲ್ಲವೆಂಬ ಭಾವನೆಯಿರುವಾಗ ಅವನು ಹೇಗೆ ವ್ಯವಸಾಯವನ್ನು ಶ್ರದ್ಧಾಭಕ್ತಿಯಿಂದ ಮಾಡಲು ಅವಕಾಶವಿದೆ? ನಮ್ಮ ದೇಶದಲ್ಲಿ ವ್ಯವಸಾಯ ಭವ್ಯಾಭ್ಯುದಯಾಗಬೇಕಾದರೆ ರೈತನಾದವನಿಗೆ ಈ ಭೂಮಿ ನನ್ನದು, ಇದು ನನ್ನ ಒಂದು ಶಾಶ್ವತವಾದ ಆಸ್ತಿ ಎಂಬ ವಿಶ್ವಾಸ ಹುಟ್ಟಿದರಲ್ಲವೇ ಆತನಿಗೆ ಈ ವ್ಯವಸಾಯದಲ್ಲಿ ಒಂದು ಹೆಚ್ಚಿನ ಶ್ರದ್ಧಾಭಕ್ತಿ ಹುಟ್ಟಿ ಆತ ಒಂದು ಆನಕ್ಕಿಯಿಂದ ಕೆಲಸ ಮಾಡುವುದು? ಆದರೆ ಈ ದಿವಸ ಇರತಕ್ಕ ನನ್ನಿವೇಶ ರೈತರಲ್ಲರ ಬೇಕಾದ ಆ ಆನಕ್ಕಿಯನ್ನೆಲ್ಲಾ ಮಾಯಗೊಳಿಸಿದೆ. ಜಮೀನ್ದಾರರು ತಮ್ಮ ಭೂಮಿಯನ್ನು ಈ ವರ್ಷ ಒಬ್ಬ ರೈತನಿಗೆ ಕೊಟ್ಟರೆ ಮುಂದಿನ ವರ್ಷ ಅದನ್ನು ಇವನಿಗೆ ತಪ್ಪಿಸಿ ಬೇರೆಯವನಿಗೆ ಕೊಟ್ಟುಬಿಡುತ್ತಾನೆ. ಈ ಅಂಶವನ್ನು ಮಾನ್ಯ ಸದಸ್ಯರೆಲ್ಲರೂ ತಮ್ಮ ಗಮನದಲ್ಲಿಡಬೇಕಾಗಿದೆ. ಇಂಥ ಒಂದು ಅನಿಶ್ಚಿತ ಪರಿಸ್ಥಿತಿಯಿರುವಾಗ ರೈತನಾದವನಿಗೆ—ನ್ಯತಃ ಸಾಗುವಳಿ ಮಾಡತಕ್ಕ ಮನುಷ್ಯನಿಗೆ ಈ ಜಮೀನು ಇನ್ನು ಮುಂದಕ್ಕೆ ನಿನ್ನದಾಗಿದೆ, ಈ ಜಮೀನಿಗೆ ನೀನೇ ಒಡೆಯನು, ಇದು ನಿನ್ನ ಒಂದು ಶಾಶ್ವತವಾದ ಆಸ್ತಿ ಎಂಬ ಪ್ರೋತ್ಸಾಹಕೊಟ್ಟಲ್ಲಿ ಆತನಿಗೆ ಭೂಮಿಯ ಬಗ್ಗೆ ಹೆಚ್ಚು ಅಭಿಮಾನ ಹುಟ್ಟಿ ಹೆಚ್ಚು ಹೆಚ್ಚು ಆಹಾರಧಾನ್ಯಗಳನ್ನು ಬೆಳಸಬೇಕು, ತನ್ನ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಬೇಕೆಂಬ ಆಸಕ್ತಿ ಹುಟ್ಟುವುದಿಲ್ಲವೇ? ಈ ರೀತಿ ಮಾಡಿದರೆ ಆಗ ಪ್ರತಿಯೊಬ್ಬ ರೈತನೂ ಅವನ ಜೀವನವನ್ನಾದರೂ ಸುಗಮವಾಗಿ ನಡೆಸಿಕೊಂಡುಬರಲು ಹೆಚ್ಚಿನ ಮಟ್ಟದಲ್ಲಿ ಶ್ರಮಿಸಲೇಬೇಕಾಗಿರುತ್ತದೆ. ನಾವು ಎಲ್ಲಿಯವರೆಗೆ ಸ್ವಂತ ವ್ಯವಸಾಯ ಮಾಡತಕ್ಕ ಜನರಿಗೆ ಇಂಥ ಪ್ರೋತ್ಸಾಹಗಳನ್ನು ನೀಡುವುದಿಲ್ಲವೋ ಮತ್ತು ಎಲ್ಲಿಯವರೆಗೆ ಅವರಿಗೆ ಭೂಮಿಯ ಒಡೆತನವನ್ನು ಕೊಡುವುದಿಲ್ಲವೋ ಅಲ್ಲಿಯವರೆಗೂ ನಮ್ಮ ದೇಶದ ದಾರಿದ್ರ್ಯ ಹೋಗುವುದಿಲ್ಲ; ಆಹಾರದ ಕೊರತೆಯೂ ತಪ್ಪುವುದಿಲ್ಲ. ಎಲ್ಲಿಯತನಕ ಈ ಒಂದು ಪ್ರಶ್ನೆ ಬಗೆಹರಿಯುವುದಿಲ್ಲವೋ ಅಲ್ಲಿಯತನಕ ನಮ್ಮ ಮುಂದಿರತಕ್ಕ ಬಾಕಿ ಸಮಸ್ಯೆಗಳನ್ನು ಬಗೆಹರಿಸಲು ನಮಗೆ ಸಾಧ್ಯವಾಗುವುದಿಲ್ಲ. ಜಮೀನ್ದಾರರು ಹೀಗೆಯೇ ಜಮೀನ್ದಾರರಾಗಿರಲಿ, ಜಮೀನಿಲ್ಲದವರು ಹೀಗೆಯೇ ಭಿಕಾರಿಗಳಾಗಿ ತಿರುಗುತ್ತಿರಲಿ, ಅವರಿಗೆ ಭೂಮಾಲೀಕತೆ

(ಶ್ರೀ ಎಚ್. ಎಂ. ಗಂಗಾಧರಯ್ಯ)

ಯನ್ನು ಕೊಡಬಾರದು ಎಂಬುದನ್ನು ನಾನು ಖಂಡಿತ ಒಪ್ಪುವುದಕ್ಕಾಗುವುದಿಲ್ಲ. ಸಾಗುಪಳಿ ದಾರನ ಜೀವನ ಈ ದಿವನ ಬಹಳ ಕಷ್ಟಕ್ಕೆ ಬಂದಿದೆ. ನಾನು ಸ್ವಂತ ವ್ಯವಸಾಯಗಾರನಾಗಿರುವುದರಿಂದ ನನಗೆ ಅಥರ ರುಚಿ ಸ್ವಲ್ಪಮಟ್ಟಿಗೆ ತಿಳಿದಿದೆ. ರೈತನಾದವನ ಜೀವನವೆಲ್ಲ-ಆತನ ಸರ್ವ ಆಗುಹೋಗುಗಳೆಲ್ಲವೂ ಈ ವ್ಯವಸಾಯದ ಕಸಬೊಂದರಿಂದರೇ ನಡೆದುಕೊಂಡು ಹೋಗಬೇಕಾಗಿದೆ. ಈ ಎಲ್ಲ ಕಾರಣಗಳಿಂದಲೂ ಈ ದಿವನ ಗೇಣೀದಾರರಾಗಿರತ್ಯವರಿಗೆ ಆಯಾ ಭೂಮಿಗಳ ಒಡೆತನವನ್ನು ಅವರವರಿಗೇ ಕೊಡತಕ್ಕದ್ದು ನ್ಯಾಯ ಎಂಬುದನ್ನು ಎಲ್ಲ ಮಾನ್ಯ ಸದಸ್ಯರೂ ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಆಗಾಗಲೇ ಅನೇಕ ಮಾನ್ಯಸದಸ್ಯರು ಭೂಸುಧಾರಣೆ ಅತ್ಯಗತ್ಯವಾಗಿದೆಯೆಂದು ತಿಳಿಸಿದ್ದಾರೆ, ನಾವು ನಮ್ಮ ಆಹಾರದಲ್ಲಿ ಸ್ವಯಂ ಪರಿಪೂರ್ಣತೆ ಪಡೆಯಲು ಜತ್ತಿ ನಮಿತಿಯವರು ಒಪ್ಪಿಸಿರತಕ್ಕ ವರದಿಯಲ್ಲಿ ಕೆಲವು ವಿಚಾರಗಳಲ್ಲಿ ಮಾತ್ರ ಸ್ವಲ್ಪ ಮಾರ್ಪಾಡನ್ನು ಮಾಡಿದರೆ ಇನ್ನುಳಿದ ಸಲಹೆಗಳು ಬಹಳ ಸಾಧುವಾಗಿರುತ್ತವೆ, ಇವುಗಳನ್ನೆಲ್ಲಾ ಒಪ್ಪಿಕೊಳ್ಳಲು ನನ್ನ ಅಭ್ಯಂತರವೇನೂ ಇಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri M. N. MAHANTA DEVARU (Legislative Assembly Constituency).—Sir, as this House has considered this Report for the last four days, I think there is very little for me to add to what the other Hon'ble Members have already said. In the first place, some of my friends here said that after the coming into force of the Tenancy Act here, agricultural production has gone down very much. In support of that argument, we must also remember that, as my Hon'ble friend Sri Sastry pointed out, till the year 1954 the production of foodgrains in our State was 3,000 tons surplus and it is only after that our production has begun to go down. Our Tenancy Act of 1952 was extended to all parts of Mysore State in the year 1954 and it is only after the introduction of that Act in the whole State in the year 1954 that the whole trouble arose. As a result of the introduction of that Act the relationship between landlords and tenants was disturbed. You will see a remarkable change in our production after the year 1954. The contention of the tenants is that from the year 1954 they are bound to give to the landlords a certain portion of their production from the land. Therefore the incentive to grow more has become absent in the mind of the tenant. He is not expending labour, he was not putting as much manure as he was putting before 1954. This, I feel, is the reason why we are suffering with want of foodstuffs in our State. Had the same peaceful relationship that prevailed before 1954 prevailed afterwards also, I think it would have been possible to solve the food problem by now, because irrigation projects have been extended in various places and a large acreage has been brought under irrigation.

Mr. CHAIRMAN.—Is there no provision in the Tenancy Act requiring the tenant to cultivate properly?

Sri M. N. MAHANTA DEVARU.—Absolutely no provision. No obligation is thrown upon the tenant to cultivate properly. Not a word of this we find in the Act of 1952. On the other hand restrictions are placed on the landlord. He has been fettered after 1954. My submission is that the present Tenancy law, if it is properly amended and if obligation is thrown upon the tenant, I think food production will increase. Such a law could be applied to the entire State of Mysore.

Mr. CHAIRMAN.—Are you suggesting that the minimum quantity that a tenant must grow should be stipulated in the Act?

Sri M. N. MAHANTA DEVARU.—He could cultivate to the maximum extent, provided he makes up his mind.

Mr. CHAIRMAN.—Are you for fixing up minimum production?

Sri M. N. MAHANTA DEVARU.—There are side by side the owner-cultivators and tenant-cultivators. You can compare the production of both. If you take into account the production turned out by the owner-cultivator, you will find that the tenant-cultivator falls short. I submit that so far as the fixing up of rent is concerned, you will have to take into consideration the owner-cultivator's production in the neighbouring land. We have also Inams—Jagirs and Watans. It is only in Inam villages that the question of tenancy arises. I believe that 75 per cent of the total number of tenants reside in Inam villages. In old Mysore State, at any rate, this is the case. Also extensive land-owners are very few in old Mysore

State, excepting tea and coffee estates. The Jatti Committee Report has excluded from the operation of the Tenancy Act, these estates. If that is so, I think there is very little for distribution among the landless people. It has been stated that, because the tiller of the soil is not proprietor, food production has suffered. This question has to be examined in a cool atmosphere. The owner-cultivators are 46 per cent and tenant-cultivators are only 9 per cent. What 46 per cent cannot achieve, can the 9 per cent achieve? I would ask this question of my learned friends who said that the title of land should be conferred on the tiller. This proposition does not convince me at all. It is only if the peaceful, old relationship exists, production could be increased. Unless you impose an obligation on the part of the tenant to cultivate properly, to manure properly, we would not be able to secure maximum benefits out of land. In the Report sufficient safeguards have not been suggested. Take away from the absentee landlords and give land to the landless, but provide sufficient safeguards to ensure maximum production. I will quote instances. From times immemorial, Governments have been giving land. How many of them are owners now? They will sell the land. He becomes landless again and prays for more and more land. They have become traders in land. According to the statistics furnished by the Government, there are 13 per cent landless agricultural labourers, but yet their problem has not been considered in the Report. These landless labourers want to be landless always. They have shown no great desire to possess land. Possessing land is very difficult. How many lands have not been sold for arrears of Khandayam? If a person loves land and cultivates sincerely, can he not pay land revenue? It is so small—merely 1 rupee per acre, if it is dry land or 4 or 5 rupees if it is wet land. To cultivate land, it requires capital, bullocks, plough, manure, etc. What is the use of safeguarding the tenant, if he cannot safeguard the land? Then, is the tenant cultivating land all by himself. He is only a head cooly. He engages agricultural labourers and he will be a supervisor, so to say. He gets the produce. He pays a small amount to agricultural labourers and thus he becomes a rich man. Nowadays, the tenant has become the rich man.

Mr. CHAIRMAN.—There are hereditary Jeetkaras.

Sri M. N. MAHANTA DEVARU.—They are content with being Jeetkaras.

Mr. CHAIRMAN.—Not that they do not want land, but they have no opportunity to get it.

Sri M. N. MAHANTA DEVARU.—They cannot also manage land. Unless somebody comes forward and pays gratis the agricultural expenses, implements, bullocks, etc., they cannot be real agriculturists. If the Government moves in this direction, then it can be done.

Inam Abolition has come into existence. If the Government thinks for a moment to implement that Act, I think most of the problem will be solved. It is only in Inam villages a large number of tenants live, and these tenants would be satisfied if the land is confirmed in their favour.

I want the House to consider as to who is a landlord. The landlord is a person who has acquired land. He is not a squatter or a usurper. He has acquired land lawfully, according to the rules. He has put in a lot of money on the land. He wants to have profits. May be he is an absentee landlord, but he has invested money, as other people have invested in banks, in companies and so on and get dividend or whatever it is. In the same way, these landlords are also expecting a certain amount of interest for the amount they have invested on the land. In that way, we have to consider landlords not as blood-suckers as some of our friends have put it; in one sense or other, we are all sailing in the same boat, in one capacity or other, we depend entirely upon our neighbours or some other person. In the same way, I submit the landlord should not be abused in such a way as our friends do. Next, if the Government wants to give lands to the landless people, I think according to the statistics, which they have already furnished in this book, there is cultivable waste land available

(SRI M. N. MAHANTA DEVARU)

to the extent of about 15 lakhs acres, grazing lands 43 lakhs acres, current fallow 19 lakhs acres and other fallow lands 16 lakhs. That comes to about 95,10,887 acres. Now we have a tenant population of 18 lakhs and agricultural labourers 21 lakhs. If you reduce this into a family of five persons, you get only about 10 lakhs of families. If you divide these lands which are available for distribution you can confer 10 acres per family. Therefore, Sir, this problem will at once be solved if the Government makes up its mind to distribute the land in its possession and in its control at present. After all, supposing the landlords' lands are taken away, what is the number of acres you get? That is another position you will have to consider. The total acreage that they would get for distribution including all that they have got in their own possession after exempting coffee estates, tea estates, orchards and special farms would come to nothing. If the ceiling is fixed, then also I fail to understand what is the relief they are going to confer? Therefore, Sir, on this ground also it is a failure.

Now, I come to basic holding. Basic holding is such a scanty holding that it is not at all worth considering according to me. So far as family holding is concerned, I think even if he is an absentee landlord or anybody else, he must be given back the land if he wants to cultivate the full family holdings. It should be restored to him in full. There should be no restriction whatsoever. It should not be divided into halves, one half to be made resumable and the other half to be conferred on the tenant. That should not be done because it yields only Rs. 1,200 per year, and it is a very small holding. These absentee landlords will be generally employed in Government service and after their retirement they will go back to the land. Then they will have to be given full family holding for their cultivation.

Next, I will come to the ceiling limit. Celing limit, according to me, must yield at least Rs. 12,000 per year. Unless Rs. 12,000 per year is secured to a landlord, he cannot live in a decent manner.

Mr. CHAIRMAN.—Net income?

Sri M. N. MAHANTA DEVARU.—Yes, net income. Otherwise, he cannot educate his children as any citizen of Bangalore or Mysore could do. He cannot lead a decent life unless he has got Rs. 12,000 per year. If a person has got an estate which could yield Rs. 12,000 per year, he should not be disturbed, if he is going to have land cultivated by himself. So far as the fixation of rent on lands of absentee landlords is concerned, I beg to submit that at least that rent must have a proportion to the capital invested on the land as in any other concern. I think 9 per cent of the capital invested on the land would be reasonable. That should be the measuring yard so far as the fixation of rent is concerned. If you fix the value of the land and also the rent, the tenant will have an incentive to grow more because he knows what is to be paid to the landlord. It is only that a definite sum, an ascertainable sum, has to be paid to the landlord and therefore he will be putting all his energy and enthusiasm and all that on the land. Therefore, it must bear a definite proportion to the value of the land so far as absentee landlords' holdings are concerned.

Mr. CHAIRMAN.—The Committee in their Report recommend that it is desirable to pay in kind instead of paying a fixed cash rent.

Sri M. N. MAHANTA DEVARU.—It may be paid in cash or in kind. Suppose a landlord does not take at all gutta for a period of 3 months from the date of harvest, then the tenant is empowered to give it in cash.

Mr. CHAIRMAN.—They have also recommended that the landlord must receive the rent in the place where it is grown.

Sri M. N. MAHANTA DEVARU.—There is difficulty in the landlord going to the tenant and receiving rent. Whenever the landlord goes, the tenant may refuse to give rent. Then how many times he should go? That is the trouble that the tenant will create so far as the landlord is concerned. We are also active lawyers and we have

seen how cases are coming up and how the tenants are giving the landlord as much trouble as possible. Sir, after the enactment of tenancy laws, the position of landlords has become precarious and pitiable. If the tenant fails to give the rent for two years, then the landlord can take possession of the land. This is too long a period. This requires modification.

I said that family holding must be resumed fully and given over to the landlord whenever he wants to cultivate his lands. If this benefit is not conferred on the landlords, the result would be fragmentation of the land. It cannot be economic holding. On page 99 they have said:

> "The implementation of the provisions regarding the rights of resumption, especially by holders with less than a family holding, may result in the creation of fragments."

Therefore, I submit that the family holding must be restored in full and the concept of basic holding must be removed from the Committee's Report itself.

So far as suggestion for the Tribunal is concerned, I am of the opinion that the Amildar is not the competent authority to decide cases in this regard. He has got multifarious duties and responsibilities. Moreover, he is not a person who has studied law. Therefore, such cases should never be referred to a Tribunal. If the Government wants to have a separate tribunal for this purpose, a judicial officer should be posted to such places. Regarding a lawyer appearing for raiyats, I submit that this facility should be allowed to the raiyats. Most of the landlords would be literate whereas almost all the raiyats would be illiterate and they will not be able to present their case properly. Therefore, the tenant must necessarily engage a lawyer to present his case properly. In the interest of both the parties, lawyers must be allowed to appear for the parties in these courts. With these words, I conclude.

†ಶ್ರೀ ರುಮಾಲೆ ಚನ್ನಬಸವಯ್ಯ (ನಾಮನಿರ್ದೇಶ ಹೊಂದಿದವರು).—ಸ್ವಾಮೀ, ಇದುವರೆಗೆ ಜಿತ್ತಿ ಸಮಿತಿಯ ವರದಿಯಮೇಲೆ ಈ ಸಭೆಯ ಬಹುಮತ ಸದಸ್ಯರು ತಮ್ಮ ನಿಶ್ಚಿತ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಎಲ್ಲರೂ ಸಹ ಅವರಿಗೆ ಸರಿಯೆಂದು ತೋಚಿದುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಹೀಗೆ ಇಲ್ಲಿ ವಿಚಾರ ಮಾಡಿರತಕ್ಕವರೆಲ್ಲ ಈ ಸಮಸ್ಯೆಯನ್ನು ಸರಳವಾಗಿ ಬಿಡಿಸಿ ತೋರಿಸಿದ್ದಾರೆ. ಈಗ ನಾವು ಇವೊತ್ತಿನ ದಿವಸ ಸಮಿತಿಯ ಬಗ್ಗೆ ಯೋಚನೆಮಾಡುವುದಾದರೆ ದೊಡ್ಡದಾದ ದೇಶದಲ್ಲಿ ಮೊದಲು ಎಷ್ಟು ಭಿನ್ನಾಭಿಪ್ರಾಯಗಳು ಬಂದಿದ್ದುವೋ ಈಗ ಅಷ್ಟು ಭಿನ್ನಾಭಿಪ್ರಾಯಗಳಿಲ್ಲ, ಕಡಿಮೆಯಾಗಿವೆ. ಎರಡು ಕಡೆಯವಾದವನ್ನೂ ಹುಟ್ಟಿಸಿದವರು ಒಬ್ಬರಿಗೊಬ್ಬರು ಪರಸ್ಪರ ಅರಿತುಕೊಂಡು ಒಂದು ಮಧ್ಯಮಮಾರ್ಗವನ್ನು ಅನುಸರಿಸುವುದಕ್ಕೆ ಅಷ್ಟೇನೂ ಕಷ್ಟವಾಗುವುದಿಲ್ಲ. ಇವತ್ತು ಭೂಮಿಯ ಬಗ್ಗೆ ceiling ಇರಬೇಕು ಎನ್ನುವುದಾಗಲಿ ಕೂಡದು ಎನ್ನುವುದಾಗಲಿ ಮುಖ್ಯವಾದ ವಿಷಯಗಳಾಗಿವೆ ಎನ್ನುವುದನ್ನು ಮೊದಲು ಒಪ್ಪಬೇಕು. ಮೊದಲನೆಯದು ಗೇಣೀದಾರರಿಗೆ ರಕ್ಷಣೆ ಕೊಡಬೇಕು. ಎರಡನೆಯದು ನ್ಯಾಯವಾದ ಗೇಣಿ ಎಷ್ಟು ಇರಬೇಕು ಎನ್ನುವುದು. ಮೂರನೆಯದು ಹಣವಂತರಾದ ಬೇನಾಯಗಾರರಿಗೆ ಹೆಚ್ಚು ತರಿಗೆ ಹಾಕಬೇಕು. ಇದರ ಬಗ್ಗೆ ಒಮ್ಮತ ಇರಬಹುದೇ ಎನ್ನುವುದೇ ಪ್ರಶ್ನೆ.

ಈ ceiling ಮಿತಿ ಮಾತ್ರ ಈಗ ಶ್ರೀ ಜಿತ್ತಿ ಸಮಿತಿಯವರು ತಿಳಿಸಿರುವುದು ಸರಿಯಾದುದಲ್ಲ. ಈ ಮಿತಿಯು ಇರಬೇಕಾದರೆ ಕಾಲಧರ್ಮಕ್ಕನುಗುಣವಾಗಿ ಇವತ್ತಿನ ದಿವಸ ಮೈನೂರಿನಲ್ಲಿ ಜಾರಿಗೆ ತರಬೇಕು. ಈ ವರದಿಯಲ್ಲಿ 1,200 ರೂಪಾಯಿಗಳಿಂದ 5,000ದ ವರೆಗೆ ಇರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಇದನ್ನು 5,000 ರೂಪಾಯಿಗಳಿಂದ ಹತ್ತು, ಹನ್ನೆರಡು ಸಾವಿರ ರೂಪಾಯಿಗಳವರೆಗಾದರೂ ಏರಿಸಬಹುದೆಂದು ನನಗೆ ಅನಿಸುತ್ತದೆ. ಭೂಮಿಯ ಮೇಲೆ ಬಂಡವಾಳ ಹಾಕಿರುವವರು, ಹೆಚ್ಚಿಗೆ ಅನುಕೂಲವಾಗಬೇಕಾದರೆ ಆಹಾರವನ್ನು ಬೆಳೆಯುವುದು ಹೆಚ್ಚಾಗಬೇಕು ಎಂದು ಯೋಚಿಸುವುದು ಸಹಜ. ಆಹಾರವನ್ನು ಹೆಚ್ಚಿಗೆ ಬೆಳೆಯುವುದರಿಂದ ಕ್ಷಾಮದ ಭಯ ತಪ್ಪುತ್ತದೆ. ಇದರ ಸಲುವಾಗಿ ಹೇಗಿರಬೇಕು ಎನ್ನುವುದನ್ನು ನಾನು ಮಾನ್ಯ ಸದಸ್ಯರಲ್ಲಿ ಮುಂದೆ ಅರಿಕೆಮಾಡಿಕೊಳ್ಳುತ್ತೇನೆ.

ನಮ್ಮಲ್ಲಿ ಕೆಲವರು ನಮ್ಮ ದೇಶದಲ್ಲಿ ಆಹಾರದ ಉತ್ಪನ್ನಕ್ಕಾಗಿ "Intensive cultivation" ಅಗತ್ಯವೆಂದು ಹೇಳಿದರು. ಇನ್ನು ಕೆಲವರು "Extensive cultivation" ಅಗತ್ಯ ಎಂದರು, ಎಲ್ಲ ಕಡೆಗಳಲ್ಲಿಯೂ ಎಲ್ಲ ಜಮೀನಿನ ಸ್ಥಿತಿಗತಿಗಳೂ ಒಂದೇ ರೀತಿಯಲ್ಲಿಲ್ಲ. ಕೇವಲ ಹದಿನೈದು ಇಪ್ಪತ್ತು ಊರುಗಳಲ್ಲೇ ಬೇಕಾದಷ್ಟು ಅಂತರವಿದೆ. ಇದಕ್ಕೆ ಉದಾಹರಣೆಯಾಗಿ ಹೊನಕೋಡೆ ದೇವನಹಳ್ಳಿ ಮತ್ತು ಚಿಕ್ಕಬಳ್ಳಾಪುರ ಇಲ್ಲಿ ನಡೆಯುತ್ತಿರುವುದು Intensive cultivation. ಇಲ್ಲೆಲ್ಲ ಐದು ಎಕರೆಗಳಿಗಿಂತ ಜಾಸ್ತಿಯಾಗಿ ಯಾರೂ ಜಮೀನನ್ನು ಇಟ್ಟುಕೊಂಡಿಲ್ಲ; ಮತ್ತು ಇಲ್ಲಿ ಬಹುವಾಗಿ ಆಲೂಗೆಡ್ಡೆ, ಹೂವು ಇಂತ ಹುದನ್ನೇ ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಇಲ್ಲಿ ಇರುವ ಜಮೀನುಗಳ ಬೆಲೆ ಐದು ಸಾವಿರದಿಂದ ಎಂಟು ಹತ್ತು ಸಾವಿರದವರೆಗೆ ಇತ್ತು. ಕೆಲವು ಕಡೆ ಹತ್ತು ಗುಂಟೆ, 15 ಗುಂಟೆ, 20 ಗುಂಟೆಯಷ್ಟು ಇರುವ ಜಮೀನುಗಳೂ ಕೂಡ ಇವೆ. ದೇವನಹಳ್ಳಿಯಲ್ಲಿ ಒಬ್ಬ ವರ್ತಕರೊಬ್ಬರು ಅವರೇ ಪ್ರೋತ್ಸಾಹಿತರಾಗಿ ಸುಮಾರು ಮೂರು ಲಕ್ಷ ರೂಪಾಯಿಗಳನ್ನು ಹಾಕಿ 200 ಎಕರೆ

(ಶ್ರೀ ರುವಾರೆ ಚನ್ನಬಸವಯ್ಯ)

ಜಮೀನನ್ನು ಸಾಗುವಳಿಮಾಡುತ್ತಿದ್ದಾರೆ. ನಾನು ಬಂಡವಾಳಗಾರನಾಗಿ ಎರಡು ಪರ್ಸೆಂಟಿನಷ್ಟು ಬಡ್ಡಿಯಂತೆ ದುಡಿದರೂ ಇಲ್ಲಯಷ್ಟು ಉತ್ಪನ್ನವಾಗುವುದಿಲ್ಲ. ಅವರೇ ಇಲ್ಲಿ ಸ್ವತಃ ಪ್ರೋತ್ಸಾಹಿತರಾಗಿ ದೊಡ್ಡ ದೊಡ್ಡ ಭಾವಿಗಳನ್ನು ತೋಡಿ ಆಹಾರದ ಉತ್ಪತ್ತಿಯನ್ನು ಮಾಡಲು ಮುಂದೆ ಬಂದಿರುವ ಸಂದರ್ಭದಲ್ಲಿ ಅವರ ಶಕ್ತಿಯನ್ನು ನಾವು ದೇಶಕ್ಕೆ ಉಪಯೋಗಿಸಬೇಕಾದುದು ಅಗತ್ಯ. Intensive cultivationಗೆ ನಮ್ಮ ದೇಶದಲ್ಲಿ ಅವಕಾಶವಿದೆ. ಈ ರೀತಿಯಾದ ವ್ಯವಸಾಯಕ್ಕೆ ಸಾವಿರಾರು ಎಕರೆಗಳಷ್ಟು ಭೂಮಿಯಿದ್ದರೂ ಅದರಲ್ಲಿ ಕೆಲಸಮಾಡಲು ತಕ್ಕಷ್ಟು ಜನ ಇರುವುದಿಲ್ಲ. ಈ ವ್ಯವಸಾಯಕ್ಕೆ ನಮ್ಮ ಜನಗಳು ಸಾಕಷ್ಟು ತರಬೇತಿ ಹೊಂದಲು ಏರ್ಪಾಡು ಮಾಡಬೇಕು. ದೊಡ್ಡ ದೊಡ್ಡ ವರ್ತಕರುಗಳನ್ನು ಈ ಉದ್ಯಮವನ್ನು ಮಾಡುವುದಕ್ಕೆ ತರುವ ನೀತಿಯನ್ನು ಯಾರೂ ಒಪ್ಪುವುದಿಲ್ಲ. ಟ್ರಾಕ್ಟರುಗಳನ್ನು ಉಪಯೋಗಿಸಿಕೊಂಡು ಈ ರೀತಿಯಾದ ವ್ಯವಸಾಯ ಪದ್ಧತಿಯನ್ನು ಹೆಚ್ಚಿಸಬೇಕು, ಕೆಲವು ಕಡೆಗಳಲ್ಲಿ ಬೇಕಾದರೆ ಇದಕ್ಕಾಗಿ ಟ್ರಾಕ್ಟರುಗಳನ್ನು ಇಟ್ಟುಕೊಳ್ಳಬಹುದು. ಹೀಗೆ ಯಂತ್ರೋಪಕರಣಗಳನ್ನು ಉಪಯೋಗಿಸಿಕೊಳ್ಳದೆ ಹೋದರೆ ಈ ಆಹಾರ ಧಾನ್ಯದ ಸಮಸ್ಯೆ ಬಗೆಹರಿಯುವುದು ಬಹಳ ಕಷ್ಟ. ಹೀಗೆ ನಮ್ಮಲ್ಲಿ ಇಂತಹ ದೊಡ್ಡ ಕೆಲಸಗಳಿಗೆ ಹೆಚ್ಚಿಗೆ ಬಂಡವಾಳವನ್ನು ಹಾಕಿ ಮಾಡಲು ಮುಂದೆ ಬರುವುದಿಲ್ಲ. ಸರಕಾರ ಹೆಚ್ಚಿಗೆ ಹಣವನ್ನು ಖರ್ಚು ಮಾಡಿದರೆ ಆಗ ಈ ಯೋಜನೆಯಿಂದ ಹೆಚ್ಚಿನ ಹಣ ಬರುವಂತೆ ಮಾಡಲಿಕ್ಕೆ ಅವಕಾಶವಿದೆ.

ಈ ಮೊದಲೇ ಹೇಳಿದ ಹಾಗೆ ಗೇಣಿದಾರನಿಗೆ ನ್ಯಾಯವಾದ ಗಿರಾಕಿಯಿಲ್ಲ. ಇಂತಹ ಕ್ರಮಗಳನ್ನು ಕೈಗೊಳ್ಳಲು ತೊಂದರೆ ಏನೂ ಆಗುವುದಿಲ್ಲ. ಎಲ್ಲ ಕ್ಕಿಂತಲೂ ನಮ್ಮಲ್ಲಿ ಒಂದು ರೀತಿಯಾದ ಮನೋಭಾವನೆ ಬೆಳೆದು ಬಂದಿದೆ. ಉದಾಹರಣೆಯಾಗಿ ಒಂದು ವಿಷಯ ಹೇಳುತ್ತೇನೆ. 1936ನೆಯ ಇಸವಿಯಲ್ಲಿ ನನಗೆ Poultry Farmನ್ನು ಮಾಡುವ ಒಬ್ಬ ಸ್ನೇಹಿತರು ಸಿಕ್ಕಿದರು. ಅವರನ್ನು ಆಗಾಗ್ಗೆ ನೋಡುತ್ತ ಹಾಗೆಯೇ ಪರಿಚಯವಾಯಿತು. ಅನಂತರ ಇವರಿಗೆ 80 ರೂಪಾಯಿಗಳ ಸಾಲವನ್ನು ನಾನು ಕೊಡಬೇಕಾಯಿತು, ಒಂದು ವಾರದಲ್ಲಿ ವಾಪಸು ಕೊಡುವೆನೆಂದು ತೆಗೆದುಕೊಂಡು ಹೋದರು. ಹದಿನೈದು ಇಪ್ಪತ್ತು ದಿನಗಳಾದರೂ ನನಗೆ ಹಣ ಬರಲಿಲ್ಲ. ಇವರು ಉತ್ತಮವಾದ ಒಂದು ಸಮಾಜದಲ್ಲಿ ಇರುವವರು ಮತ್ತು ದೊಡ್ಡ ವಿದ್ಯಾವಂತರೂ ಆಗಿರುವವರು ಹೀಗೆ ಮಾಡಿದರು. ದೇಶದಲ್ಲಿ ಜನಗಳ ಮನೋಭಾವ ಹೀಗಿರುತ್ತದೆ. ಹಣವನ್ನು ಸಾಲವಾಗಿ ತೆಗೆದುಕೊಂಡರೂ ಅದನ್ನು ವಾಪಸು ಕೊಡುವುದಿಲ್ಲ. ಹೀಗಿದೆ ಜನರ ಮನೋಭಾವನೆ. ಈ ಮನೋಭಾವನೆಯನ್ನು ಬದಲಾಯಿಸದಿರುವ ಮನುಷ್ಯನು ಧರ್ಮಬುದ್ಧಿಯಿಂದ ನಡೆಯುವುದಿಲ್ಲ. ಕಾಲ ಧರ್ಮ ಕ್ಕನುಗುಣವಾಗಿ ಹಣವಂತರಾಗಲಿ ಬಡವರಾಗಲಿ ಧರ್ಮ ಬುದ್ಧಿಯಿಂದ ನಡೆಯಬೇಕು. ಬಡತನದಲ್ಲಿ ಬಡವರಾದರೂ ನೀತಿಯಲ್ಲಿ ನಾವು ಬಡವರಾಗಿಲ್ಲ.

ಯಾರೇ ಆಗಲಿ ಇತರರಿಗೆ ಕೊಡತಕ್ಕದ್ದನ್ನು ಕೊಡಲೇ ಬೇಕೆಂಬ ಮನೋಭಾವವನ್ನು ಎಲ್ಲರೂ ಇಟ್ಟುಕೊಳ್ಳಬೇಕು. ಆದರೆ ಕೆಲವರಿಗೆ ಅವರು ಬಿಟ್ಟುಕೊಡತಕ್ಕ ಜಮೀನ್ ಬಗ್ಗೆ ಕೊಡಬೇಕಾದ ನ್ಯಾಯವಾದ ಒಂದು ಬೆಲೆಯೇನಿದೆಯೋ ಅದನ್ನು ಕೊಡದಿರುವುದರಿಂದ ಆ ರೀತಿ ಕೆಲವರಿಗೆ ಅವರ ಜಮೀನುಗಳನ್ನು ಬಿಟ್ಟುಕೊಡಲು ಇಚ್ಛೆ ಇಲ್ಲದಿರಬಹುದು. ಸಮಾಜ ವಾದದ ಬಗ್ಗೆ ಎಲ್ಲ ಕಡೆಗಳಲ್ಲೂ ಒಂದು ಒಳ್ಳೆಯ ಮಾತು ಕೇಳಿಬರುತ್ತಿದೆ. ಆದರೆ ಇದರಲ್ಲಿ ಒಂದು ಬಹುಮುಖ್ಯವಾದ ಪ್ರಕರಣವಿದೆ; ಅದು ನಮ್ಮಲ್ಲಿ ಅನೇಕರಿಗೆ ಗೊತ್ತಿಲ್ಲದಿರಬಹುದು. ಆದರೆ ನಾನು ವೀರಶೈವನಾದುದರಿಂದ ನನಗೆ ಆ ವಿಚಾರ ಗೊತ್ತಿದೆಯೆಂದು ಧೈರ್ಯವಾಗಿ ಹೇಳುತ್ತೇನೆ. ಇಲ್ಲಿಗೆ 300 ವರ್ಷಗಳ ಕೆಳಗೆ ನಮ್ಮಲ್ಲಿ ಜಂಗಮರು ಒಂದು ಕ್ರಾಂತಿಯೆನ್ನಿಬ್ಬಿಸಿದರು. ಸಮಾಜದಲ್ಲಿ ಒಂದು ದೊಡ್ಡ ಚಳುವಳಿಯನ್ನೇ ಮಾಡಿದರು. ಅದೇನೆಂದರೆ ದೇವೇಂದ್ರರಾಯ ಮಳೆಯನ್ನು ಸುರಿಸುತ್ತಾನೆ, ಬಸವಣ್ಣ ಭೂಮಿಯನ್ನುಳುತ್ತಾನೆ. ಹೀಗಿರುವಾಗ ಬೇಸಾಯಗಾರರು ರಾಜರುಗಳಿಗೇಕೆ ಕಂದಾಯಕೊಡಬೇಕು ಎಂಬುದಾಗಿ. ಆ ಕಾಲದಲ್ಲಲ್ಲದ್ದ ಜನರಿಗೆ ಆ ವಾದವೂ ಸಹ ಬಹಳವಾಗಿ ರುಚಿಸಿತು. ಆದರೆ ಆ ವಾದದಿಂದ ಮುಂದೇನಾಯಿತು ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆದ್ದರಿಂದ ನಾವು ಏನು ಬದಲಾವಣೆಗಳನ್ನೇ ಜಾರಿಗೆ ತರಲಿ ಅವುಗಳ ಬಗ್ಗೆ ಜನರಲ್ಲಿ ಒಂದು ರೀತಿಯ ಸಂಶಯ ಮನೋಭಾವ್ಯಾಯ ಉಂಟಾಗುವುದಕ್ಕೆ ಅವಕಾಶವಿಲ್ಲದಂತೆ, ತಾವು ತರತಕ್ಕ ಸುಧಾರಣೆಗಳಲ್ಲಿ ಒಂದು ನಿರ್ದಿಷ್ಟ ರೀತಿಯ ತತ್ವ ಇದೆಯೆಂಬುದನ್ನು ಜನರು ಸರಳವಾದ ರೀತಿಯಲ್ಲಿ ಅರಿತುಕೊಳ್ಳುವಂತಿರಬೇಕು. ಒಟ್ಟಿನಲ್ಲಿ ಹೇಳುವುದಾದರೆ ಈ ವಿಚಾರದಲ್ಲಿ ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ರೂಪರೇಖೆಗಳಿವೆ, ಯಾವ ಯಾವ ಸ್ಥಳದಲ್ಲಿ ಏನೇನು ಬದಲಾವಣೆಗಳನ್ನು ತರಬಹುದು, ಯಾವ ಯಾವ ಪ್ರದೇಶದಲ್ಲಿ ಏನೇನು ಬೆಳೆ ಬೆಳೆಯಲಾಗುತ್ತಿದೆ ಎಂಬ ವಿಚಾರಗಳನ್ನೆಲ್ಲ ನಮ್ಮ ರಾಜ್ಯದಲ್ಲಿರತಕ್ಕಂಥ ಅರಿತು-ನುರಿತ ಮುಖಂಡರುಗಳೆಲ್ಲ ಒಂದು ಕಡೆ ಸೇರಿ ಈ ಸಮಸ್ಯೆಯನ್ನು ಪರಿಹರಿಸತಕ್ಕದ್ದು ಅಗತ್ಯವೆಂದು ನನಗನಿಸುತ್ತಿದೆ. ಹೀಗೆ ಮಾಡಿದರೆ ಇದು ಸುಲಭವಾಗಿ ಬಗೆಹರಿಯಬಹುದು. ಈ ವರದಿಯಲ್ಲಿ ಸ್ವಂತ ಸಾಗುವಳಿ ಮಾಡದವರಿಗೆ ಭೂಸ್ವಾಮ್ಯವನ್ನು ತ್ಯಾಗಮಾಡಬೇಕೆಂದು ಹೇಳಿದ್ದಾರೆ. ಆದರೆ ನಮ್ಮ ಅನುಭವದಲ್ಲಿರುವುದನ್ನೇ ಹೇಳುವುದಾದರೂ, ಇಂಥ ಜನರೂ ಸಹ ಭೂಮಿಯ ಮೇಲೆ ತಮ್ಮ ಸ್ವಂತ ಬಂಡವಾಳವನ್ನು ವಿಶೇಷವಾಗಿ ಹಾಕಿರತಕ್ಕವರಾಗಿದ್ದಾರೆ. ಹೀಗಿರುವಾಗ ವ್ಯವಸಾಯಮಾಡುತ್ತೇವೆಂದು ಹೇಳತಕ್ಕ 200-300 ಎಕರೆಗಳವರೆಗೂ ವ್ಯವಸಾಯ ಮಾಡುವುದಕ್ಕೆ ಜಮೀನನ್ನು ಬಿಟ್ಟುಕೊಡಲು ಅವಕಾಶ ಇರಬೇಕು. ಇದರಿಂದ ದೇಶದಲ್ಲಿ ಹೆಚ್ಚು ಆಹಾರ ಬೆಳೆಯಲು ಅವಕಾಶವಾಗುತ್ತದೆ. ಆದರೆ ಈ ದಿವಸ ಯಾರಿಗೆ ಉಳಲು ಭೂಮಿಯಿಲ್ಲವೋ ಅಂಥವರಿಗೆ ಭೂಮಿ ಕೊಡಲು ಸರ್ಕಾರದವರಿಗೆ ಸಾಧ್ಯವಿದೆ, ಸರ್ಕಾರದವರು ಇತ್ತೀಚೆಗೆ ಅಲ್ಲಲ್ಲಿ ಅನೇಕ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ನಿರ್ಮಾಣಮಾಡಿದ್ದಾರೆ. ಅಲ್ಲಿ ಭೂಮಿಯಿಲ್ಲದ ಜನರಿಗೆ ಭೂಮಿಯನ್ನು ಸರ್ಕಾರದವರು ಕೊಡಬಹುದು, ಮೇಲಾಗಿ ಭೂದಾನ ಚಳವಳಿಯಲ್ಲಿ ಗಳಿಸುವ ಭೂಮಿ ಏನಿದೆಯೋ ಅದನ್ನು ಸಹ ಇಂಥ ಭೂಮಿಯಿಲ್ಲದ ಜನರಿಗೆ ಹಂಚಲು ಅಲ್ಲಿಯೂ ಒಂದು ಅವಕಾಶವಿದೆ. ಆದರೆ ಸರ್ಕಾರದವರು ಏನೋ ಒಂದು ಉದಾರ ಭಾವನೆಯಿಂದ ಭೂಮಿಯಿಲ್ಲದವರಿಗೆ ಭೂಮಿಯನ್ನು ಕೊಟ್ಟಮಾತ್ರಕ್ಕೇ ಅದರಿಂದೇನೂ ಅಷ್ಟು ಪ್ರಯೋಜನವಾಗದಾರದು. ಆದುದರಿಂದ ಈ ಬಗ್ಗೆ ಒಂದು ಕೋ-ಆಪರೇಟೀವ್ ಸಿಸ್ಟಂ

ಮಾಡಿ ಅವರಿಗೆ ಇನ್ನಿತರ ಸಹಾಯಗಳನ್ನು ಒದಗಿಸಿ, ಅವರು ಆ ಭೂಮಿಗಳನ್ನು ಇತರರಿಗೆ ಮಾರಾಟ ವಗ್ಯೈರೆ ಮಾಡದಂತೆ, ಆ ಭೂಮಿಗಳಿಂದ ಅವರೂ ಉದ್ಧಾರವಾಗಿ ದೇಶದಲ್ಲಿ ಹೆಚ್ಚಿನ ಬೆಳೆ ಬೆಳೆಯಲು ಒಂದು ಏರ್ಪಾಡನ್ನು ಮಾಡುವುದುತ್ತಮ. ಆದುದರಿಂದ ಈ ಕೋ-ಆಪರೇಟೀವ್ ಸಿಸ್ಟಂ ವ್ಯವಸಾಯಕ್ಕೆ ಹೆಚ್ಚಿನ ಪ್ರಾಶಸ್ತ್ಯವಿರಬೇಕಾದದ್ದು ಅಗತ್ಯ. ಒಟ್ಟಿನಲ್ಲಿ ಹೇಳುವುದಾದರೆ ಎರಡು ಕಡೆಯ ಅಭಿಪ್ರಾಯಗಳನ್ನೂ ಒಂದು ಹೊಂದಾವಣಿಕೆಗೆ ತಂದು ಇದರಲ್ಲಿ ಯಾರೊಬ್ಬರಿಗೂ ನೋವಾಗದಂತೆ, ಜಮೀನು ಇಲ್ಲದವರಿಗೂ ಒಂದು ನೋವಾಗಬಾರದು, ಜಮೀನ್ದಾರರೂ ಸಹ ಹೆಚ್ಚು ಬಂಡವಾಳ ಹಾಕಿರುವುದರಿಂದ ಅವರ ಮನಸ್ಸಿಗೂ ಕೂಡ ಒಂದು ನೋವಾಗದಂತೆ ಉಭಯತ್ರರಿಗೂ ಸಮ್ಮತವಾದ ಒಂದು ಮಧ್ಯಮಾರ್ಗವನ್ನು ಕಂಡುಹಿಡಿಯಬೇಕು. ಉಭಯ ಪಾರ್ಟಿಗಳಲ್ಲೂ ಒಂದು ಹೃದಯ ವೈಶಾಲ್ಯತೆಯಿದ್ದರೆ ಅದೇನೂ ಅಂಥ ಕಷ್ಟದ ಕೆಲಸವಲ್ಲ. ಇದರಲ್ಲಿ ಏನೇ ಬದಲಾವಣೆಯಾದರೂ ಅದು ಉಭಯತ್ರರಿಗೂ ಒಂದು ಒಪ್ಪಂದದ ಮೂಲಕ ನಡೆಯುವುದು ಬಹಳ ಒಳ್ಳೆಯದು. ಅಂಥ ಒಂದು ಹಾದಿಯಲ್ಲಿ ಈ ಭೂಸಮಸ್ಯೆಯನ್ನು ವಿಮರ್ಶೆಮಾಡಿ ತಾವು ತರುವಂಥ ಬದಲಾವಣೆಗಳನ್ನು ತಂದರೆ ಆಗ ದೇಶದಲ್ಲಿ ಶಾಂತಿ-ಸಹನೆಗಳು ಕಲಕಿಹೋಗದೆ ನಮ್ಮ ಆಚರಣೆ ಇತರರಿಗೊಂದು ಮಾರ್ಗದರ್ಶನವಾಗಿರುತ್ತದೆ. ಆರೀತಿ ಈ ಭೂಸಮಸ್ಯೆ ಬಗ್ಗೆ ಒಂದು ಸುಗಮವಾದ ತೀರ್ಮಾನಕ್ಕೆ ಬರಲು ನಮ್ಮ ಮೈಸೂರು ದೇಶದಲ್ಲಿರತಕ್ಕ ಈ ಉಭಯ ಪಾರ್ಟಿಗಳ ಅಭಿಪ್ರಾಯಗಳನ್ನೂ ಸಮನ್ವಯಗೊಳಿಸಿ ಒಂದು ಹೊಂದಾವಣಿಕೆಗೆ ತರಬಲ್ಲಂಥ ಸಮಾಜ ಮುಖಂಡರುಗಳೆಲ್ಲ ಒಂದು ಕಡೆ ಸೇರಿ ಈ ಬಗ್ಗೆ ಒಂದು ಸಮಾಲೋಚನೆ ನಡೆಸುವುದು ಅಗತ್ಯ. ಉಭಯತ್ರರಲ್ಲೂ ಸೋತು ಗೆಲ್ಲಬೇಕೆಂಬ ಒಂದು ಮನೋಭಾವವಿದ್ದರೆ ಈ ಸಮಸ್ಯೆ ಬಹಳ ಸುಲಭವಾಗಿ ಬಗೆಹರಿಯಲು ಸಾಧ್ಯವಿದೆಯೆಂಬ ಅಂಶವನ್ನು ಎಲ್ಲರಿಗೂ ತೋರಿಕೊಡತಕ್ಕ ರೀತಿಯಲ್ಲಿ ಆ ಮುಖಂಡರು ಈ ಕೆಲಸವನ್ನು ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†Sri D. VENKATARAMIAH (Local Authorities' Constituency).—Mr. Chairman, Sir, perhaps I am the last member to speak on the Report. In the Introductory chapter of the Report of the Mysore Tenancy Agricultural Land Laws Committee you will find it stated that "the Committee shall examine the existing laws and practices in regard to the land tenancy in the several areas in the State and consistent with the recommendations of the Planning Commission suggest suitable measures for regulating land tenancies." So the most important point that has been emphasized in the order issued by Government is regarding land tenancy. Ownership is not the important point that has been stressed. The important point that has been stressed is land tenancy 'consistent with the recommendations of the Planning Commission'. The objectives of the Planning Commission in respect of land reforms are two in number, namely, (1) maximum food production and (2) equitable distribution of profits between the tenant and landlord as a matter of social justice. These two objectivers were in the mind of Government when they appointed this Committee. I may refer to three subjects in the terms of reference themselves, namely, (*e*) ceiling extent of land holdings, (*f*) fixing the extent of basic or economic and family holdings and (*g*) prohibition of land ownership.

I fail to understand the reasons that prompted the Government to refer this subject also for the consideration of the Committee. Nowhere, either in the Congress manifesto or in the reports of the Planning Commission, has this question of fixing or limiting ownership of land is mentioned. What is mentioned relates to production and equitable distribution among persons tilling the land. This is necessary in order to improve food production. But the suggestion with respect to the fragmentation of the holdings is contained in the Government Order which constituted the Committee. This, I submit, is because of the wrong approach of the Government. The half-hearted and ill-digested thinking on the part of the Government was responsible in putting down ceiling also as one of the subjects for discussion in the Committee. I would like to remind the House that 41 years ago, *i.e.*, in 1917, immediately after the so-called Russian revolution, a similar problem was sought to be solved by introducing land reforms, *i.e.*, by conferring ownership on the tillers of the soil. Two or three years later it was discovered that production did not increase. The intention to step up production by making the tiller the owner, to create greater enthusiasm in him, did not succeed. Then that great Russian, Lenin, wrote a book entitled "Two Steps Forward and one Step Backward." He said that conferring ownership on peasants was no good and the only remedy would be for Government to take over land: "Confiscate the whole property.", he

(SRI D. VENKATARAMIAH)

said, and the Government nationalised land. It now looks as though we are going the Russian way. Tomorrow, it would become an argument that since food production has retarded because of lack of incentive in the cultivators, Government itself would become the owner of all landed property. Unless the Government's objective is to ultimately nationalise all lands in the State, and cultivate them under their direct supervision, I find no valid reason given as to why they should attempt to impose ceilings and fragmentation of land holdings further. I would very respectfully submit that the Committee has made a very good mixture of the reforms of Bombay, U.P., Madras, Andhra and other States and brought out their own version. I feel they have not given their original thought to the subject. What is immovable property in India, in Mysore? What are the rights of the owner? What is the sanctity that people attach to land holdings In India? These vital questions have been ignored by the Committee. They have collected statistics from various States and brought out something which is at the best a sort of *via media*. It was unnecessary for the Committee to go on a four over the whole State and write this kind of Report. Some Secretary of the Mysore Government would have ably drafted the Report of this Committee. The Committee has not given theut most consideration to the subject that it deserves. No member of this House would express an opinion that food production should not increase or that there should not be proper distribution of profits. The only question is how best this can be achieved.

So far as increasing food production is concerned, I will give an instance of Kolar District. Will conferring ownership of land to the tenants, increase food production in this District? Definitely no. It is on the border of Rayalaseema. Production facilities could be developed only by sinking wells and by modernising methods of cultivation. Government could help by way of supply of good manure, sinking wells, giving subsidies and so on. Merely making the tenant the owner would not help food production. As a matter of fact, there are not very many big landholdings in Kolar.

So far as distribution of profits is concerned, it depends on the cost of production also. It also depends on the extent and nature of investments the land-owner has made. For the risk the owner takes, rent is fixed. This is only a minor matter. The fixity of tenure and fixing of rent on either side, is an easy matter. But fixing of ceilings as proposed by the Committee, is far removed from actual facts, from realism and such a step ignores the practical sides of the question. If there were real agriculturists or agricultural experts in the Committee this Report would have been different. This Report has no relevance to vital data and is contrary to practical experience. They have given some imaginary and arbitrary definitions about basic holding, family holding, etc. Even the calculations they have made and the conclusions they have arrived at are erroneous. For a family of five, the income per head would workout to Rs. 20 per mensem. In other words it is Re. 0-10-8 per day. What would be the result, just consider Mr. Chairman, in respect of the approach that the Committee has made? The Committee's mind looks as though it intends to make the Manager of the Joint Family equivalent to that of a labourer. His income is reduced to that of 10 annas 8 pies. What is the sin that he has committed, I am asking you, Mr. Chairman. He has purchased the land at a great cost; it has not been given to him by gift or otherwise. Perhaps he must have spent a lot of money on that. He has given a lot of money to the tenant also who is cultivating it. To say that 3½ family holdings will be the last limit and lands beyond that should be given to Government would amount to an expropriation of property, a legal robbery. If a man were to get into another man's house and take away any property, it will be called robbery and he will be sentenced to 7 years' imprisonment. But to pass

a law and say that one cannot have more, and the property beyond a certain limit should be given to Government which in its turn would give it to some other person, would be legal robbery. Mr. Chairman, supposing that land is given to another person. Will he himself cultivate that property unless that man is again helped by the Government ? If the Government does not give him any help, the land will again be forfeited to Government. The recommendation made by the Committee in respect of ceiling looks to be a communistic method of approach to the whole subject, Mr. Chairman. Perhaps what is working in their mind is, in view of the fact that the objective of the Constitution is socialistic pattern of society, why should a man have so much money and why should a man have so much of property ; let that be given to others. But that is not the way how a socialistic theory should be worked out. It is a wrong application, a mis-statement of socialism, as it were. There should be greater production and that production should be distributed between all persons and the property of another should not be take away either by force or by law, Mr. Chairman. We have passed the Inam Abolition Bill. It has become an Act. You know for the last 2½ years the hardship, the turmoil and the troubles that are being undergone not merely by the Jodidars but also by the tenants therein. The Jodidars are not given the compensation that they are entitled to. The tenants who are in possession of the property and who were cultivating the land and taking the profit are not giving the yield or any share of it to the Jodidars. Cases before the Inam Abolition Courts are pending for the last three years. Even such a small piece of legislation as that has not been implemented fully. It will take, I will assure you, Mr. Chairman, and the Treasury Benches, 20 years more to be fully implemented. As a person who is very familiar with these things, I submit that that cannot be finalised till about 20 years. Have we got the time and is it the opportune time and is there need for expropriation of property like this at this juncture ? Because regarding compensation, they say that they will be given some 4 per cent bonds and some other things instead of giving money itself. Even for implementation of the Five-Year Plan, we have no money, and we are going about begging. Now, to introduce such a kind of tenancy reform will result in making most confusion in the land tenure ; already sufficient confusion is existing ; if we are to implement the Report of the Committee, it will be creating more litigation and as such it will be a troublesome affair to the tenants themselves and also to the owners of the property then. Mr. Chairman, it may be argued that some of the tenants are in the agricultural sector and the tenants want the property to be made out in their name itself and so why not we let the landless persons have lands by this method ? My submission to you, Mr. Chairman, is that this question of having land and not having land, having money and not having money, these haves and have-nots exists in every sector; it not only exists in the agriculture sector, but it is also found in the industrial sector and in every field of practical life. So, if there is a person who has no land why not you entertain him in the industrial sector and give him employment ? Why only say you take away the land from another person and give it to him ? Finally coming to the creation of either Munsiff courts or land tribunals or land commissions, you as an experienced lawyer of 40 to 50 years standing know what an amount of confusion will be created by these complicated, not practical but utopian bodies ; I feel that sufficient thought has not been given to implement the recommendations. I would request the Government to shelve this Report on the question of ownership of land. That is all my request.

ಶ್ರೀ ಮುಕುಂದ ಮೈಲಾರಪ್ಪ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಜತ್ತಿ ಸಮಿತಿಯ ವರದಿಯ ಮೇಲೆ ಮಾನ್ಯ ಸದಸ್ಯರು ಕೂಲಂಕಷವಾಗಿ ವಿಮರ್ಶೆಮಾಡಿ ತಮ್ಮ ಭಾವನೆಗಳನ್ನು ಹೊರಪಡಿಸಿದ್ದಾರೆ. ಆದರೆ ನಾನು ಒಂದೆರಡು ಅಂಶಗಳನ್ನು ಮಾತ್ರ ಹೇಳುತ್ತೇನೆ. ಈ ವರದಿಗೆ ಅನುಮೋದನೆ ಮತ್ತು ಸ್ವಾಗತವನ್ನು ಬಯಸುತ್ತೇನೆ. ಈ ವರದಿಯನ್ನು ತಯಾರು ಮಾಡಿದವರಲ್ಲಿ ಅನೇಕರು ಪರಿಪೂರ್ಣ ಪಂಡಿತರು, ಜಮೀನ್ದಾರರು ಮತ್ತು

(ಶ್ರೀ ಮುಕುಂದ ಮೈಲಾರಪ್ಪ)

ಒಳ್ಳೆಯ ಅನುಭವಸ್ಥರು ಸೇರಿದ್ದಾರೆ. ಈ ಸಮಿತಿಯನ್ನು ನೇಮಕಮಾಡಿದ ಕೇವಲ ಕೆಲವು ದಿನಗಳಲ್ಲೇ ದೇಶದ ನಾನಾ ಭಾಗಗಳಲ್ಲಿ ತಿರುಗಿ ಮುಖ್ಯ ಮುಖ್ಯ ಸ್ಥಳಗಳಿಗೆ ಹೋಗಿ ಅಲ್ಲಿಯ ಸ್ಥಳದ ಮಹನೀಯರುಗಳನ್ನು ಭೇಟಿಮಾಡಿ ಭೂಮಾಲೀಕರನ್ನೂ ಗೇಣೀದಾರರನ್ನೂ ಮತ್ತು ರೈತರನ್ನೂ ವಿಚಾರಿಸಿ ತಮ್ಮ ವರದಿಯನ್ನು ತಯಾರಿಸಿದ್ದಾರೆ. ಸ್ವಾಮಿ, ನಾನು ಒಬ್ಬ ಹಿಂದುಳಿದ ಪಂಗಡದ ಪರವಾಗಿ ಈ ಸಭೆಗೆ ನದನ್ಯನಾಗಿದ್ದೇನೆ. ಮೈಸೂರು ದೇಶದಲ್ಲಿ ಶೇಕಡ 71 ಭಾಗ ವ್ಯವಸಾಯದಿಂದ ಜೀವನ ಮಾಡುತ್ತಿದ್ದಾರೆ. ಎಂದರೆ ಒಟ್ಟಿನಲ್ಲಿ ಈ ರಾಜ್ಯದ ಎರಡು ಕೋಟಿ ಜನರಲ್ಲಿ ಹರಿಜನ ಜನಾಂಗ 30 ಲಕ್ಷ ಇದ್ದಾರೆ. ಒಟ್ಟಿನಲ್ಲಿ ಎರಡುಕೋಟಿ ಜನತೆಯಲ್ಲಿ ಹರಿಜನರು 20 ಲಕ್ಷದಿಂದ 30 ಲಕ್ಷದವರೆಗಿದ್ದಾರೆ. ಅವರಲ್ಲಿ ಈ ವ್ಯವಸಾಯವನ್ನೇ (Labour Agriculturist) ಅವಲಂಬಿಸಿರುವ ಜನ ಶೇಕಡ 80 ರಷ್ಟು ಇದ್ದಾರೆ. ಅದರಿಂದ ಅವರ ಸ್ಥಿತಿಯನ್ನು ಉತ್ತಮಪಡಿಸುವ ನಲುವಾಗಿ ನಾವು ಸ್ವಾತಂತ್ರ್ಯವಾದನಂತರ ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿ ಹೊಸ ಸಮಾಜದ ರಚನೆಗೆ ಅನುಗುಣವಾಗಿ ಅನೇಕ ಮೂಲಭೂತವಾದ ತತ್ವಗಳನ್ನು ಮಾಡಲು ಹೊರಟ್ಟಿದ್ದೇವೆ. ಹೊಸ ಹೊಸ ಕಾರ್ಯಗಳನ್ನು ಮಾಡಲು ಹೊರಟಿದ್ದಾರೆ. ಈ ಹೊಸ ಸಮಾಜ ರಚನೆಗಾಗಿ ಸರ್ಕಾರ ಈಗ ಈ ಭೂಶಾಸನದ ವಿಚಾರವನ್ನು ಪರಿಶೀಲನೆಮಾಡುತ್ತಾ, ನಮ್ಮ ರಾಜ್ಯಪಾಲರೂ ಅವರ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ.

"ಉಳುವವನೇ ಭೂಮಿಯ ಒಡೆಯನಾಗಿರಬೇಕೆಂಬುದು ಸರ್ಕಾರದವರ ಅಂಗೀಕೃತವಾದ ಕಾರ್ಯನೀತಿ" ಎಂದು ಇಲ್ಲಿ ಒಪ್ಪಿಕೊಂಡಿದ್ದಾರೆ. ಆದುದರಿಂದ ಈ ಜಿತ್ತಿ ಸಮಿತಿ ವರದಿಯನ್ನು ಸ್ವಲ್ಪ ಹೆಚ್ಚು ಕಡಮೆ ಒಪ್ಪಿಕೊಂಡಂತಾಗಿದೆ. ಆದ್ದರಿಂದ ಈ ವರದಿಯನ್ನು ಸ್ವಾಗತ ಮಾಡುತ್ತಿದ್ದೇನೆ. ಭೂಮಿಯನ್ನೇ ನಂಬಿರುವವರಿಗೆ ಭೂಮಿಯನ್ನು ಕೊಡುವುದರಿಂದ ಬಹಳ ಉತ್ತಮವಾಗುತ್ತದೆ. ಇಷ್ಟನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಸಭಾಪತಿಯವರು.—ಈ ಠರಾವಿನ ಮೇಲೆ ಸುಮಾರು 31 ಜನ ಮಾನ್ಯ ಸದಸ್ಯರು ಭಾಷಣ ಮಾಡಿದ್ದಾರೆ. ಇದರಿಂದ ಈ ರಿಪೋರ್ಟಿನ ಮೇಲೆ ಕೂಲಂಕಷವಾಗಿ ಚರ್ಚೆಯಾಗಿದೆ ಎಂದು ಹೇಳಬಹುದು; ಮತ್ತು ಈ ದಿವಸ ಈ ಚರ್ಚೆ ಮುಕ್ತಾಯಗೊಳ್ಳುತ್ತದೆ. ಈ ಸಂದರ್ಭದಲ್ಲಿ ಸಭೆಯ ಮಾನ್ಯ ಸದಸ್ಯರು ಸಹಕರಿಸಿ ತಮ್ಮ ಮನಸ್ಸನ್ನು ಬಿಚ್ಚಿ ತಮ್ಮ ಅನುಭವಗಳಿಂದ ಕೂಡಿದ ಅಭಿಪ್ರಾಯಗಳನ್ನು ಕೊಟ್ಟು ಟೀಕಿಸಿ ಸೂಕ್ತ ಸಲಹೆಗಳನ್ನೂ ಕೊಟ್ಟಿದ್ದಾರೆ. ಇವೆಲ್ಲವನ್ನೂ ಪರಿಶೀಲನೆಮಾಡಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಭರವಸೆಯನ್ನು ಸರ್ಕಾರದವರೂ ವ್ಯಕ್ತಪಡಿಸಿದ್ದಾರೆ. ಇಲ್ಲಿಗೆ ಈ ಜಿತ್ತಿ ಸಮಿತಿಯ ವರದಿಯ ಚರ್ಚೆ ಮುಕ್ತಾಯವಾಗುತ್ತದೆ.

ಇನ್ನು ನಮ್ಮ ಮುಂದಿನ ಕಾರ್ಯಕ್ರಮ ಹೀಗಿದೆ ಎನ್ನುವುದನ್ನು ತಮ್ಮ ಮುಂದೆ ತಿಳಿಸಬೇಕಾಗಿದೆ.

ಮಾರ್ಚ್ 11 ನೆಯ ತಾರೀಖು ಅಡಿಷನಲ್ ಗ್ರಾಂಟ್ಸ್ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳುವುದು. ಮಾರ್ಚ್ 12 ನೆಯ ತಾರೀಖು ಬಡ್ಜೆಟ್ಟನ್ನು ಸಭೆಗೆ ಒಪ್ಪಿಸುವ ನಿರೀಕ್ಷೆಯಿದೆ. ಅದು ಒಪ್ಪಿಸಿದ ಮೇಲೆ ಕೆಲವು ಮನೂದೆಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ. 12, 13, 14 ನೆಯ ತಾರೀಖುಗಳಲ್ಲಿ ಈ ಬಿಲ್ಲುಗಳನ್ನು ಪೂರೈಸಲು ಅವಕಾಶವಾಗುತ್ತದೆ. 15 ನೆಯ ತಾರೀಖು ಖಾಸಗಿ ನಿರ್ಣಯಗಳನ್ನು ತೆಗೆದುಕೊಳ್ಳರಾಗಿದೆ.

16ನೆಯ ತಾರೀಖು ಭಾನುವಾರ ರಜಾದಿನವಾಗಿದೆ.

17ನೆಯ ತಾರೀಖು II Five-Year Plan ಮೇಲೆ ಒಂದು ಠರಾವು ಬಂದಿದೆ. ಅದನ್ನು ಚರ್ಚೆಗೆ ತೆಗೆದುಕೊಳ್ಳೋಣವೆಂದಿದೆ.

18ನೆಯ ತಾರೀಖು ಅಡಿಷನಲ್ ಗ್ರಾಂಟುಗಳ ಅಪ್ರೋಪ್ರಿಯೇಷನ್ನು ಬಿಲ್ಲುಗಳು. ಇದನ್ನು ಚರ್ಚಿಸಿ ಪೂರ್ಣ ಮಾಡಲು ಅವಕಾಶವಾಗುತ್ತದೆ.

19, 20, 21, 22, 23 ಮತ್ತು 24 ರಜಾದಿನಗಳು.

25ನೆಯ ತಾರೀಖು ಮತ್ತೆ ಸಭೆ ಸೇರಿ ಜಡ್ಜೆಟ್ಟಿನ ಸಾಮಾನ್ಯ ಚರ್ಚೆ ನಡೆಯುವುದು. ಈ ಸಾಮಾನ ಚರ್ಚೆಯನ್ನು 26, 27, 28 ಮತ್ತು 29 ರ ವರೆಗೆ ತೆಗೆದುಕೊಳ್ಳಲು ಅನುಕೂಲವಾಗುತ್ತದೆ.

ಈ ರೀತಿಯಾಗಿರುವ ಕಾರ್ಯಕ್ರಮ ಸರ್ವರೂ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ.

18ನೆಯ ತಾರೀಖಾದ ಮೇಲೆ 19ರಿಂದ 25 ರವರೆಗೆ ಮಾನ್ಯ ಸದಸ್ಯರು ಹಬ್ಬಕ್ಕಾಗಿ ಊರಿಗೆ ಹೋಗುವವರಿಗೆ ಅನುಕೂಲವಾಗುತ್ತದೆ.

ಇಪ್ಪೊತ್ತಿನ ಸಭೆ ಇಂದಿಗೆ ಮುಕ್ತಾಯವಾಗುತ್ತದೆ. ಮತ್ತೆ ನಾಳೆ ಎಂದರೆ 11-3-1958 ರಂದು ಪೂರ್ 2-15 ಗಂಟೆಗೆ ಸೇರುತ್ತದೆ.

The House adjourned at Six of the Clock to meet again at Fifteen Minutes past Two of the Clock on Tuesday, the 11th March 1958.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಸ್ವಾಪ್ತಿ ಕ್ರಮಾಂಕ Accession No (B) 4743
ದಿನಾಂಕ Date.....